॥ ಪ್ರಸೀದತು ಶ್ರೀ ವೀರಾಂಜನೇಯಃ ॥

ಶ್ರೀ ಕ್ಷೇತ್ರ ಬಂಗಾರಮಕ್ಕಿಯಿಂದ ಹೊರಬರುವ ಧಾರ್ಮಿಕ, ಪಾರಮಾರ್ಥಿಕ, ನೈತಿಕ ಹಾಗೂ ಲೋಕ ಹಿತಚಿಂತನೆಗಳ ಮಾಸಪತ್ರಿಕೆ

# ಹೇಮಪುರ

# HEMAPURA

Sri Kshethra Bangaramakki
Post Gerasooppa - 581 384
Honnavara Taluk, Uttara Kannada Dist.

ಗೌರವ ಸಂಪಾದಕರು:
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
ಧರ್ಮಾಧಿಕಾರಿಗಳು
ಶ್ರೀ ಕ್ಷೇತ್ರ ಬಂಗಾರಮಕ್ಕಿ

ಸಂಪಾದಕರು:
**ತೇಜಸ್ವಿ**

ಸಲಹೆಗಾರರು:
**ಶ್ರೀ ರಾಮಚಂದ್ರ ಭಟ್ಟರು,** ಶ್ರೀ ಕ್ಷೇತ್ರ ಬಂಗಾರಮಕ್ಕಿ
**ಶ್ರೀ ರವೀಶ,** ವಕೀಲರು, ಸಾಗರ
**ಶ್ರೀ ನಾಗರಾಜ್ ನಾಯಕ್,** ವಕೀಲರು, ಕಾರವಾರ
**ಶ್ರೀ ನಾಗರಾಜ್ ಶೇಟ್,** ಶಿರಸಿ
**ಶ್ರೀ ಭೋಗಾನಂದ,** ಶಿವಮೊಗ್ಗ
**ಶ್ರೀ ಪ್ರವೀಣ್,** ಬೆಂಗಳೂರು
**ಶ್ರೀ ಜಿ.ಎಚ್. ನಾಯ್ಕ್,** ಹೊನ್ನಾವರ
**ಶ್ರೀ ಕೆ. ಮನೋಹರ್,** ಬೆಂಗಳೂರು
**ಶ್ರೀ ಡಿ.ಎಂ. ಸತೀಶ್,** ತುಮಕೂರು

ಸಲಹೆಗಾರರು:
**ಆಸೇತು ಪ್ರಕಾಶನ**
ಶ್ರೀ ಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ–581 384.
ತಾ: ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.
ಪರವಾಗಿ: ವೆಂ.ಭ. ವಂದೂರು
ದೂ: 08387–268544, 268333, 268545

ವಿನ್ಯಾಸ ಮತ್ತು ಅಕ್ಷರ ಜೋಡಣೆ:
**ಶ್ರೀ ವೀರಾಂಜನೇಯ ಗ್ರಾಫಿಕ್ಸ್, ಬಂಗಾರಮಕ್ಕಿ**

ಮುದ್ರಕರು:
**ಶ್ರೀ ವೀರಾಂಜನೇಯ ಪ್ರಿಂಟರ್ಸ್, ಬಂಗಾರಮಕ್ಕಿ**

## ಒಳಪುಟಗಳಲ್ಲಿ

ಸಚ್ಚಿಂತನ ........ 2
ಸಂಪಾದಕೀಯ ........ 3
ವಕಾಲತ್ ........ 4
ಆಚಾರ–ವಿಚಾರ ........ 5
ಚಿಂತನ–ಮಂಥನ ........ 6
ಸಂದೇಶ ಸನ್ನಿಧಿ ........ 6
ಮಕ್ಕಳಿಗಾಗಿ ನೀತಿ ಕಥೆಗಳು ........ 8
ಬದುಕಲೊಂದಿಷ್ಟು ಆಪ್ತಮಾತುಗಳು ........ 9
ಶ್ರೀಧರ ಸ್ಮರಣೆ ........ 10
ಸಂಪ್ರದಾಯ ........ 10
ಭಾರತ ದರ್ಶನ ........ 12
ಧರೆಗಿಳಿದ ದಿವ್ಯತೇಜ... ........ 14
ವಚನಭಾಗವತ ........ 16
"ಶಿಕ್ಷಕ–ಪಾಲಕ–ವಿದ್ಯಾರ್ಥಿ" ಪುನಶ್ಚೇತನ ಶಿಬಿರ ........ 19
2015–16ನೇ ಸಾಲಿನ ವಾರ್ಷಿಕ ಕ್ರೀಡಾಕೂಟದ ವರದಿ ........ 20
ಸುಂದರಕಾಂಡದ ಸೌಂದರ್ಯ ........ 20
ಪದಬಂಧ–7 ........ 24

### ಹೇಮಪುರ ಘನ ಗಂಭೀರ

ಘನವಂತ ಬಲವಂತ ಇಷ್ಟಾರ್ಥ ದಾತ
ಭಕ್ತವತ್ಸಲನೆಂಬ ಬಿರುದು ಹೊತ್ತಾತ
ವೀರಾಂಜನೇಯನಿವ ತನ್ನ ಸೇವಿಸುವ
ಭಕ್ತರನು ಉದ್ಧರಿಸಿ ಗುರಿಯ ಮುಟ್ಟಿಸುವ.

ದರ್ಶನದ ಲಾಭವಿದೆ ತಾಪಕಿದೆ ಪರಿಹಾರ
ಹರ್ಷವೇ ಮೈವೆತ್ತಿ ನರ್ತಿಸುವುದಿಲ್ಲಿ
ಆಕರ್ಷಣೀಯವಹ ಲೋಕಹಿತ ಕಾರ್ಯಗಳ
ವರ್ಷದುದ್ದಕು ನಡೆಸುತಿಹನು ಮಾರುತಿಯು

**ಪ್ರಕಟಣೆ : ಪತ್ರಿಕೆಯು ಪ್ರಕಟವಾದ ಒಂದು ವಾರದಲ್ಲಿ ನಮ್ಮ ಅಂತರ್ಜಾಲದಲ್ಲೂ ಲಭ್ಯ www.bangaramakki.org**



ಫಿಲ್ಮ್ ಮತ್ತು ಫೋಟೋಗ್ರಾಫಿಕ್ ವಸ್ತುಗಳು – ಕೊಡಕ್

ಸಚ್ಚಿಂತನ...

# "ತ್ವಮೇಕ ಏವಾಸ್ಯ"



ಏಕಾಯ ನೋಽಸೌ ದ್ವಿಫಲಸ್ತ್ರಿಮೂಲಃ
ಚತೂರಸಃ ಪಂಚಶಿಫಃ ಷಡಾತ್ಮಾ।
ಸಪ್ತತ್ವಗಷ್ಟ ವಿಟಪೋನವಾಕ್ಷೋ
ದಶಚ್ಛದೋ ದ್ವಿಖಗೋಹ್ಯಾದಿವೃಕ್ಷಃ॥

ಈ ಸಂಖ್ಯಾಮಯ ಅನುಭಾವ ಶ್ಲೋಕದಲ್ಲಿ ಇಡಿಯ ಸಂಸಾರವನ್ನು, ಇಡಿಯ ವಿಶ್ವವನ್ನು ನಿಯಂತ್ರಿಸುವ ಭಗವಚ್ಛಕ್ತಿಯ ರಹಸ್ಯ ಅಡಗಿದೆ. ಇಡಿಯ ಜಗತ್ತಿನ ರಹಸ್ಯವನ್ನು ನಿರೂಪಿಸಲು ಎಷ್ಟು ಸಂಖ್ಯೆ ಬೇಕು? 1 ರಿಂದ 10 ರ ತನಕ-ಕೂಡಿಸಿದರೆ ಎಷ್ಟು? 55 ಇದೇ ವಿಶ್ವದ ರಹಸ್ಯ ಸಂಖ್ಯೆ.

ಒಂದು ಕೈಯಲ್ಲಿ 5 ಬೆರಳು ಇನ್ನೊಂದು ಕೈಯಲ್ಲಿ 5 ಬೆರಳು ಕೂಡಿಸಿದರೆ 10. ಅಕ್ಕ ಪಕ್ಕದಲ್ಲಿ ಹಿಡಿದರೆ 55. ಒಂದರಿಂದ 10ರ ತನಕ ಸಾಲಾಗಿ ಕೂಡಿಸಿದರೆ ಬರುವ ಮೊತ್ತ 10. ಇದೇ ವಿಶ್ವದ ವಿಶ್ಲೇಷಣೆಯ ಸಂಖ್ಯೆಗಳ ಮೊತ್ತವೂ ಹೌದು.

ಒಂದು ಮೂಲದಿಂದ ಈ ವಿಶ್ವ ಎನ್ನುವ ವೃಕ್ಷ ಬೆಳೆದು ಬಂದಿದೆ. ಮರ ಬೆಳೆಯಲು ನೆಲಬೇಕು. ಬೀಜ ಬಿತ್ತಲು ಆಧಾರ ಬೇಕು. ಹಾಗೆಯೇ ಈ ವೃಕ್ಷಕ್ಕೂ ಒಂದು ಆಧಾರ ಒಂದು ಮೂಲ ಉಂಟು. ಆ ಆಧಾರದಲ್ಲಿ ಬಿತ್ತಿದ ಬೀಜ ಮತ್ತೆ ಮರಕ್ಕೆ ಮೂಲ.

ಒಂದು ಮೂಲದಿಂದ ಮೂಡಿಬಂದ ಈ ಮರದಲ್ಲಿ ಎರಡು ಹಣ್ಣುಗಳು, ಇದಕ್ಕೆ ಮೂರು ಬೇರುಗಳು, ನಾಲ್ಕು ಚಿಗುರುಗಳು(ರಸಗಳು), ಐದು ಬೀಳಲುಗಳು, ಆರು ವಿಕಾರಗಳು, ಏಳು ತೊಗಟೆಗಳು, ಎಂಟು ಟೊಂಗೆಗಳು, ಒಂಭತ್ತು ಪೊಟರೆಗಳು, ಹತ್ತು ಎಲೆಗಳು ಹೀಗೆ 10ರ ಲೆಕ್ಕಾಚಾರದಲ್ಲಿ ವಿಶ್ವವೇ ತುಂಬಿಕೊಂಡಿದೆ. ಈ ಅನಾದಿವೃಕ್ಷದಲ್ಲಿ ಎರಡು ಬಗೆಯ ಹಕ್ಕಿಗಳು ಕೂತು ಹಣ್ಣುಗಳನ್ನು ಸವಿಯುತ್ತವೆ. ಈ ವೃಕ್ಷವೇ ಬ್ರಹ್ಮಾಂಡ. ಈ ವೃಕ್ಷವೇ ಪಿಂಡಾಂಡ.

ಏನು ಈ 1.2.3.4..... ಅಂದರೆ? ಈ ಜಗತ್ತು ಮೊದಲು ಹೇಗಿತ್ತು? ಏನಿತ್ತು ? ಮೂಲ ಪ್ರಕೃತಿಯಿಂದ ಮೊದಲ ಸೃಷ್ಟಿ ಮಹತ್ತತ್ತ್ವ, ಅದರಿಂದ ಅಹಂಕಾರತತ್ತ್ವ, ಅಲ್ಲಿಂದ ಪಂಚಭೂತಗಳು, ಇಂದ್ರಿಯಗಳು, ಮನಸ್ಸು ಇತ್ಯಾದಿ. ಅದರಿಂದ ಈ ಎಲ್ಲಾ ಸೃಷ್ಟಿಗೂ ಮೂಲಕಾರಣ ಮೂಲ ಪ್ರಕೃತಿ. ವಿಶ್ವದಬೀಜ ಇದೇ ಏಕಾಯನ.

**ದ್ವಿಫಲ:** ಎರಡು ಹಣ್ಣುಗಳು: ಪ್ರವೃತ್ತಿಮಾರ್ಗ ಮತ್ತು ನಿವೃತ್ತಿ ಮಾರ್ಗ. ಪ್ರಾಪಂಚಿಕ ಮುಖ ಮತ್ತು ಪಾರಮಾರ್ಥಿಕ ಮುಖ. ಅಸುರೀ ಪ್ರವೃತ್ತಿ ಮತ್ತು ದೈವೀ ಪ್ರವೃತ್ತಿ.

**ತ್ರಿಮೂಲ:** ಮೂರು ಬೇರುಗಳು: ಸತ್ವ, ರಜ, ತಮ ಈ ಮೂರು ಗುಣಗಳೇ ಮರದ ಮೂರು ಬೇರುಗಳು. ಪ್ರತಿಯೊಬ್ಬನ ಜೀವನವೂ ಈ ಮೂರು ಗುಣಗಳ ಪ್ರಭಾವಲಯದಲ್ಲೇ ನಡೆಯುತ್ತಿರುತ್ತದೆ. ತುಂಬಾ ಸಾತ್ವಿಕನಲ್ಲೂ ಆಗೊಮ್ಮೆ ಈಗೊಮ್ಮೆ ರಾಜಸ-ತಾಮಸ ಸ್ವಭಾವಗಳು ಕಂಡುಬರುವುದುಂಟು. ತಾಮಸದಲ್ಲೂ ಸಾತ್ವಿಕತೆಯ ಅಂಶ ವ್ಯಕ್ತವಾಗುವುದುಂಟು. ಒಂದು ಹೆಚ್ಚು ಅಥವಾ ಒಂದು ಕಮ್ಮಿ. ಅಂತೂ ಮೂರೂ ಹೆಣೆದುಕೊಂಡೇ ಮನುಷ್ಯನನ್ನು ನಿಯಂತ್ರಿಸುತ್ತವೆ. ಉದಾಹರಣೆಗೆ ಕಂಸನು ದೇವಕಿಯ ಮಕ್ಕಳನ್ನು ಚಚ್ಚಿ ಕೊಂದ ನೀಚ; ಮಹಾ ತಾಮಸ. ಆದರೆ ಕೊನೆಗೆ ತಂಗಿಯ ಬಳಿ ಬಂದು ಹೇಳಿದ, "ಯಾರ ಬದುಕು ಸ್ಥಿರ! ನನ್ನನ್ನು ಕ್ಷಮಿಸು". ನಾನು ಬದುಕಬೇಕು ಎನ್ನುವ ಆಸೆಯಿಂದ ನಿನ್ನ ಮಕ್ಕಳನ್ನು ಕೊಂದೆ. ಆದರೆ ಯಾರು ಶಾಶ್ವತ ಈ ಜಗತ್ತಿನಲ್ಲಿ? ಭಗವದಿಚ್ಛೆಯಂತೆ ಈ ಜಗತ್ತು ನಡೆಯುತ್ತಿದೆ. ಯಾವುದೋ ಕ್ಷಣಿಕ ಆವೇಶದಲ್ಲಿ ನಿನಗೆ ಅನ್ಯಾಯ ಮಾಡಿದೆ. ಅದು ಒಂದು ಭಗವದಿಚ್ಛೆಯೇನೋ? ನಾವೆಲ್ಲ ಸುಮ್ಮನೆ ಹಾರಾಡುವುದು. ನನ್ನ ತಪ್ಪಿಗೆ ಕ್ಷಮೆ ಇರಲಿ ಎಂದು ಕೇಳಿದ. ಅಂದರೆ ಕಂಸನ ಜೀವನದಲ್ಲೂ ಸಾತ್ವಿಕ ಕ್ಷಣಗಳು! ಯಾವ ಕ್ಷಣದಲ್ಲಿ ಯಾವ ಗುಣದ ಪ್ರಭಾವ ಹೆಚ್ಚೋ ಆಗ ಅದಕ್ಕೆ ತಕ್ಕಂತೆ ನಡೆದುಕೊಳ್ಳುತ್ತೇವೆ. ಈ ಗುಣಗಳ ಬಂಧನವೇ ಸಂಸಾರ. ಇಲ್ಲಿರುವಷ್ಟು ಕಾಲ ಇವುಗಳ ಪ್ರಭಾವವನ್ನು ಮೀರಿ ನಿಲ್ಲುವುದು ಅಸಾಧ್ಯ. ಇನ್ನು ಮರದ ಹಣ್ಣಿಗೆ ನಾಲ್ಕು ಬಗೆಯ ರಸಗಳು; ಧರ್ಮ, ಅರ್ಥ, ಕಾಮ, ಮೋಕ್ಷ. ಎರಡು ಬಗೆಯ ಹಣ್ಣಿನಲ್ಲಿ ನಾಲ್ಕು ಬಗೆಯ ರುಚಿಗಳು. ಪ್ರವೃತ್ತಿ ಮಾರ್ಗದ ಹಣ್ಣಿನಲ್ಲಿ ಅರ್ಥ-ಕಾಮಗಳು. ನಿವೃತ್ತಿ ಮಾರ್ಗದ ಹಣ್ಣಿನಲ್ಲಿ ಧರ್ಮ-ಮೋಕ್ಷಗಳು. ಒಮ್ಮೊಮ್ಮೆ ಧರ್ಮ ಪ್ರವೃತ್ತಿಯ ರಸವೂ ಆದೀತು. ಹೀಗೆ ಚತೂರಸಃ.

**ಐದು ಬಗೆಯ ಬೀಳಲುಗಳು:** ಪಂಚಶಿಫಃ, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚತನ್ಮಾತ್ರೆಗಳೇ ಈ ಆಲದಮರದ ಬೀಳಲುಗಳು. ಆಕಾಶದಿಂದ ಶಬ್ದ, ವಾಯುವಿನಿಂದ ಸ್ಪರ್ಶ, ಬೆಂಕಿಯಿಂದ ರೂಪ, ನೀರಿನಿಂದ ರಸ, ಮಣ್ಣಿನಿಂದ ಗಂಧ ಇವುಗಳನ್ನು ಗ್ರಹಿಸಲಿಕ್ಕೆ ನಮಗೆ ಐದು ಇಂದ್ರಿಯಗಳು. ಶಬ್ದಕ್ಕೆ ಕಿವಿ, ಸ್ಪರ್ಶಕ್ಕೆ ತೊಗಲು, ರೂಪಕ್ಕೆ ಕಣ್ಣು, ರಸಕ್ಕೆ ನಾಲಿಗೆ, ಗಂಧಕ್ಕೆ ಮೂಗು, ಪಂಚತನ್ಮಾತ್ರೆಗಳು, ಅವುಗಳಿಂದ ಪಂಚಭೂತಗಳು, ಇವುಗಳನ್ನು ಅನುಭವಿಸಲು ಪಂಚೇಂದ್ರೀಯಗಳು.

**ಷಡಾತ್ಮಾ:** ಈ ವೃಕ್ಷ ಆರು ಬಗೆಯ ವಿಕಾರಗಳಿಗೆ ಒಳಪಡುವ ಸ್ವಭಾವವುಳ್ಳದ್ದು.

(1) ಹುಟ್ಟುವುದಕ್ಕಿಂತ ಮೊದಲಿನ ಸ್ಥಿತಿ ಗರ್ಭದಲ್ಲಿ ಇರುವಿಕೆ. ಅಸ್ತಿ (2) ಹುಟ್ಟುವುದು 2ನೇ ಹಂತ. ಜಾಯತೇ (3)ಹುಟ್ಟಿದ್ದು ಬೆಳೆಯುತ್ತದೆ. 3ನೇ ವಿಕಾರ ವರ್ಧತೆ (4) ಬೆಳೆಯುತ್ತಾ ರೂಪಾಂತರಗೊಳ್ಳುವುದು ಇದು ನಾಲ್ಕನೇ ವಿಕಾರ ವಿಪರಿಣಮತೇ (5) ಬೆಳೆದ ಬೆಳವಣಿಗೆ ಇಳಿಮುಖವಾಯಿತು. ಕೂದಲು ಉದುರುವುದು, ಹಲ್ಲು ಉದುರುವುದು, ಮೈನೆರೆಗಟ್ಟುವುದು, ಬೆಳೆಯಲಿಕ್ಕೆ



ವಿದ್ಯುದಾಕರ್ಷಕದ ಮೂಲ ನಿಯಮಗಳು - ಕೂಲಾಂಬ್

ಹತ್ತಿದವ ಈಗ "ಇಳಿಯಲಿಕ್ಕೆ ಹತ್ತಿದ". ಇದು ಐದನೇ ವಿಕಾರ. ಅಪಕ್ಷೀಯತೇ (6) ಕೊನೆಗೊಮ್ಮೆ ನಾಶವಾಗುವುದು ಇದು ಕೊನೆಯ ಆರನೇ ವಿಕಾರ. "ನಶ್ಯತಿ".

ಈ ವೃಕ್ಷಕ್ಕೆ ಏಳು ತೊಗಟೆಗಳೂ ಸಪ್ತತ್ವಕ್; ನಮ್ಮ ದೇಹದ ಸಪ್ತಧಾತುಗಳೇ ಈ ಏಳು ತೊಗಟೆಗಳು; ತ್ವಕ್ ಚರ್ಮ, ಮಾಂಸ ಚರ್ಮ, ಮಾಂಸ, ರುಧಿರ, ಮಜ್ಜಾ, ಮೇಧಸ್ಸು ಮತ್ತು ಅಸ್ಥಿ.

ಎಂಟು ಟೊಂಗೆಗಳು; "ಅಷ್ಟವಿಟಪಃ" ಜೀವಸೃಷ್ಟಿಯ ಎಂಟು ಪ್ರಕಾರಗಳು: ದೇವತೆಗಳು, ಗಂಧರ್ವರು, ದಾನವರು, ರಾಕ್ಷಸರು, ಪಿಶಾಚಿಗಳು, ತಿರ್ಯಗ್‌ಜಂತುಗಳು, ಸ್ಥಾವರಗಳು ಮತ್ತು ಮನುಷ್ಯರು.

ಒಂಬತ್ತು ಪೊಟರೆಗಳು: "ನವಾಕ್ಷಃ" ಪುರಂಜನೋಪಾಖ್ಯಾನದ ಒಂಭತ್ತು ದ್ವಾರಗಳೇ ಇಲ್ಲಿಯ ಒಂಭತ್ತು ಪೊಟರೆಗಳು. ಎರಡು ಕಣ್ಣು, ಎರಡು ಕಿವಿ, ಎರಡು ಮೂಗಿನ ಹೊರಳೆಗಳು, ಒಂದು ಬಾಯಿ ಮತ್ತು ಮಲ ಮೂತ್ರ ದ್ವಾರಗಳು.

ಹತ್ತು ಎಲೆಗಳು; "ದಶಚ್ಛದಃ". ಹತ್ತು ಇಂದ್ರಿಯಗಳೇ ಹತ್ತು ಎಲೆಗಳು. ಐದು ಜ್ಞಾನೇಂದ್ರಿಯ, ಐದು ಕರ್ಮೇಂದ್ರಿಯಗಳು ಇಂದ್ರಿಯ ಗೋಲಕಗಳೇ ಪೊಟರೆಗಳು. ಇಂಥ ಈ ಮರವೇ "ದ್ವಿಖಗ". ಇಲ್ಲಿ ಎರಡು ಬಗೆಯ ಹಕ್ಕಿಗಳು ವಾಸವಾಗಿವೆ. ಎರಡು ಬಗೆಯ ಹಣ್ಣುಗಳನ್ನು ತಿನ್ನಲು ಎರಡು ಬಗೆಯ ಹಕ್ಕಿಗಳು ಪ್ರವೃತ್ತಿಮಾರ್ಗಿಗಳು ಮತ್ತು ನಿವೃತ್ತಿ ಮಾರ್ಗಿಗಳು. ಸಂಸಾರಿಗಳೇ ಪ್ರವೃತ್ತಿ ಮಾರ್ಗಿಗಳು, ಮೋಕ್ಷಾಕಾಂಕ್ಷಿಗಳೇ ನಿವೃತ್ತಿ ಮಾರ್ಗಿಗಳು. ಇದುವೇ ಆದಿವೃಕ್ಷ. ಪಿಂಡಾಂಡದಿಂದ ಬ್ರಹ್ಮಾಂಡದವರೆಗೆ ಹರವಿನಿಂತ ಸಂಸಾರ ವೃಕ್ಷ.

ಹೀಗೆ 1ರಿಂದ10 ರ ತನಕ 55 ಮಜಲುಗಳಲ್ಲಿ ಹರವಿಕೊಂಡ ಸಮಸ್ತ ಚರಾಚರ ಪ್ರಪಂಚಕ್ಕೆ ಭಗವಂತನೊಬ್ಬನೇ ನಿಯಾಮಕ.

**ತ್ವಮೇಕ ಏವಾಸ್ಯ ಸತಃ ಪ್ರಸೂತಿಃ ಸ್ಥಾನಂನಿಧಾನಂ ತದನುಗ್ರಹಶ್ಚ|**
**ತ್ವನ್ಮಾಯಯಾ ಸಂವೃತ ಚೇತಸಸ್ತ್ವಾಂ ಪಶ್ಯಂತಿ ನಾನಾನವಿಪಶ್ಚಿತೋಯೇ॥**

ಇದು ನಿನ್ನ ಸೃಷ್ಟಿ, ಆದ್ದರಿಂದ ಇದಕ್ಕೊಂದು ವಾಸ್ತವವಾದ ಅಸ್ತಿತ್ವವಿದೆ. ಇದು ಮಾಯೆಯಲ್ಲ. ಸ್ಪಷ್ಟವಾದ ಜಗತ್ತನ್ನು ಧಾರಣೆ ಮಾಡಿ ರಕ್ಷಿಸುವವನೂ ನೀನೆ. ಸಂಸಾರ ಮಾಡುವವನೂ ನೀನೆ ನಿನ್ನ ಅನುಗ್ರಹದಿಂದಲೇ ಎಲ್ಲಾ ನಡೆದಿದೆ. ಜಗತ್ತಿನ ಎಲ್ಲ ವಸ್ತುಗಳು, ಎಲ್ಲ ಕ್ರಿಯೆಗಳು, ಕಾಲ ಸ್ವಭಾವಗಳೂ, ಎಲ್ಲವೂ, ಎಲ್ಲರೂ, ನಿನ್ನ ನಿಯಂತ್ರಣಕ್ಕೊಳಪಟ್ಟವರೇ. ನಿನ್ನ ಅನುಗ್ರಹ ಇಲ್ಲದಿರುವಾಗ ಯಾವೂದೂ ಇಲ್ಲ ಎಂಬ ಸಂಖ್ಯಾಸೂತ್ರದ ತಿರುಳನ್ನು ಅರಿತು ಬಾಳೋಣ.

ಶ್ರೀರಾಮಸ್ಮರಣಂ

**ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು**

ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ, ಬಂಗಾರಮಕ್ಕಿ

* * * * * * * * * * * * * *

ಸಂಪಾದಕೀಯ...

# ಸಂಸ್ಕಾರ ಮತ್ತು ಸಂಸ್ಕೃತಿ

ಈ ಸಮಾಜದಲ್ಲಿ ಹಿರಿಯರು ಮಕ್ಕಳಿಗೆ ಸಂಸ್ಕಾರವಂತರಾಗಿ ಬಾಳಿ ಎಂದು ಹರಸುತ್ತಾರೆ. ಸಂಸ್ಕಾರವೆಂದರೆ, ಉತ್ತಮ ನಡತೆ, ಗುರುಹಿರಿಯರಲ್ಲಿ ಭಕ್ತಿ ಗೌರವ, ಒಳ್ಳೆಯ ಮಾತು, ನಾಗರಿಕತೆ ಇದೇ ಉತ್ತಮ ಸಂಸ್ಕಾರಗಳು. ತಾಯಿಯ ಮಡಿಲನ್ನು ಸೇರಿದಾಗಿನಿಂದ ಭೂಮಿಯ ಮಡಿಲನ್ನು ಸೇರುವವರಿಗೆ ಸಂಸ್ಕಾರವನ್ನು ಕೊಡಬೇಕು ಇದು ಮನುಷ್ಯ ಧರ್ಮ. ಈಗ ನಾವು ದಿನ ನಿತ್ಯ ಉಪಯೋಗಿಸುವ ಆಹಾರ ಪದಾರ್ಥವನ್ನು ಸರಿಯಾಗಿ ಸಂಸ್ಕರಿಸಿದ ಮೇಲೆಯೇ ಅದನ್ನು ಸ್ವೀಕರಿಸುತ್ತೇವೆ. ಅದನ್ನು ಬಳಸುವ ನಾವು ಉತ್ತಮ ಸಂಸ್ಕಾರವನ್ನು ಹೊಂದಬಹುದಲ್ಲವೇ? ಎಂತಹ ಕ್ರೂರ ಮೃಗಕ್ಕೂ ಅದರ ಗುಣಧರ್ಮಕ್ಕೆ ವಿರುದ್ಧವಾಗಿ ಒಳ್ಳೆಯ ತರಬೇತಿಯಂತಹ ಸಂಸ್ಕಾರವನ್ನು ಕೊಟ್ಟು ಬದಲು ಮಾಡುವುದಿಲ್ಲವೇ? ಹಾಗಿದ್ದಾಗ ಪ್ರಾಣಿ ಸಂಕುಲದಲ್ಲಿಯೇ ಜ್ಞಾನಿಗಳೆನಿಸಿಕೊಂಡಂತಹ ನಾವು ಸಂಸ್ಕಾರ–ಸಂಸ್ಕೃತಿಯನ್ನು ಬೆಳೆಸಿಕೊಂಡು ಉತ್ತಮ ನಾಗರಿಕರಾಗಬೇಕು.

ನಾಗರಿಕತೆ ಎನ್ನುವುದು ಒಂದು ಮರದಂತೆ. ಸಂಸ್ಕೃತಿ ಎನ್ನುವುದು ಆಳದಲ್ಲಿ ಹೋಗುವ ಮರದ ಬೇರಿನಂತೆ. ನಾಗರಿಕ ಬದುಕು ಸುಂದರವಾಗಬೇಕಾದರೆ ಜೀವನದಲ್ಲಿ ಸಂಸ್ಕೃತಿ ಮತ್ತು ಸಂಸ್ಕಾರವನ್ನು ನಾವು ಅಳವಡಿಸಿಕೊಳ್ಳಬೇಕು. ಪರಿಮಳವನ್ನು ಬೀರುವ ಹೂಗಳನ್ನು ಎಲ್ಲರೂ ಇಷ್ಟಪಡುತ್ತಾರೆ. ಆದರೆ ಪರಿಮಳ ಇಲ್ಲದ ಹೂಗಳು ಯಾರಿಗೂ ಇಷ್ಟವಾಗುವುದಿಲ್ಲ. ಹಾಗೆಯೇ ಸಂಸ್ಕೃತಿ ಸಂಸ್ಕಾರವನ್ನು ಜೀವನದಲ್ಲಿ ಅಳವಡಿಸಿಕೊಂಡವರನ್ನು ಸಮಾಜದಲ್ಲಿ ಎಲ್ಲರೂ ಇಷ್ಟಪಡುತ್ತಾರೆ, ಗೌರವಿಸುತ್ತಾರೆ.

ಉತ್ತಮ ಸಂಸ್ಕಾರವಂತರಾಗಲು ಗುರುವಿನ ಮಾರ್ಗದರ್ಶನದಲ್ಲಿ ನಡೆದರೆ ಈ ಸಮಾಜದಲ್ಲಿ ಎಲ್ಲರಿಗೂ ಪ್ರಿಯರಾಗಿ, ಸಮಾಜಮುಖಿಯಾಗಿ ಜನರ ಮನಸ್ಸನ್ನು ಗೆದ್ದು ಮುಂದಿನ ಜೀವನದಲ್ಲಿ ಉತ್ತಮ ಸಾಧನೆಗಳನ್ನು ಮಾಡಲು ಅನುಕೂಲವಾಗಿರುತ್ತದೆ. ಮನೆಯಲ್ಲಿ ತಾಯಿಯೇ ಮೊದಲ ಗುರು. ಮಕ್ಕಳಿಗೆ ಉತ್ತಮ ಸಂಸ್ಕೃತಿ–ಸಂಸ್ಕಾರಗಳ ಅರಿವು ಮೂಡಿಸಿ, ಉತ್ತಮ ಶಿಕ್ಷಣವನ್ನು ನೀಡಲು ಆದ್ಯತೆ ನೀಡಿ, ಉತ್ತಮ ನಾಗರಿಕ ಸಮಾಜದ ಪ್ರಜೆಯನ್ನಾಗಿ ಮಾಡುವುದು ತಾಯಂದಿರ ಕರ್ತವ್ಯವಾಗಿದೆ.

ವಿಪರ್ಯಾಸವೆಂದರೆ ಇಂದು ನಾಗರಿಕತೆ ಹೆಚ್ಚಿದಂತೆಲ್ಲಾ ಕ್ರೌರ್ಯವೂ ಕೂಡ ಹೆಚ್ಚುತ್ತಿದೆ. ಹಿಂಸೆ ನಿರಂತರ ಮತ್ತು ನಿರಾತಂಕವಾಗಿ ನಡೆಯುತ್ತಿದೆ. ಇದಕ್ಕೆ ಮುಖ್ಯ ಕಾರಣ ಅವರವರ ಧರ್ಮ, ಸಂಸ್ಕೃತಿಯನ್ನು ಸರಿಯಾಗಿ ಅರಿತುಕೊಳ್ಳದೇ



ಫೌಂಟನ್ ಪೆನ್ನು – ವಾಟರ್ ಮನ್

ಇರುವುದು. ಬಹಳ ಹಿಂದೆಯೇ ನಮ್ಮ ಹಿರಿಯರು "ವಿಶ್ವ ಮಾನವ" ಸಂದೇಶವನ್ನು ಜಗತ್ತಿಗೆ ನೀಡಿದ್ದಾರೆ. ಅದರ ಅರ್ಥವನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಪ.ಪೂ.ಶ್ರೀ ಗುರೂಜಿಯವರು 15–04–2016 ರಿಂದ 22–04–2016 ರವರೆಗೆ "ಸಂಸ್ಕೃತಿ ಕುಂಭ–2016" ಎಂಬ ರಾಷ್ಟ್ರೀಯ ಸಮ್ಮೇಳನವನ್ನು ಶ್ರೀಕ್ಷೇತ್ರದಲ್ಲಿ ಆಯೋಜಿಸಿದ್ದಾರೆ. ಇದರಲ್ಲಿ ಪಾಲ್ಗೊಳ್ಳುವುದು ಉತ್ತಮ ನಾಗರಿಕನಾಗ ಬಯಸುವವರ ಆದ್ಯ ಕರ್ತವ್ಯವಾಗಿದೆ. ಇಂತಹ ಸಮ್ಮೇಳನಗಳು ಜಗತ್ತಿನೆಲ್ಲೆಡೆ ಜರುಗಬೇಕು. ಮನುಷ್ಯನು ಇನ್ನೊಬ್ಬನನ್ನು ನಂಬಬೇಕು. ಆದರೆ ಈಗ ಯಾರನ್ನೂ ನಂಬದಂತಹ ಪರಿಸ್ಥಿತಿ ಬಂದೊದಗಿದೆ. ಮಾನವೀಯತೆಯ ಜೊತೆಗೆ ನಂಬಿಕೆಯೂ ಕೂಡ ಇಂದು ಕಳೆದು ಹೋಗುತ್ತಿದೆ. ಎಲ್ಲರೂ, ಎಲ್ಲರನ್ನೂ, ಎಲ್ಲವನ್ನೂ ಪ್ರೀತಿಸಬೇಕು. ಪ್ರತಿಯೊಂದು ಧರ್ಮವನ್ನೂ ಗೌರವಿಸಬೇಕು. ನಿಜವಾದ ಪ್ರೀತಿಯಿಂದ ಮಾತ್ರ ಕೆಟ್ಟ ವಿಚಾರಗಳನ್ನು ನಾಶ ಮಾಡಲು ಸಾಧ್ಯ. ಜೀವನದ ಕೆಲವು ಕಾರ್ಯಗಳನ್ನು ಸಮರ್ಥವಾಗಿ ನಿಭಾಯಿಸಲಿಕ್ಕಾಗಿಯೇ ನಾವು ಜನ್ಮ ತಳೆದಿರುತ್ತೇವೆ. ನಮಗೆ ಉತ್ತಮ ಸಂಸ್ಕೃತಿ–ಸಂಸ್ಕಾರಗಳ ಅವಶ್ಯಕತೆಯಿದೆ. ಅದಕ್ಕೆ ಗುರುವಿನ ಸೇವೆ ಮಾಡಬೇಕು. ಗುರುವಿನ ಮಾರ್ಗದರ್ಶನ ಬೇಕು. ಗುರುವಿನ ಪ್ರೋತ್ಸಾಹ ಬೇಕು. ಇಂತಹ ಸಂಸ್ಕೃತಿ ಕುಂಭದಂತಹ ಸಂಸ್ಕಾರಯುತ ಸಮ್ಮೇಳನದಲ್ಲಿ ಪಾಲ್ಗೊಂಡು ಸಂಸ್ಕಾರವಂತರಾಗೋಣ.

–ಸಂಪಾದಕರು.

* * *

**ಹೇಮಪುರ ಪತ್ರಿಕೆಯ ಚಂದಾವಿವರ**

ಬಿಡಿ ಪತ್ರಿಕೆ – ರೂ.20/– । ವಾರ್ಷಿಕ ಚಂದಾ – ರೂ.200/– । ಪಂಚವಾರ್ಷಿಕ ಚಂದಾ – ರೂ.1000/– ।ಆಜೀವ ಸದಸ್ಯತ್ವ – ರೂ.5000/–

**ವಿವರಗಳಿಗೆ ಸಂಪರ್ಕಿಸಿ :**

ಸಂಪಾದಕರು, ಹೇಮಪುರ ಮಾಸಪತ್ರಿಕೆ.

ಫೋನ್ ನಂ: 08387–268333,268545,268544.

* * *

ವಕಾಲತ್...

# ಜೀವಂತ ದೇವರುಗಳು (Living God)

– ಲೇ: ನಾಗರಾಜ ನಾಯಕ.

ಆಗರ್ಭ ಶ್ರೀಮಂತನ ಮನೆಯಲ್ಲಿ ಎಲ್ಲರಿಗೂ ಬೆಳ್ಳಿ ತಟ್ಟೆಯಲ್ಲಿ ಊಟ. ಶ್ರೀಮಂತನ ತಂದೆಗೆ ಮೂಲೆಯಲ್ಲಿ ಪ್ಲಾಸ್ಟಿಕ್ ತಟ್ಟೆಯಲ್ಲಿ ಊಟ ಬಡಿಸಲಾಗಿತ್ತು. ಶ್ರೀಮಂತನ ಚಿಕ್ಕ ಮಗನಿಗೆ ಆಶ್ಚರ್ಯವಾಗಿ ಅಜ್ಜನಿಗೇಕೆ ಪ್ಲಾಸ್ಟಿಕ್ ತಟ್ಟೆಯಲ್ಲಿ ಊಟ ಬಡಿಸಿದ್ದೀರಿ ಎಂದು ಶ್ರೀಮಂತನನ್ನು ಕೇಳಿದ್ದಕ್ಕೆ, ಮುದುಕನಿಗೆ ಯಾವ ತಟ್ಟೆಯಲ್ಲಿ ಬಡಿಸಿದರೇನು, ಈ ಮುದುಕ ಬಹಳ ದಿನ ಬದುಕಾ; ಬೆಳ್ಳಿಯ ತಟ್ಟೆಯಲ್ಲಿ ಬಡಿಸಿದರೆ ಅದು ಹಾಳಾಗಲಿಕ್ಕಿಲ್ಲವೇ? ಎಂದು ತನ್ನ ಮಗನನ್ನು ಪ್ರಶ್ನಿಸಿದ. ಎಷ್ಟೋ ದಿನಗಳ ನಂತರ ಉಳಿಯನ್ನು ತೆಗೆದುಕೊಂಡು ತನ್ನ ಮಗ ಕಟ್ಟಿಗೆಯನ್ನು ಕೆತ್ತುವುದನ್ನು ನೋಡಿದ ಶ್ರೀಮಂತ ಮಗನೇ ಇದೇನು ಮಾಡುತ್ತಿ ಎಂದು ಪ್ರಶ್ನಿಸಿದ. ಅದಕ್ಕೆ ಮುಗ್ಧ ಮಗು, 'ಅಪ್ಪಾ! ಮುಂದೆ ನೀನೂ ಸಹ ಮುದುಕನಾದ ಮೇಲೆ ಬೆಳ್ಳಿಯ ತಟ್ಟೆಯಲ್ಲಿ ಬಡಿಸಿದರೆ ಅದು ಹಾಳಾಗಲಿಕ್ಕಿಲ್ಲವೇ? ಅದಕ್ಕಾಗಿ ಕಟ್ಟಿಗೆಯ ತಟ್ಟೆಯನ್ನು ಮಾಡುತ್ತಿದ್ದೇನೆ' ಎಂದಾಗ ಶ್ರೀಮಂತ ಹೌಹಾರಿದ. ಅಪ್ಪ ತನ್ನಪ್ಪನಿಗೆ ಪ್ಲಾಸ್ಟಿಕ್ ತಟ್ಟೆಯಲ್ಲಿ ಬಡಿಸಿದ್ದರೆ, ಮಗ ತನ್ನಪ್ಪನಿಗೆ ಕಟ್ಟಿಗೆಯ ತಟ್ಟೆಯನ್ನೇ ಸಿದ್ಧಪಡಿಸುತ್ತಿದ್ದ!

ವಯಸ್ಕ ತಂದೆ ತಾಯಿಗಳು ಇಂದಿನ ಸಮಾಜದಲ್ಲಿ ಅವಗಣನೆಗೆ ತುತ್ತಾಗುತ್ತಿದ್ದಾರೆ. ಶ್ರೀಮಂತ, ಧೀಮಂತ ಮತ್ತು ನಾಗರಿಕ ಸಮಾಜದಲ್ಲಿಯೇ ವೃದ್ಧ ತಂದೆ–ತಾಯಿಗಳನ್ನು ಕೀಳಾಗಿ ನೋಡುವ ಎಷ್ಟೋ ದೃಷ್ಟಾಂತಗಳನ್ನು ನಾವು ಕಾಣುತ್ತಿದ್ದೇವೆ. ಸಮಾಜದಲ್ಲಿ ಬಡವರ, ನೊಂದವರ ಬಗ್ಗೆ ಭಾಷಣ ಹೊಡೆಯುವ ಹಿಪ್ರಾಕ್ರೇಟ್ಸ್‌ಗಳು ಮನೆಯಲ್ಲಿ ಮಾತ್ರ ತಂದೆ–ತಾಯಿಯರನ್ನು ಕತ್ತಲೆಯ ಕೋಣೆಯಲ್ಲಿ ಇಟ್ಟಿರುತ್ತಾರೆ. ವೃದ್ಧ ತಂದೆ–ತಾಯಿಗಳ ನೋವು ಈ ಶತಮಾನದ ಬಹುದೊಡ್ಡ ಸಮಸ್ಯೆಯಾಗಿದೆ.

ಮಗ ಡಾಕ್ಟರ್, ಎಂಜಿನಿಯರ್, ಆತನಿಗೆ ಪುರುಸೊತ್ತು ಎಲ್ಲಿಂದ ಎಂಬ ಕಾರಣವೊಡ್ಡಿ ಬ್ಯುಸಿ ಎಂಬ ಭ್ರಮಾಲೋಕದಲ್ಲಿ ಹೆತ್ತವರನ್ನೇ ಮರೆತ ಶಾಣ್ಯಗಳು ಇನ್ನ್ಯಾರನ್ನು ಪೊರೆಯಲು ಸಾಧ್ಯ? 'ಹತ್ತು ಮಕ್ಕಳ ತಾಯಿ, ಹಾದಿಯ ಮೇಲೆ ಬಿದ್ದು ಸಾಯೇ' ಎಂಬ ನಾಣ್ಣುಡಿ ಇದೆ. ಹತ್ತು ಮಕ್ಕಳನ್ನು ಸಾಕಿದ ತಾಯಿಯನ್ನು ಸಾಕಲು ಹತ್ತು ಮಕ್ಕಳಿಂದ ಆಗದಿರುವುದು ಎಂತಹ ದುರಂತ. ಹೆಂಡತಿ ಮಕ್ಕಳನ್ನು ಅದ್ಭುತವಾಗಿ ಸಾಕುವ ಕಲೆಯನ್ನು ಸಿದ್ಧಿಸಿಕೊಂಡ ಮಹಾಪುರುಷನಿಗೆ ತಂದೆ–ತಾಯಿಗಳ ಕುರಿತು ಕಿಂಚಿತ್ತೂ ದೃಷ್ಟಿ ಹರಿಸದಿರುವುದಕ್ಕೆ ಏನನ್ನೋಣ?

ಬೆಳೆದ ಮಕ್ಕಳು ತಂದೆ–ತಾಯಿಯರನ್ನು ನೋಡಿಕೊಳ್ಳುವುದು ಅವಶ್ಯಕ ಎಂದು ಕಾನೂನು ಹೇಳುತ್ತದೆ. ಜೀವನಕ್ಕೆ ಮಕ್ಕಳಿಂದ ಪಡೆಯುವ ಹಣಕಾಸಿನ ಸೌಲಭ್ಯವು ಮಕ್ಕಳು ನೀಡುವ ಭಿಕ್ಷೆಯ ಬದಲಿಗೆ ಹಕ್ಕಿನ ರೀತಿಯಲ್ಲಿ ಪಡೆಯುವ ಅಧಿಕಾರ ತಂದೆ–ತಾಯಿಗಳಿಗೆ ಇರುತ್ತದೆ. ಮಕ್ಕಳಿಂದ ನಿರ್ಲಕ್ಷಿಸಲ್ಪಟ್ಟ ತಂದೆ–ತಾಯಿಯರು ಸಿ.ಆರ್.ಪಿ.ಸಿ. ಕಲಂ 125ರಂತೆ ನ್ಯಾಯಾಲಯದ ಬಾಗಿಲು ಬಡಿದು ಜೀವನಾಂಶವನ್ನು ಮಕ್ಕಳಿಂದ ಪಡೆಯಬಹುದು.



ಜಾಮಿತ್ರ (ರೇಖಾಗಣಿತ) – ಯೂಕ್ಲಿಡ್

ಹಲವು ಮಕ್ಕಳನ್ನು ಹೆತ್ತು ತನ್ನ ಮುದಿವಯಸ್ಸಿನಲ್ಲಿ ಯಾರೂ ತನಗೆ ನೋಡಿಕೊಳ್ಳಲು ಇರದಿದ್ದಾಗ ಆ ತಾಯಿ ಉಸುರಿದ್ದಳು. "ಮಗಳನ್ನು ಹೆತ್ತು ಅಳಿಯನಿಗೆ ಕೊಟ್ಟೆ, ಮಗನನ್ನು ಹೆತ್ತು ಸೊಸೆಗೆ ಕೊಟ್ಟೆ" ಎಂದು. ಅಂದ ಮೇಲೆ ಹೆತ್ತ ತಾಯಿಗೆ ಉಳಿದಿದ್ದೇನು? ಯಾವಾಗಲೂ ಅನುಕೂಲಕರ ಹವಾಮಾನವೇ ಇರುವುದೆಂದು ಭಾವಿಸುವುದು ಮಾನವನ ದೌರ್ಬಲ್ಯ. ಇಂದು ತಂದೆ ತಾಯಿಗಳಿಗೆ ಬಂದ ಪರಿಸ್ಥಿತಿ ನಾಳೆ ನಮಗೂ ಬರಬಹುದು. ಇಂದು ನಾವು ತಂದೆ ತಾಯಿಗೆ ನೀಡಿದ ಆಶ್ರಯವನ್ನೇ ನಾಳೆ ನಮ್ಮ ಮಕ್ಕಳು ನಮಗೆ ನೀಡುತ್ತಾರೆ. ಮಕ್ಕಳು ಸ್ಪಾಂಜ್ ಇದ್ದಂತೆ. ಅವು ನಾವು ಮಾಡುವುದನ್ನು ಹೀರಿ ಬಿಡುತ್ತವೆ. ಹಾಗಾಗಿ ತಂದೆ–ತಾಯಿಯರ ಕುರಿತು ನಿರ್ಲಕ್ಷ್ಯ ತಾಳಿದ ಬ್ಯುಸಿ ಮಗನಿಗೆ ಅವನ ಮಗನಿಂದ ಮರದ ತಟ್ಟೆ ತಪ್ಪಿದ್ದಲ್ಲ.

ತಂದೆ–ತಾಯಿಯರಿಗೆ ಸೇವೆ ಮಾಡುವ ಅವಕಾಶ ಎಲ್ಲರಿಗೂ ದೊರೆಯಲಾರದು. ಆ ಸೇವೆಯ ಅವಕಾಶ ದೊರೆತರೆ ಅದೊಂದು ಭಾಗ್ಯ. ಅವರೇ ಜೀವಂತ ದೇವರುಗಳು. ಅಮಿತಾಬ್ ಬಚ್ಚನ್ ಅಭಿನಯದ 'ಬಾಗಬನ್' ಚಲನಚಿತ್ರ ನಿರ್ಲಕ್ಷ್ಯಕ್ಕೆ ಒಳಗಾದ ತಂದೆ–ತಾಯಿಯರ ಪರಿಸ್ಥಿತಿಯನ್ನು ವರ್ಣಿಸುವ ಮನೋಜ್ಞ ಚಿತ್ರ. ತಂದೆ–ತಾಯಿಯರನ್ನು ಅವಧಿಯ ಮೇಲೆ ಸಾಕುವ, ತಂದೆ–ತಾಯಿಯರನ್ನು ಪಾಲು ಮಾಡಿಕೊಳ್ಳುವ, ಅವರನ್ನು ನಿರ್ಲಕ್ಷ್ಯಿಸುವುದರ ಕುರಿತು ತಯಾರಿಸಿದ ಚಲನಚಿತ್ರ ಇದಾಗಿರುತ್ತದೆ. ಇದು ಸಿನಿಮಾ ಕಥೆಯಾಗಿರದೇ ಹಲವು ಮನೆಗಳ ಕಥೆಯಾಗಿದೆ. ಹಿರಿಯರ ಬಗ್ಗೆ ಚಿಂತಿಸದವರು, ಬರಲಿರುವ ಜನಾಂಗವನ್ನು ಕುರಿತು ಚಿಂತಿಸಲಾರರು. ತಂದೆ–ತಾಯಿಯರನ್ನು ಸಾಕುವುದು, ಸಲಹುವುದು ಕೇವಲ ಜವಾಬ್ದಾರಿಯಾಗಿರದೇ ಕಾನೂನಿನ ಪ್ರಕಾರದಲ್ಲಿ ಹೊಣೆಯಾಗಿರುತ್ತದೆ.

* * *

ಆಚಾರ–ವಿಚಾರ...

# ಯಾತ್ರೆ

–ಲೇ: ರಸಿಕ ಪುತ್ತಿಗೆ

ನಮ್ಮ ಜೀವನದಲ್ಲಿ ಮುಖ್ಯವಾದ ಕೆಲವು ಸಂಗತಿಗಳಿವೆ. ಅವುಗಳಲ್ಲಿ ಯಾತ್ರೆಯೂ ಒಂದು. ಜೀವನದ ಪ್ರಮುಖ ಘಟ್ಟ ಗೃಹಸ್ಥ ಜೀವನದ ಮೆಟ್ಟಿಲಿಗೆ ಮುಟ್ಟುವ ಮೊದಲು ಕಾಶೀಯಾತ್ರೆ ಮಾಡಿ ಬರಬೇಕಾಗುತ್ತದೆ. ಜೀವನದ ಅನುಭವಕ್ಕಾಗಿ, ಬದುಕಿಗೆ ಬೆಳಕು ತಂದುಕೊಳ್ಳುವುದಕ್ಕಾಗಿ ಕಾಶೀ ಯಾತ್ರೆ– ಅಂದರೆ ಜ್ಞಾನ ಸಂಪಾದನೆಗಾಗಿ ಮಾಡುವ ಯಾತ್ರೆ ಮಹತ್ವದ್ದಾಗಿರುತ್ತದೆ. ಇಲ್ಲಿ 'ಕಾಶಿ' ಎಂದರೆ ಜ್ಞಾನದ ವ್ಯವಹಾರ, ಜ್ಞಾನದ ಸ್ಥಳಗಳು ಎಂಬ ಭಾವಾರ್ಥ ಚಿಂತಿಸಬೇಕು.

ಪುಣ್ಯಕ್ಷೇತ್ರಗಳಲ್ಲಿ ಸಂಚರಿಸಿ ತೀರ್ಥಕ್ಷೇತ್ರಗಳಲ್ಲಿ ಸುತ್ತಾಡಿ ಬರುವುದೂ ಯಾತ್ರೆಯ ಪಾಲಿಗೇ ಬರುತ್ತದೆ.

ಕಾಶೀಯಾತ್ರೆ ಕೇವಲ 'ನಾಮ್‌ಕೇ ವಾಸ್ತೇ' ಆಗಿರುವ ಹಾಗೇ ಯಾತ್ರೆಯೂ ಕೂಡಾ 'ವಿಹಾರ'ವಾಗಿದೆ ಈ ದಿನಗಳಲ್ಲಿ.

ಪುಣ್ಯಕ್ಷೇತ್ರಗಳಲ್ಲಿ ಕೈಗೊಳ್ಳುವ ಸಂಚಾರ ಪುಣ್ಯಪ್ರದವಾಗಬೇಕಾದರೆ ಅವುಗಳ ಹಿಂದೆ ಇರುವ ಧ್ಯೇಯ, ಉದ್ದೇಶಗಳ ಜೊತೆಗೆ ಯಾತ್ರಾ ಕಾಲದ ಮನಸ್ಥಿತಿಯೂ ಮುಖ್ಯವಾಗುತ್ತದೆ. ಮೋಜು ಮಾಡುವ ಮನೋಧರ್ಮದಿಂದ ಪುಣ್ಯಕ್ಷೇತ್ರಕ್ಕೆ ಹೋಗಿ ಯಾತ್ರೆ ಮಾಡಿ ಬಂದರೆ ಯಾವ ಪುಣ್ಯವೂ ಬರಲಾರದು. ಪುಣ್ಯಕ್ಷೇತ್ರದ, ಪವಿತ್ರ ಕ್ಷೇತ್ರದ ಪಾವಿತ್ರ್ಯ, ಪುಣ್ಯಗಳು ನಮಗೆ ಅಂಟಬೇಕಾದರೆ, ಲಭಿಸಬೇಕಾದರೆ ನಮ್ಮಲ್ಲಿ ಪಾತ್ರತೆ ಇರಬೇಕಾಗುತ್ತದೆ. ಕೆಸರು ಅಂಟಿದ ಮೈಗೆ ಶ್ರೀಗಂಧದ ಲೇಪನ ಅಸಾಧ್ಯ–ಅನಗತ್ಯ, ಸ್ನಾನವೇ ಮಾಡದ ಮೈಗೆ ಮಡಿ ಬಟ್ಟೆ ವ್ಯರ್ಥ.

ದೇವರ ಉತ್ಸವ ಹಬ್ಬವನ್ನೂ 'ಯಾತ್ರೆ'ಯೆಂದು ಕರೆಯುವುದಿದೆ. ಆದರೆ 'ಜಾತ್ರೆ'ಯಾಗಿ ಹೆಸರುಗೊಂಡಿರುವ ಉತ್ಸವ 'ಯಾತ್ರೆ'ಯ ತದ್ಭವ ರೂಪವೆಂಬ ಸಂಗತಿ ಮಾತ್ರ ತಿಳಿಯಬೇಕು. ಪ್ರಯಾಣ, ಗಮನ, ಹೊರಟು ಬರುವುದು ಎಂಬ ಅರ್ಥದಲ್ಲಿಯೂ 'ಯಾತ್ರೆ' ಶಬ್ದವಿದೆ. ಶತ್ರುಗಳನ್ನು ಜಯಿಸಲು ರಾಜನು ಸೇನಾ ಸಮೇತನಾಗಿ ಹೊರಡುವ ಜೈತ್ರಯಾತ್ರೆಗೂ ಯಾತ್ರೆಯೆಂದೇ ಹೆಸರು.

"ಹೇಗೋ ಯಾತ್ರೆ ನಡೀತಿದೆ" ಎಂದು ಕೆಲವು ಹಿರಿಯರು ಮುದಿತನದಲ್ಲಿ ಹೇಳುವುದುಂಟು. ಅಂದರೆ ದೇಹಧಾರಣೆ, ದೇಹಪೋಷಣೆ, ಜೀವನ ಎಂಬ ಅರ್ಥದಲ್ಲಿಯೂ ಯಾತ್ರೆಗೆ ಅರ್ಥ ಬರುತ್ತದೆಯೆಂದಾದಾಗ 'ಶವಯಾತ್ರೆ' ಎಂಬ ಪದದ ಹಿನ್ನೆಲೆಗೆ ನಿಂತ ಭಾವ ತಿಳಿದೀತು. ಯಾತ್ರೆಗೆ 'ಮೆರವಣಿಗೆ' ಎಂಬ ಅರ್ಥ ಇಲ್ಲಿ ಸರಿ ಬರುತ್ತದೆ.

ಸಂಪ್ರದಾಯ, ಪದ್ಧತಿ, ಆಚಾರ, ವಾಡಿಕೆಗಳಿಗೂ ಯಾತ್ರೆಯೆಂದೇ ಹೆಸರು. ಕೆಲವು ಸಲ ಉಪಾಯವೂ ಯಾತ್ರೆಯಾಗುತ್ತದೆ. ಯಾತ್ರೆಯೂ ಪುಣ್ಯ ಸಂಪಾದನೆಯ ಉಪಾಯವೇ ಅಲ್ಲವೇ?

ಪ್ರಯಾಣ, ನಡೆದಾಡುವುದು, ಸಂಚಾರ, ಪ್ರವಾಸ ಎಂಬ ಅರ್ಥದಲ್ಲಿ ಈಗ ಯಾತ್ರೆ ಬಹಳ ಪ್ರಚಲಿತವಿದೆ. 'ಆಪಕೀ ಯಾತ್ರಾ ಸುಖದ ಹೋ' ಎಂಬ ಆಶಯ ಪ್ರವಾಸಿಗಳಿಗೆ ರೈಲು ನಿಲ್ದಾಣದಲ್ಲಿ ಸಿಗುತ್ತದೆ.

ಊರಿಂದೂರಿಗೆ ಅಲೆದಾಡುವುದನ್ನು ಯಾತ್ರೆಯೆಂದು ಹೇಳಬಹುದೆ? ಪ್ರವಾಸವು ಯಾತ್ರೆಯ ರೂಪ ತಾಳುತ್ತದೆಯೇ? ಪರ್ವತ ಪ್ರದೇಶ, ಐತಿಹಾಸಿಕ ಬಂಜರು, ಪರದೇಶಗಳಿಗೆ ಹೋಗಿ ಬರುವುದನ್ನು 'ಯಾತ್ರೆ' ಎನ್ನಬಹುದೆ? ಎಂಬ ಪ್ರಶ್ನೆಗಳಿಗೆ ಉತ್ತರವಾಗಿ ಹೀಗೆ ಹೇಳಬಹುದು.

"ನೀವು ಮಾಡುವ ಯಾತ್ರೆ ಮಾನಸಿಕ ವಿಕಸನ, ಬೌದ್ಧಿಕ ಅಭಿವೃದ್ಧಿ, ಆಧ್ಯಾತ್ಮಿಕ ಅರಿವುಗಳಿಗಾಗಿಯಾಗಿದ್ದರೆ ಅವು ಪುಣ್ಯಪ್ರದವೆಂದು ತಿಳಿಯಬೇಕು. ನೀವು ಹೋಗುವ ಜಾಗಗಳು ಮೋಜು, ಮೇಜವಾನಿಗಳ ಪ್ರದೇಶಗಳಾಗಿರದೆ ದಾನ, ಧರ್ಮ,



ಗನ್ ಪೌಡರ್ – ರೋಗಿಯಿ ಬ್ಯಾಕನ್

ಪೂಜೆ, ಪುರುಷಾರ್ಥಭಕ್ತಿ, ಭಜನೆ, ಶಾಂತಿ, ಕರುಣೆ ಮುಂತಾದವುಗಳ ನೆಲೆಯಾಗಿದ್ದರೆ ಪುಣ್ಯಕ್ಷೇತ್ರವೆಂದು ತಿಳಿಯಬೇಕು. ಪುಣ್ಯಕ್ಷೇತ್ರವೆಂದೆನ್ನಿಸಿಕೊಳ್ಳಲು ದೇವಾಲಯವೇ ಆಗಬೇಕೆಂದಿಲ್ಲ. ಸುಂದರ ನದಿತೀರ, ಪವಿತ್ರ ಕಾನನ, ಎತ್ತರದ ಪರ್ವತ ಶಿಖರವೂ ಆಗಿರಬಹುದು ಅಥವಾ ನಿತ್ಯ ಅನ್ನಸಂತರ್ಪಣೆ ನಡೆವ ಅನ್ನ ಛತ್ರವೂ ಆಗಿರಬಹುದು.

ಇಂಥ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸುವ ಪ್ರವಾಸ ಯಾತ್ರೆ ಅನ್ನಿಸಿಕೊಳ್ಳುತ್ತದೆ. ಇಲ್ಲವಾದರೆ ಈಗ ನಾವು ಬೇರೆಯೇ ಅರ್ಥದಲ್ಲಿ ಬಳಸುವ 'ಜಾತ್ರೆ'ಯ ಅರ್ಥದಲ್ಲಿರುತ್ತದೆ ಅಥವಾ ದೇಹಧಾರಣೆಗಾಗಿ ಶ್ರಮಿಸುವ ಯಾತ್ರೆ ಆಗಿರುತ್ತದೆ.

* * *

ಚಿಂತನ–ಮಂಥನ...

## ಸೀತಾ ರಾಮರ ಅನ್ಯೋನ್ಯ ದಾಂಪತ್ಯ

–ಲೇ:ಪ್ರೊ.ವಿಷ್ಣು ಜೋಶಿ

ದಾಂಪತ್ಯದಲ್ಲಿ ಸತಿ ಪತಿಯರಿಬ್ಬರೂ ಸಮಾನ ಅಭಿರುಚಿ ಇರುವವರು, ಸಮಾನ ಮನಸ್ಕರು ಇರುವುದು ದುರ್ಲಭ. ಆದಕಾರಣವೇ ಅನೇಕ ದಾಂಪತ್ಯದಲ್ಲಿ ಬಿರುಕು ಉಂಟಾಗಿ ವಿಚ್ಛೇದನದಲ್ಲಿ ಕೊನೆಗೊಳ್ಳುತ್ತದೆ. ಕಾಳಿದಾಸ ಕವಿ ಅಭಿಪ್ರಾಯಪಟ್ಟಂತೆ ಬ್ರಹ್ಮ ಸಮಾನ ಅಭಿರುಚಿ ಇರುವ ಗಂಡು–ಹೆಣ್ಣುಗಳನ್ನು ದಾಂಪತ್ಯದ ಚೌಕಟ್ಟಿನಲ್ಲಿ ತರುವುದೇ ಇಲ್ಲವಂತೆ. ಮಹರ್ಷಿ ವಾಲ್ಮೀಕಿ ಜಗದ್ವಂದ್ಯ ರಾಮಾಯಣ ಮಹಾಕಾವ್ಯದಲ್ಲಿ ರಾಮ–ಸೀತೆಯರನ್ನು ಚಿತ್ರಿಸಿದ ರೀತಿ ಅನುಪಮ. ಅವರಿಬ್ಬರಿಗೂ ಸುಖ–ದುಃಖಗಳಲ್ಲಿ ಅದ್ವೈತ. ಆದಕಾರಣ ಸೀತೆ "ನ ಹಿ ಮೇ ತೇನಹೀನಾಯ ವಾಸಂ ಸ್ವರ್ಗೋಪಿ ರೋಚತೆ"– ಶ್ರೀ ರಾಮಚಂದ್ರನು ಇರದ ಸ್ವರ್ಗವಾಸವೂ ನನಗೆ ಬೇಡ ಎಂದು ಅಭಿಪ್ರಾಯಪಟ್ಟರೆ ರಾಮನು: "ದೇವೀತವ ದುಃಖೇನ ಸ್ವರ್ಗಮಪ್ಯಭಿರೋಚತೇ"– ಸೀತೆ ನಿನಗೆ ದುಃಖವನ್ನು ಕೊಟ್ಟು ನಾನು ಸ್ವರ್ಗ ಸುಖವನ್ನು ಬಯಸಲಾರೆ ಎಂದು ನುಡಿಯುತ್ತಾನೆ. ಜಗತ್ತಿನಲ್ಲಿ ದಾಂಪತ್ಯದಲ್ಲಿ ಪತಿ–ಪತ್ನಿಯರು ಪರಸ್ಪರ ಸುಖಾಪೇಕ್ಷೆಯಿಂದ ಅಥವಾ ಪ್ರಯೋಜಾಪೇಕ್ಷೆಯಿಂದ ಒಂದಾಗುತ್ತಾರೆ. ಭಾಗ್ಯದಲ್ಲಿ ಹರ್ಷಿಸುತ್ತಾರೆ. ಆದರೆ ಸಂಕಟದಲ್ಲಿ ಒಬ್ಬರ ಸಹಾಯಕ್ಕೆ ಇನ್ನೊಬ್ಬರು ಬರುವುದು ಕಡಿಮೆ. ಆದರೆ ಸೀತಾ–ರಾಮರ ದಾಂಪತ್ಯ ಲೌಕಿಕವಾದರೂ ಒಂದು ಅಲೌಕಿಕವಾದ ಸತ್ಯವನ್ನು ಬಿತ್ತರಿಸುತ್ತದೆ. "ಭರ್ತುರ ಭಾಗ್ಯಂ ತು ಭಾರ್ಯೆಕಾ ಪ್ರಾಪ್ನೋತಿ ಪುರುಷರ್ಷಭ" ಪತಿಯ ಸುಖ–ದುಃಖಗಳಲ್ಲಿ ಅಧಿಕೃತವಾಗಿ ಪಾಲನ್ನು ಪಡೆಯುವ ಅಧಿಕಾರ ಪತ್ನಿಗೆ ಮಾತ್ರ ಇದೆ ಎನ್ನುವ ಸೀತಾದೇವಿಯ ಮಾತು ದಾಂಪತ್ಯ ಜೀವನಕ್ಕೆ ಸುವರ್ಣ ಚೌಕಟ್ಟಿನಂತೆ ಇದೆ. ಪಿತೃವಾಕ್ಯ ಪರಿಪಾಲನೆಗಾಗಿ ಹದಿನಾಲ್ಕು ವರ್ಷಗಳ ವನವಾಸಕ್ಕೆ ತಾನೊಬ್ಬನೇ ಹೋಗುತ್ತೇನೆ ಎಂದು ಶ್ರೀರಾಮಚಂದ್ರನು ಸೀತೆಯನ್ನು ಬಿಟ್ಟು ಹೋಗಲಿಕ್ಕೆ ಪ್ರಯತ್ನಿಸುವ ಸಂದರ್ಭ. ಸೀತಾ ವನವಾಸಕ್ಕೆ ಬಂದರೆ ಅಲ್ಲಿ ಅನುಭವಿಸಬೇಕಾದ ಪರಿ–ಪರಿಯ ಕಷ್ಟಗಳನ್ನು ಶ್ರೀರಾಮಚಂದ್ರನು ವಿವರಿಸುತ್ತಾನೆ. ಇದಾವುದಕ್ಕೂ ಜಗ್ಗದ ಸೀತಾ ತುಂಬು ಪ್ರೀತಿಯಿಂದ, ಆದರೆ ಮೇಲ್ನೋಟಕ್ಕೆ ಕಠೋರವಾಗಿ ರಾಮಚಂದ್ರನನ್ನು ಪ್ರಶ್ನಿಸುವ ಪರಿಯಲ್ಲಿ ಅವರ ಅನ್ಯೋನ್ಯ ದಾಂಪತ್ಯ ಪ್ರತಿಫಲಿತವಾಗಿದೆ.

**ಕಿಂ ತ್ವಾಮನ್ಯತ ವೈದೇಹಃ ಪಿತಾ ಮೇ ಮಿಥಿಲಾಧಿಪಃ**

**ರಾಮ ಜಾಮಾತರಂ ಪ್ರಾಪ್ಯ ಸ್ತ್ರೀಯಂ ಪುರುಷವಿಗ್ರಹಮ್** (ಅಯೋಧ್ಯಾಕಾಂಡ, ಸರ್ಗ–30, ಶ್ಲೋಕ–3)

ನನ್ನ ತಂದೆಯಾದ ಮಿಥಿಲೇಶ್ವರನು ನೀನೊಬ್ಬ ಗಂಡುವೇಷದ ಹೆಣ್ಣು ಅಳಿಯನೆಂದು ತಿಳಿದಿದ್ದನೇ?

* * *

ಸಂದೇಶ ಸನ್ನಿಧಿ...

## "ಕರೆಯೋಲೆಯ ಕಥೆ ವ್ಯಥೆ"

–ಲೇ: ಸಂದೀಪ್.ಎಸ್.ಭಟ್

ಸಮಾಜ ತಾನೊಬ್ಬ ಬದುಕುವುದಕ್ಕಾಗಿ ಅಲ್ಲ. ಇಲ್ಲಿ ಎಲ್ಲರೂ ಬೇಕು. "ನೀ ನನಗಾದರೆ ನಾ ನಿನಗೆ ಎಂಬುದ ತಿಳಿಯೋ ಮನದೊಳಗೆ" ಎಂಬಂತೆ ಒಬ್ಬರಿಗೊಬ್ಬರು ಬದುಕು ನಡೆಸಬೇಕು. ಕರೆದಲ್ಲಿ ನಾನೂ ಹೋಗಬೇಕು. ಕರೆದಾಗ ನೀವೂ ಬರಬೇಕು ಎಂಬುದು ನಮ್ಮ ಸಂಸ್ಕೃತಿ ನಮಗೆ ಕಲಿಸಿಕೊಟ್ಟ ಪಾಠ. ಹೀಗಾಗಿಯೇ ಮದುವೆ, ಉಪನಯನ, ವಿವಿಧ ಸ್ಪರ್ಧೆ, ಸಮಾರಂಭಗಳಿಗೆ ನಮ್ಮಲ್ಲಿ ಆಮಂತ್ರಣ ಪತ್ರಿಕೆ ಮಾಡಿಯೇ ಕರೆಯುವ ಪದ್ಧತಿಯಿರುವುದನ್ನು ಕಾಣುತ್ತೇವೆ. ಹಿಂದೆಲ್ಲಾ ಡಂಗುರ ಹೊಡೆಸುವುದರ ಮೂಲಕ ಕರೆ ಕಳಿಸಲಾಗುತ್ತಿತ್ತು. ಪುರಾಣದ ಕಾಲದಲ್ಲಂತೂ ಕರೆ ಕಳಿಸುವುದಕ್ಕಾಗಿ ದೂತರೇ ಇರುತ್ತಿದ್ದರು. ಹಿಂದೂ ಧರ್ಮದ ಆಚರಣೆಯಂತೆ ಅಕ್ಷತೆ ಕೊಟ್ಟು ಕರೆಯುವ ಪದ್ಧತಿ ಈಗಲೂ ನಮ್ಮಲ್ಲಿ ರೂಢಿಯಲ್ಲಿದೆ.

ಆಮಂತ್ರಣ ಸುಸಂಸ್ಕೃತ ಸಮಾಜದ ಒಂದು ಸಭ್ಯ ನಡವಳಿಕೆ. 'Give respect and take respect' ಎಂಬಂತೆ ನಾವು ಗೌರವ ಕೊಟ್ಟು ಕರೆಯಬೇಕು ಮತ್ತು ಗೌರವದಿಂದ ಕರೆಸಿಕೊಳ್ಳಬೇಕು. ಹೀಗಾಗಿಯೇ ನಾವು ನಮ್ಮ ಮನೆಗಳಿಗೆ ಯಾರಾದರೂ ಆಮಂತ್ರಣ ಹಿಡಿದು ತಂದಾಗ ಅವರನ್ನು ಬರಮಾಡಿಕೊಂಡು, ಕುಳ್ಳಿರಿಸಿ, ಅವರ ಕ್ಷೇಮ ವಿಚಾರಿಸಿ, ಅಪರಿಚಿತರಾದರೂ ಅವರ ಪರಿಚಯ ಮಾಡಿಕೊಂಡು ಹಾಲನ್ನೋ, ನೀರನ್ನೋ ಅಥವಾ ಇನ್ನಿತರ ಪಾನೀಯವನ್ನೋ ಕೊಟ್ಟು ಉಪಚರಿಸುತ್ತೇವೆ. ಕೊನೆ

ಪಕ್ಷ ಸಕ್ಕರೆಯನ್ನಾದರೂ ಕೊಟ್ಟು ಕಳುಹಿಸದಿದ್ದರೆ ನಮಗೆ ಸಮಾಧಾನವಿಲ್ಲ. ಅವರು ಏನನ್ನಾದರೂ ಕುಡಿಯಲಿಕ್ಕೋ ಅಥವಾ ಸಕ್ಕರೆ ತಿಂದು ಹೋಗಲಿಕ್ಕೋ ಬಂದವರಲ್ಲದಿದ್ದರೂ ಅವರಿಗೆ ನಾವು ಕೊಡುವ ಮರ್ಯಾದೆಯದು.

ಹಲವೊಮ್ಮೆ ಈ ಆಮಂತ್ರಣ ಪತ್ರಿಕೆಗಳಿಗಾಗಿಯೇ ಭೀಕರ ಕದನಗಳೂ ನಡೆಯುವುದುಂಟು. ಸರ್ಕಾರಿ ಸಮಾರಂಭಗಳಲ್ಲಂತೂ ಅದರದ್ದೇ ಆದ ನೀತಿ ನಿಯಮಗಳಿವೆ. ಆ ಭಾಗದ ಗ್ರಾಮ ಪಂಚಾಯತದ ಸದಸ್ಯರು, ಅಧ್ಯಕ್ಷರು, ಉಪಾಧ್ಯಕ್ಷರು, ತಾಲೂಕಾ ಪಂಚಾಯತ ಸದಸ್ಯರು, ಅಧ್ಯಕ್ಷರು, ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ ಸದಸ್ಯರು, ಅಧ್ಯಕ್ಷರು, ಉಪಾಧ್ಯಕ್ಷರು, ಆ ಭಾಗದ ಎಮ್.ಎಲ್.ಎ, ಎಂ.ಪಿ. ಇವರನ್ನು ಹೊರತುಪಡಿಸಿ ಸಮಾರಂಭಕ್ಕೆ ಬರಲಿರುವ ವಿಶೇಷ ಆಹ್ವಾನಿತರು, ಊರ ಪ್ರಮುಖರು, ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಹೀಗೇ ಹನುಮಂತನ ಬಾಲದಂತೆ ಅದು ಬೆಳೆದಷ್ಟೂ ಉದ್ದ. ಹಾಗಂತ ಉದ್ದವಾಯಿತೆಂದು ನೀವು ಯಾರ ಹೆಸರನ್ನೂ ಕೈ ಬಿಡುವಂತಿಲ್ಲ. ಯಾಕೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಇಂದು ಒಂದು ಶಕ್ತಿ. ಹೀಗಾಗಿ ಆತ ಎಂಥವನೇ ಆಗಿದ್ದರೂ ಅದು ಎಂಥಹ ಸಮಾರಂಭವೇ ಆಗಿದ್ದರೂ ಅದನ್ನು ನಿಲ್ಲಿಸಿ ಬಿಡುವ ತಾಕತ್ತು ಅವನಿಗಿರುತ್ತದೆ. ಅದಷ್ಟೇ ಅಲ್ಲ. ಅವರ ಹೆಸರುಗಳು ಸ್ವಲ್ಪ ಮೇಲೆ ಕೆಳಗಾದರೂ ಕಣ್ಣು ಕೆಂಪು ಮಾಡುವ, ಬಾಯಿಗೆ ಬಂದ ಹಾಗೆ ಉವಾಚ ಮಾಡುವ ಅದೆಷ್ಟೋ ಪ್ರಮುಖರಿರುವುದನ್ನು ನಾವು ಕಾಣುತ್ತೇವೆ. ಹಾಗಂತ ಎಲ್ಲಾದರೂ ದಾರಿಯ ಮೇಲೆ ಕರೆಯೋಲೆ ಹಿಡಿದು ನಿಲ್ಲುವ ಹಾಗಿಲ್ಲ. ಅವರವರ ಮನೆಗೋ ಅಥವಾ ಅವರ ಆಫೀಸಿಗೋ ಖುದ್ದಾಗಿ ಹೋಗಿ ಕೊಟ್ಟು ಬರಬೇಕು. ಇಷ್ಟಾದರೂ ಎಲ್ಲರೂ ಬರುತ್ತಾರೆಂದು ಭಾವಿಸುವುದು ನಮ್ಮ ಮೂರ್ಖತನ. ಬರಲೀ ಬರದೇ ಇರಲಿ. ನಿಮ್ಮ ಆಮಂತ್ರಣ ಪತ್ರಿಕೆಯಲ್ಲಿ ಮರೆಯದೇ ಅಂಥವರ ಹೆಸರೊಂದಿರಲಿ.

ಸರ್ಕಾರಿ ಆಮಂತ್ರಣ ಪತ್ರಿಕೆಗಳ ಕಥೆ ಒಂದು ಕಡೆಯಾದರೆ ಮನೆಮನೆ ಕಥೆ ಮತ್ತೆ ಬೇರೆಯೇ ಇದೆ. ಮದುವೆ, ಉಪನಯನ ಸಮಾರಂಭಗಳಿಗೆ ತಮ್ಮ ಸುಖಾಗಮನ ಬಯಸುವವರು ಅಂತ ಒಂದು ಲೀಸ್ಟ್ ಇರುತ್ತದೆ. ಇದರಲ್ಲೂ ಅಷ್ಟೇ. ಕುಟುಂಬದವರ, ಮಾವಂದಿರ, ಬಾವಂದಿರ, ಅಳಿಯಂದಿರ ಯಾರ ಹೆಸರನ್ನೂ ಬಿಡಲಿಕ್ಕಿಲ್ಲ ಮತ್ತು ಅವರ ಹೆಸರು ಸ್ವಲ್ಪ ಮೇಲೆ ಕೆಳಗೆಯೂ ಆಗುವಂತಿಲ್ಲ. ಒಟ್ಟಿನಲ್ಲಿ ಆಮಂತ್ರಣ ಪತ್ರಿಕೆ ಕೇವಲ ಆಮಂತ್ರಣ ಪತ್ರಿಕೆಯಷ್ಟೇ ಅಲ್ಲ. ಅದು ಪ್ರತಿಷ್ಠೆಯ ಕೇಂದ್ರವೂ ಹೌದು.

**ಅನಾಹೂತೋ ವಿಶೇದ್ಯಸ್ತು ಅದೃಷ್ಟೋ ಬಹುಭಾಷತೇ ।**
**ಆತ್ಮಾನಂ ಮಾನ್ಯತೇ ಪ್ರೀತಂ ಭೂಪಾಲಸ್ಯ ಸದುರ್ಮತಿಃ ॥**

ಕರೆಯದೇ ಇದ್ದರೂ ಹೋಗುವವನು, ಪ್ರಶ್ನೆ ಮಾಡದಿದ್ದರೂ ಮಾತನಾಡುವವನು, ರಾಜನಿಗೆ ತಾನು ಅತ್ಯಂತ ಪ್ರಿಯನೆಂದು ತಿಳಿಯುವವನು ದುರ್ಮತಿಗಳೇ ಸೈ ಎಂದು ಸುಭಾಷಿತ ವರ್ಣಿಸುತ್ತದೆ. ಹೀಗಾಗಿ ಕರೆಯುವುದು ನಮ್ಮ ಆದ್ಯ ಕರ್ತವ್ಯ.

ಇನ್ನು ಆಮಂತ್ರಣ ಪತ್ರಿಕೆಗಳೋ ಅದ್ಭುತ. ಅದು ಕೇವಲ ಆಮಂತ್ರಣ ಪತ್ರಿಕೆಯಷ್ಟೇ ಆಗಿರದೇ ಅವರವರ ಆಸ್ತಿ, ಅಂತಸ್ತುಗಳ ಸಂಕ್ಷಿಪ್ತ ರೂಪ ಎಂದರೂ ಅತಿಶಯೋಕ್ತಿಯಲ್ಲ. ಮಿರಿಮಿರಿ ಮಿಂಚುವ ನಾನಾ ಆಕಾರದ ಆಮಂತ್ರಣ ಪತ್ರಿಕೆಗಳು ವಿವಿಧ ದೇವರುಗಳ ಮುಖಾಕೃತಿಯೊಂದಿಗೆ ನೂರಾರು ಜನರ ಮನೆ ಬಾಗಿಲಿಗೆ ಬಿದ್ದಿರುತ್ತದೆ. ಗಣಪತಿಯೋ, ಶಿವ–ಪಾರ್ವತಿಯರೋ, ಕೃಷ್ಣ–ರಾಧೆಯರೋ ನಾಲ್ಕಾರು ಜನರ ಕಾಲಿನ ಒದೆತಕ್ಕೆ ಸಿಕ್ಕಿ ನರಳುವಾಗ ನಿಜಕ್ಕೂ ಬೇಸರವೆನಿಸುತ್ತದೆ. ಕೆಲವೊಂದು ಆಮಂತ್ರಣ ಪತ್ರಿಕೆಗಳಂತೂ ದಿನಾಂಕಕ್ಕೆ ಮುಂಚೆಯೇ ಮಕ್ಕಳ ಕೈಯಲ್ಲಿ ಆಟಿಕೆಯಾಗಿರುತ್ತದೆ. ಆಮಂತ್ರಣ ಪತ್ರಿಕೆಯ ಮೇಲಿನ ಮುಖಚಿತ್ರವನ್ನು ಕತ್ತರಿ ಹಿಡಿದು ಕತ್ತರಿಸುವವರ ಸಂಖ್ಯೆಯೂ ಕಡಿಮೆಯಿಲ್ಲ ನಮ್ಮಲ್ಲಿ. ಆಮಂತ್ರಣ ಪತ್ರಿಕೆಗಳಿಗೂ, ಕ್ಯಾಲೆಂಡರುಗಳಿಗೂ ಏನು ವ್ಯತ್ಯಾಸ ಎಂಬುದೇ ಒಮ್ಮೊಮ್ಮೆ ತಿಳಿಯದಾಗುತ್ತದೆ.

ಕರೆಯೋಲೆಯ ಕಥೆ ಇವಿಷ್ಟೇ ಅಲ್ಲ. ಇವು ಮುದ್ರಣಾಲಯದಲ್ಲಿ ಹುಟ್ಟಿದಾಗಿನಿಂದ, ಕಸದಬುಟ್ಟಿಯಲ್ಲಿ ಸಾಯುವವರೆಗೂ ಪಡುವ ವ್ಯಥೆ ಅಷ್ಟಿಷ್ಟಲ್ಲ. ಎಷ್ಟೋ ಜನರ ಬಾಯಲ್ಲಿ ಸಿಕ್ಕು ಇವು ನರಳಾಡುತ್ತವೆ. ಉದ್ದುದ್ದ ಆಮಂತ್ರಣ ಪತ್ರಿಕೆಗಳಂತೂ ಹತ್ತಾರು ಮಡಿಕೆಗಳಾಗಿ ಕೆಲವರ ಸಣ್ಣ ಕಿಸೆಗಳಲ್ಲಿ ಸಿಕ್ಕು ಅದೇಗೋ ಉಸಿರಾಡಿಕೊಂಡು ಬದುಕಿರುತ್ತದೆ. ಮತ್ತೆ ಮಕ್ಕಳ ಕೈಯಲ್ಲಿ ಸಿಕ್ಕರಂತೂ ಅದರ ಕಥೆ ಹರೋಹರ. ಹಾಗೆಯೇ ಇದು ಅನೇಕ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತ ಬರವಣಿಗೆಯ ಸಾಧನವಾಗಿಯೂ, ಸುಂದರ ಮುಖಪುಟ ವಿನ್ಯಾಸಕ್ಕೆ ಉಪಕಾರಿಯಾಗಿಯೂ ತನ್ನ ಸಾರ್ಥಕತೆ ಕಂಡುಕೊಳ್ಳುತ್ತದೆ.

ಜಗಳ ಮಾಡಿಯಾದರೂ ಆಮಂತ್ರಣ ಪತ್ರಿಕೆಗಳಲ್ಲಿ ಹೆಸರು ಹಾಕಿಸಿಕೊಳ್ಳುವ ಜನ ಕಾರ್ಯಕ್ರಮಕ್ಕೆ ಹೋಗುವುದರಲ್ಲೂ ತಮ್ಮ ನಿಷ್ಠೆ ತೋರಬೇಕು. ತಮಗೆ ಬರಲಿಕ್ಕಾಗುವುದಿಲ್ಲ ನೀವು ನಮ್ಮ ಬದಲಿಗೆ ಬೇರೆ ಸಜ್ಜನರ ಹೆಸರು ಹಾಕಿ ಎನ್ನುವುದರಲ್ಲಿ ಗಂಟೇನೂ ಖರ್ಚಾಗುವುದಿಲ್ಲವೆನಿಸುತ್ತದೆ. ಹೆಸರು ಹಾಕಿದ್ದಾರೆಂದು ಎಷ್ಟೋ ಹೊತ್ತಿಗೆ ಬಂದು ತಮ್ಮ ಭಾಷಣವೊಂದನ್ನು ಗಟ್ಟಿಯಾಗಿ ಬಿಗಿದು ಇನ್ನೊಬ್ಬರ ಮಾತನ್ನು ಕೇಳುವ ಸೌಜನ್ಯವನ್ನೂ ತೋರದೇ ಹೋಗುವವರೇನು ಕಡಿಮೆ?! ಆಮಂತ್ರಣ ಊಟಕ್ಕಷ್ಟೇ ಎಂದು ಗಡದ್ದಾಗಿ ಉಂಡು ತೇಗಿ ಹೋಗುವವರಿಗೂ ಕಡಿಮೆಯಿಲ್ಲ.

**ಕರೆಯದೆಲೆ ಬರುವವನ, ಬರೆಯದೆಲೆ ಓದುವನ**
**ಬರಿಗಾಲಿಂದ ನಡೆವವನ ಕರೆತಂದು**
**ಕೆರದಿ ಹೊಡೆಯೆಂದ ಸರ್ವಜ್ಞ॥**



ಹೆಲಿಕಾಪ್ಟರ್ – ಬ್ರಾಕೆಟ್

ನೀವು ಆಮಂತ್ರಣ ಪತ್ರಿಕೆ ಕೊಟ್ಟು ಕರೆದಾಗೆಲ್ಲಾ ನಿಮ್ಮ ಮನೆಗೋ, ಕಲ್ಯಾಣ ಮಂಟಪಕ್ಕೋ, ಸಮಾರಂಭ ನಡೆಯುವ ಸ್ಥಳಗಳಿಗೋ ಸಾವಿರ, ಸಾವಿರ ಜನ ಬಂದು ಪಾಯಸದೂಟ ಮಾಡಿ ಹೋಗಬಹುದು. ನಿಮಗೆ ಭರ್ಜರಿ ಉಡುಗೊರೆಗಳನ್ನೂ ತಂದು ಕೊಡಬಹುದು. ಅಥವಾ ಹಾರ ತುರಾಯಿಗಳನ್ನೇ ನಿಮಗೆ ಕೊಡಿಸಬಹುದು. ಆದರೆ ಅದೇ ಜನ ನೀವು ಅನಾರೋಗ್ಯ ಪೀಡಿತರಾದಾಗ, ಸಂಕಷ್ಟಕ್ಕೆ ಸಿಲುಕಿದಾಗ, ತೀವ್ರತರವಾದ ಸೋಲನ್ನು ಅನುಭವಿಸಿದಾಗ ನಿಮ್ಮ ಸನಿಹಕ್ಕೆ ಬಂದಾರೇ?! Go to help your friend in problem without invitation and don't go to your friend in happiness without invitation. ಆಮಂತ್ರಣವಿಲ್ಲದೇ ಹೋದರೂ ನಿಮ್ಮ ಸ್ನೇಹಿತ ಸಮಸ್ಯೆಯಲ್ಲಿರುವಾಗ ಸಹಾಯ ಮಾಡುವುದಕ್ಕೆ ತೆರಳಿ ಮತ್ತು ಆಮಂತ್ರಣವಿಲ್ಲದೇ ನಿಮ್ಮ ಸ್ನೇಹಿತನ ಸಂತೋಷದಲ್ಲಿ ಪಾಲ್ಗೊಳ್ಳಬೇಡಿ.

* * *

ಮಕ್ಕಳಿಗಾಗಿ ನೀತಿ ಕಥೆಗಳು...

# ಮುಂಜಾನೆ ಪ್ರಾರ್ಥನೆ

–ಲೇ: ಅರ್ಚನಾ ಭಾರದ್ವಾಜ

(ದೇವರು, ಪ್ರಾರ್ಥನೆ ಎಂಬ ಕ್ರಿಯೆಗಳು ಮನುಷ್ಯನಲ್ಲಿ ಆತ್ಮವಿಶ್ವಾಸ, ಸಂತೋಷ, ನೆಮ್ಮದಿಯನ್ನು ತಂದುಕೊಡುತ್ತವೆ. ನಂಬಿಕೆಯೇ ಸಂತೋಷದ ಬುನಾದಿ. ಒಬ್ಬ ಮನುಷ್ಯನು ಚಟುವಟಿಕೆಯಿಂದ ಇರಲು ಪ್ರಾರ್ಥನೆ ತುಂಬಾ ಮುಖ್ಯ.)

ಭಾರತೀಯ ಪರಂಪರೆಯಲ್ಲಿ ಪ್ರತಿಯೊಂದು ಕ್ಷಣಕ್ಕೂ ಒಂದೊಂದು ವಿಶೇಷ ಉಂಟು. ಅದೇ ರೀತಿ ಮಾಡುವ ಪ್ರತಿ ಕೆಲಸವೂ ಅರ್ಥಪೂರ್ಣ. ಭಾರತೀಯರನ್ನು ನಾವು ಕಾಕ್‌ಟೈಲ್‌ಗೆ ಹೋಲಿಸಿ ನೋಡಬಹುದು. ಪ್ರಾಚೀನ ಮತ್ತು ಆಧುನಿಕತೆಗಳ ಸಂಗಮ. ಎಂತಹ ವಾತಾವರಣದಲ್ಲಿ ಇದ್ದರೂ ಸಹ ತಮ್ಮ ಸಂಸ್ಕೃತಿ, ಸಂಸಾರವನ್ನು ಮರೆಯುವುದಿಲ್ಲ. ಹೀಗೆ ಬದುಕು ಸದಾಕಾಲ ಕಾಕ್‌ಟೈಲ್‌ನಂತೆ ಇರಬೇಕು. ಆಗಲೇ ಆಸಕ್ತಿಯಿಂದ ನಾವು ಬದುಕನ್ನು ಸಾಗಿಸಲು ಸಾಧ್ಯ. ಬದುಕಿಗೆ ಹವ್ಯಾಸಗಳು ತುಂಬಾ ಮುಖ್ಯ. ಅಂತಹ ಹವ್ಯಾಸಗಳನ್ನು ರೂಪಿಸಿಕೊಳ್ಳುವ ಮೊದಲು ನಾವು ನೆಮ್ಮದಿಯಿಂದ, ಪ್ರಶಾಂತವಾಗಿ ಇರಬೇಕು. ಆ ರೀತಿ ಇರಲು ಹೇಗೆ ಸಾಧ್ಯ? ಎಂದು ನೀವು ಕೇಳುವುದಾದರೆ ನಾವು ಪ್ರತಿನಿತ್ಯ ಕೆಲವು ಕೆಲಸಗಳನ್ನು ಕಡ್ಡಾಯವಾಗಿ ಮಾಡಬೇಕು. ಆಗ ಮನಸ್ಸು ಚಲಿಸುವುದಿಲ್ಲ. ಮನಸ್ಸು ಚಂಚಲತೆಗೆ ಸಿಲುಕುವುದಿಲ್ಲ. ಅಂತಹ ಶಕ್ತಿ ಪ್ರಾರ್ಥನೆಗೆ ಉಂಟು. ಪ್ರಾರ್ಥನೆ ಎಂದರೆ ದೇವರನ್ನು ನೆನೆಯುವುದು ಮಾತ್ರ ಅಲ್ಲ. ಇಡೀ ದಿನ ನಮ್ಮನ್ನು ನಾವು ಸಂತೃಪ್ತಿಯಿಂದ ಇರಿಸಿಕೊಳ್ಳಲು ಸಾಧ್ಯವಾಗುವುದು. ಅಂತಹ ಶಕ್ತಿ, ದಿವ್ಯ ಚೇತನ ಪ್ರಾರ್ಥನೆಗೆ ಉಂಟು.

ಪ್ರಾರ್ಥನೆ ಎಂದರೆ ದೇವರನ್ನು ನೆನೆಯುವ ಕೆಲಸ ಮಾತ್ರ ಅಲ್ಲ.

**ದೇವರು ಎಂದರೆ ನಂಬಿಕೆ.**
**ದೇವರು ಎಂದರೆ ಭಾವ.**
**ದೇವರು ಎಂದರೆ ಆತ್ಮವಿಶ್ವಾಸ.**
**ದೇವರು ಎಂದರೆ ರಕ್ಷಕ.**

ಹೀಗೆ ಮನುಷ್ಯನು ತನ್ನ ದೈನಂದಿನ ಬದುಕಿನಲ್ಲಿ ದೇವರನ್ನು ಹಲವಾರು ರೂಪದಲ್ಲಿ ಕಾಣುವನು. ಆದರೆ ಭಾರತೀಯರಿಗೆ ಅತ್ಯುತ್ತಮವಾದ ಸಂಸ್ಕಾರ ಉಂಟು. ಅವರು ಸಂಸ್ಕಾರವನ್ನು ಬಿಟ್ಟು ಬದುಕಲಾರರು. ಸಂಸ್ಕಾರವನ್ನು ಉಳಿಸಿಕೊಂಡು ಬಂದಿರುವುದರಿಂದಲೇ ಭಾರತೀಯರಿಗೆ ಇಡೀ ವಿಶ್ವದಲ್ಲಿ ಅತ್ಯಂತ ಗೌರವ ದೊರಕಿದೆ. ಭಾರತೀಯರ ನಂಬಿಕೆಗೆ ವಿಶ್ವದ ಜನರು ಬೆಲೆ ಕೊಡುವರು. ಹೀಗೆ ದೇವರು ಮತ್ತು ವಿಜ್ಞಾನ ಎರಡೂ ಪರಸ್ಪರ ಜೊತೆಯಲ್ಲಿ ನಡೆಯುವಾಗ ಬದುಕು ತುಂಬಾ ಸುಂದರ. ದೇವರು ಎನ್ನುವವನು ಒಬ್ಬ ಮನುಷ್ಯನಿಗೆ ಮಾನಸಿಕವಾಗಿ ನೆಮ್ಮದಿಯನ್ನು ನೀಡಿದರೆ, ವಿಜ್ಞಾನ ಮನುಷ್ಯನನ್ನು ಸಾಮಾಜಿಕವಾಗಿ ಮುಂದೆ ನಡೆಯುವಂತೆ ಮಾಡುವುದು.

ಪ್ರತಿ ಮುಂಜಾನೆ ಮನುಷ್ಯನಿಗೆ ಹೊಸ ಜನ್ಮ. ಮನುಷ್ಯನು ರಾತ್ರಿ ಮಲಗಿದಾಗ ಬದುಕು ನಶ್ವರ. ನಾಳೆ ಮುಂಜಾನೆಯನ್ನು ಕಾಣುತ್ತಾನೆ ಅಥವಾ ಇಲ್ಲ ಎಂದು ಹೇಳುವುದಾದರೂ ಹೇಗೆ? ನಾವು ಮುಂಜಾನೆ ಎದ್ದ ಕೂಡಲೇ ಇಂದೂ ಸಹ ನನ್ನನ್ನು ಬದುಕಲು ಬಿಟ್ಟ ದೇವರಿಗೆ ಕೃತಜ್ಞತೆಗಳನ್ನು ಹೇಳುವುದು ಬೇಡವೇ? ಹೀಗೆ ಮನುಷ್ಯನು ಜನ್ಮ ಕೊಟ್ಟ ದೇವರಿಗೆ ವಂದನೆಗಳನ್ನು ಅರ್ಪಿಸುತ್ತಲೇ ಇರಬೇಕು. ಇಲ್ಲದಿದ್ದರೆ ಮನುಷ್ಯನು ಭಾವನಾರಹಿತನಾಗಿ ಬಾಳಬೇಕಾಗುವುದು.

ಒಬ್ಬ ಮನುಷ್ಯನು ಮುಂಜಾನೆ ಎದ್ದು ತಾನು ಮಲಗಿದ್ದ ಹಾಸಿಗೆಯ ಮೇಲೆ ಕುಳಿತುಕೊಂಡು ಕಣ್ಣುಗಳನ್ನು ಮುಚ್ಚಿಕೊಂಡಿದ್ದು, ತನ್ನ ಎರಡೂ ಅಂಗೈಗಳನ್ನು ಅಗಲ ಮಾಡಿಕೊಂಡು ಒಂದು ಶ್ಲೋಕವನ್ನು ಹೇಳುವನು. ಈ ಸಂಪ್ರದಾಯ ಭಾರತೀಯರಲ್ಲಿ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಮನುಷ್ಯನು ಸುಖ, ಸಂತೋಷದಿಂದ ಬದುಕಲು ದೇವರ ಅನುಗ್ರಹ ಬೇಕು. ದೇವರು ಎಂದರೆ ನಮ್ಮಲ್ಲಿ ಅಂದರೆ ಭಾರತೀಯರು ತ್ರಿಮೂರ್ತಿಗಳನ್ನು ನೆನೆಸುವರು. ತ್ರಿಮೂರ್ತಿಗಳಿಂದಲೇ ಬದುಕು. ತ್ರಿಮೂರ್ತಿಗಳ ತಾಯಿ ಜಗನ್ಮಾತೆ.



ಹೀಲಿಯಂ ಅನಿಲ – ಲಾಕಿಯರ್

ಜಗನ್ಮಾತೆ ಮತ್ತು ತ್ರಿಮೂರ್ತಿಗಳಿಗೆ ವಂದಿಸುತ್ತಾ ತಮ್ಮ ಮುಂಜಾನೆಯನ್ನು ಮನುಷ್ಯನು ನೋಡಬೇಕು.

**ಕರಾಗ್ರೆ ವಸತೇ ಲಕ್ಷ್ಮೀ । ಕರಮಧ್ಯೇ ಸರಸ್ವತಿ ।**
**ಕರಮೂಲೇ ಸ್ಥಿತೇ ಗೌರೀ । ಪ್ರಭಾತೇ ಕರದರ್ಶನಂ ॥**

ಈ ರೀತಿ ಹೇಳಿಕೊಳ್ಳಬೇಕು. ತಮ್ಮನ್ನು ಸಾಕಿ, ಸಲುಹುವ ಜಗನ್ಮಾತೆಯನ್ನು ಸ್ಮರಿಸಬೇಕು. ಸಕಲ ಜಗತ್ತು ಹೆಣ್ಣಿನಿಂದಲೇ ಎಂದು ಪುರಾಣಗಳು, ವೇದಗಳು ಹೇಳುತ್ತವೆ. ಹೆಣ್ಣಿನಿಂದಲೇ ಸಕಲ ಕ್ರಿಯೆಗಳು. ಭೂಮಿಯನ್ನು ಹೆಣ್ಣಿಗೆ ಹೋಲಿಸುವರು. ಮನುಷ್ಯನು ವಿಶ್ವಾಸಹೀನರು. ದಿನದ ಇಪ್ಪತ್ನಾಲ್ಕು ಗಂಟೆಗಳ ಕಾಲ ಭೂಮಿಯ ಮೇಲೆ ಕುಳಿತು, ಮಲಗಿ, ನಡೆದಾಡುತ್ತಿರುತ್ತೇವೆ. ಆದರೆ ಒಂದು ಬಾರಿಯಾದರೂ ಕೃತಜ್ಞತೆಗಳನ್ನು ಅರ್ಪಿಸುವುದಿಲ್ಲ. ಭೂಮಿ ತಾಯಿಗೆ ಕೃತಜ್ಞತೆಗಳನ್ನು, ವಂದನೆಗಳನ್ನು ಹೇಳುವಾಗ ಕೆಳಗೆ ಹೇಳಿರುವ ಶ್ಲೋಕವನ್ನು ಹೇಳಿಕೊಳ್ಳಬೇಕು.

**ಸಮುದ್ರವಸನೇ ದೇವಿ । ಪರ್ವತಸ್ಥನ ಮಂಡಲೇ ।**
**ವಿಷ್ಣುಪತ್ನೀಃ ನಮಸ್ತುಭ್ಯಃ । ಪಾದಸ್ಪರ್ಶಂ ಕ್ಷಮಸ್ವಮೇ ॥**

ಕಣ್ಣುಗಳನ್ನು ಮುಚ್ಚಿಕೊಂಡು ಮೇಲೆ ಹೇಳಿರುವ ಶ್ಲೋಕವನ್ನು ಹೇಳಿಕೊಂಡು ಬಲಗಾಲನ್ನು ಭೂಮಿಗೆ ತಾಕಿಸಿ, ಕಣ್ಣುಗಳನ್ನು ಬಿಟ್ಟು ನಿಮ್ಮ ಅಂಗೈನ್ನು ತಾಕಿಸಿ ನಮಸ್ಕಾರ ಮಾಡಬೇಕು. ಇಡೀ ದಿನ ನಾವು ನಮ್ಮ ಕೆಲಸಗಳಲ್ಲಿ ತೊಡಗಿರುತ್ತೇವೆ. ಯಾವುದೇ ರೀತಿಯ ಅಪಾಯ, ಆಪತ್ತುಗಳು ಬಾರದಂತೆ ತಡೆದು, ನಮ್ಮನ್ನು ನೀನೇ ರಕ್ಷಿಸಬೇಕು ಎಂದು ಬೇಡಿಕೊಳ್ಳಬೇಕು. ಹೀಗೆ ಮುಂಜಾನೆ ದೇವರ ಪ್ರಾರ್ಥನೆಯಿಂದ ಪ್ರಾರಂಭವಾದ ಬದುಕು ರಾತ್ರಿ ಮಲಗುವಾಗ ನಮ್ಮನ್ನು ಇಂದು ಕಾಪಾಡಿದ್ದಕ್ಕೆ ದೇವಿಗೆ ವಂದನೆಗಳನ್ನು ಅರ್ಪಿಸಿ ನಿದ್ರೆಗೆ ಜಾರಿ. ಆಗ ಬದುಕು ತುಂಬಾ ಸುಂದರ, ಸಮೃದ್ಧ ಎಂಬ ಭಾವ ಮೂಡುವುದರಲ್ಲಿ ಸಂದೇಹ ಇಲ್ಲವೇ ಇಲ್ಲ.

**ಅಣಿಮುತ್ತು: "ದೇವರಿಗಿಂತ ಹಿರಿಯರು ಬೇರೆ ಯಾರೂ ಇಲ್ಲ."**

* * *

ಬದುಕಲೊಂದಿಷ್ಟು ಆಪ್ತಮಾತುಗಳು...

# ನಾವೂ ಸಕಾರಾತ್ಮಕ ಚಿಂತಕರಾಗಬಹುದು

–ಲೇ:ಬಿ.ಎನ್.ರಮೇಶ ಬೊಂಗಾಳೆ
ಎಂ.ಎ.,ಬಿ.ಇಡಿ.,ಆರ್.ಬಿ.ಪಿ.

ಸಕಾರಾತ್ಮಕ ವ್ಯಕ್ತಿಯಾಗಲು ಮೊದಲು ಬೇಕಾಗಿರುವುದು ಇಚ್ಛಾಶಕ್ತಿ. ಇಚ್ಛಾಶಕ್ತಿಯನ್ನು ಮಾನಸಿಕವಾಗಿ ರೂಢಿಸಿಕೊಂಡ ಕೂಡಲೇ ನಮ್ಮೊಳಗೆ ಪರಿವರ್ತನೆಯ ಪ್ರಕ್ರಿಯೆಯನ್ನು ಆರಂಭಿಸಿಕೊಳ್ಳಲು ನಿಶ್ಚಯಿಸಿಕೊಳ್ಳಬೇಕು. ನಕಾರಾತ್ಮಕತನದಿಂದ ಸಕಾರಾತ್ಮಕ ರೂಪದಲ್ಲಿ ಪರಿವರ್ತನೆ ಹೊಂದುವ ನಂಬಿಕೆ ಯಾರಲ್ಲಾದರೂ ಇದ್ದರೆ ಅಂತಹವರು ಖಂಡಿತವಾಗಿಯೂ ಪರಿವರ್ತಿತರಾಗುವರು ಎಂಬ ಆಶ್ವಾಸನೆಯನ್ನು ಕೊಡಬಹುದು.

'ಜಿಜ್ಞಾಸೆ' (ಕುತೂಹಲ)ಯೂ ಕೂಡ ನಕಾರಾತ್ಮಕತನದಿಂದ ಸಕಾರಾತ್ಮಕ ರೂಪದಲ್ಲಿ ಪರಿವರ್ತನೆ ಹೊಂದುವ ನಿಟ್ಟಿನಲ್ಲಿ ಒಂದು ಪ್ರಮುಖವಾದ ಪಾತ್ರವಹಿಸುತ್ತದೆ. ಒಂದೊಮ್ಮೆ ನಾವು ಸಕಾರಾತ್ಮಕ ಚಿಂತನೆಯುಳ್ಳ ವ್ಯಕ್ತಿಯಾಗಿದ್ದಲ್ಲಿ ಬಹುಶಾ ಆ ರೀತಿ ಹೇಗಾದೆವು ಎಂಬುದು ತಿಳಿದಿರುವುದಿಲ್ಲ. ಸಂದರ್ಭಗಳು ಒದಗಿದಾಗ ಯಾವುದೇ ಒಂದು ವಿಷಯದಲ್ಲಿ ನಂಬಿಕೆಯನ್ನು ಇಡಲು ಪ್ರಯತ್ನಿಸಿದ್ದೆವೋ ಆ ಸಂದರ್ಭಗಳಲ್ಲೆಲ್ಲ ನಾವು ಸಕಾರಾತ್ಮಕ ಪ್ರಕ್ರಿಯೆಯಲ್ಲಿ ತೊಡಗಿದ್ದೆವು ಎಂದೇ ಅರ್ಥ. ಯಾವ ಕ್ಷಣ ಆ ನಿಟ್ಟಿನಲ್ಲಿ ಪ್ರಯತ್ನಶೀಲರಾಗಿದ್ದೆವೋ ಆ ಕ್ಷಣದಿಂದಲೇ ನಾವು ಹೊಸತಾದ ಮತ್ತು ಬಹು ಆಯಾಮಗಳುಳ್ಳ ವಿಚಾರಗಳ ಶಕ್ತಿ ಪ್ರವಾಹದಲ್ಲಿದ್ದೆವು ಎಂದು ತಿಳಿಯಬೇಕು.

ಈ ಮೇಲೆ ಹೇಳಿದಂತೆ ಮೊದಲ ಆದ್ಯತೆ 'ಇಚ್ಛಾಶಕ್ತಿ'ಯದ್ದಿರಬೇಕು. ಆದರೆ ಅದಷ್ಟೇ ಸಾಕೆನ್ನಿಸುವುದಿಲ್ಲ. "ಪ್ರಬಲವಾದ ಇಚ್ಛಾಶಕ್ತಿ"ಯ ಅಗತ್ಯವಿದೆ. ಸಕಾರಾತ್ಮಕ ಚಿಂತಕರೆನ್ನಿಸಲು ನಾವು ಸಂಪೂರ್ಣ–ಇಚ್ಛಾಶಕ್ತಿಯನ್ನು ಹೊಂದಿರಬೇಕೇ ಹೊರತು ಮನಸ್ಸಿಲ್ಲದ ಮನಸ್ಸಿನಿಂದಲ್ಲ. ನಮ್ಮೊಳಗೆ ಪ್ರಬಲವಾದ ಇಚ್ಛಾಶಕ್ತಿ ಇಲ್ಲವೆಂದಾಗ ಸಫಲತೆಯ ಅವಕಾಶವೂ ಶೂನ್ಯವಾಗಿರುತ್ತದೆ. ಆದರೆ ಪ್ರಬಲ ಇಚ್ಛಾಶಕ್ತಿಯ ಜತೆಗೆ ಅದನ್ನು ಶಾಶ್ವತವಾಗಿ ಉಳಿಸಿಕೊಂಡಾಗ ನಮ್ಮ ಬಳಿ ಸಕಾರಾತ್ಮಕ ವ್ಯಕ್ತಿಯಾಗಲು ಬೇಕಾದ ಮೂಲ ಸಾಧನ–ಸಾಮಗ್ರಿಗಳಿವೆ ಎಂದಾಗುತ್ತದೆ.

ಸಕಾರಾತ್ಮಕ ಚಿಂತನೆಯು ನಕಾರಾತ್ಮಕ ಚಿಂತನೆಗೆ ವ್ಯತಿರಿಕ್ತವಾದುದಾಗಿದೆ. ನಕಾರಾತ್ಮಕವಾದಿಯು ವಿಶ್ವಾಸರಹಿತನಾಗಿರುತ್ತಾನೆಂದರೆ ಸಕಾರಾತ್ಮಕ ಚಿಂತಕ ವಿಶ್ವಾಸ ಸಹಿತ ಧೋರಣೆಯವನಾಗಿರುತ್ತಾನೆ. ಓರ್ವ ಆತ್ಮಿಕ ಸಂದೇಹವುಳ್ಳವನಾಗಿದ್ದರೆ ಮತ್ತೋರ್ವ ಆತ್ಮವಿಶ್ವಾಸ ತುಂಬಿಕೊಂಡಿರುವನಾಗಿರುತ್ತಾನೆ. ಓರ್ವ ಕಠಿಣ ಸಂದರ್ಭಗಳನ್ನೆದುರಿಸಿ ಸೋಲನ್ನು ಸ್ವೀಕರಿಸುತ್ತಾನೆ. ಮತ್ತೋರ್ವ ಸಂದರ್ಭಗಳು ಕಠಿಣವೆನ್ನಿಸಿದಾಗ ಅವುಗಳ ಮೇಲೆ ಗೆಲುವನ್ನು ಸಾಧಿಸುತ್ತಾನೆ. ನಕಾರಾತ್ಮಕ ಚಿಂತಕ ನಿರಾಶೆಯ ಮೂಲಕ ಸೃಜನಾತ್ಮಕವಾದ ಶಕ್ತಿಯ ಪ್ರವಾಹವನ್ನು ತಡೆಯುತ್ತಾನೆ. ದೇವರು ಮತ್ತು ತನ್ನ ಮೇಲಿನ ನಂಬಿಕೆಯಿಂದ ಶಕ್ತಿಯನ್ನು

ರೂಢಿಸಿಕೊಳ್ಳುವ ಸಕಾರಾತ್ಮಕವಾದಿಯು ಶಕ್ತಿ ಮತ್ತು ಸೃಜನಾತ್ಮಕವಾದ ಹಾದಿಯನ್ನು ಬೆರಗುಪಡುವಷ್ಟರ ಮಟ್ಟಿಗೆ ಮತ್ತಷ್ಟು ಸುಗಮಗೊಳಿಸಿಕೊಳ್ಳುತ್ತಾನೆ. ಒಟ್ಟಾರೆ ಹೇಳುವುದಾದರೆ ನಕಾರಾತ್ಮಕ ಚಿಂತಕನಲ್ಲಿ 'ಅಸಂಭವವನ್ನಷ್ಟೇ' ಕಾಣುವ ಪ್ರವೃತ್ತಿ ಇರುತ್ತದೆ. ಅದರ ಪರಿಣಾಮವಾಗಿ ಸೋಲು ಅವನ ಪಾಲಿಗೆ ಕಟ್ಟಿಟ್ಟ ಬುತ್ತಿಯಾಗುತ್ತದೆ. ಅದೇ ಸಕಾರಾತ್ಮಕ ಚಿಂತಕನು ಸಾಧ್ಯದ ಕಲ್ಪನೆಯನ್ನು ಹೊಂದಿರುವನಲ್ಲದೆ ತನ್ನ ಅಥವಾ ತನ್ನ ಯೋಜನೆಗಳೆಡೆಗೆ ಸಫಲತೆಯನ್ನು ಸೆಳೆದುಕೊಳ್ಳುತ್ತಾನೆ.

ನಕಾರಾತ್ಮಕತೆಯಿಂದ ಸಕಾರಾತ್ಮಕತೆಯೆಡೆಗೆ ಸಾಗಬೇಕಾದರೆ ಎಲ್ಲಕ್ಕಿಂತ ಮೊದಲು ಸಣ್ಣ-ಸಣ್ಣ ವಿಷಯಗಳ ಬಗ್ಗೆ ಸಕಾರಾತ್ಮಕವಾಗಿ ವಿಚಾರಿಸಲಾರಂಭಿಸಬೇಕು. ಧೀರ್ಘಕಾಲದಿಂದ ನೆಲೆಯೂರಿರಬಹುದಾದ ನಕಾರಾತ್ಮಕವಾದ ಮಾನಸಿಕ ಪ್ರವೃತ್ತಿಯನ್ನು ಸಣ್ಣ-ಸಣ್ಣ ಸಕಾರಾತ್ಮಕವಾದ ವಿಚಾರಗಳಿಂದಾವೃತಗೊಳಿಸಬೇಕು. ಉದಾಹರಣೆಗೆ-"ನಾನು ಮಾಡಬಲ್ಲೆ", "ಇದು ಸಾಧ್ಯ", "ಇದು ಖಂಡಿತವಾಗಿಯೂ ಸಾಧ್ಯ", "ಆಗುತ್ತಿರುವುದೆಲ್ಲ ಒಳ್ಳೆಯದೇ ಆಗುತ್ತಿದೆ" ಇತ್ಯಾದಿ. ಮನಸ್ಸಿನಲ್ಲಿ ಈ ರೀತಿಯ ಸಕಾರಾತ್ಮಕವಾದ ವಿಚಾರ ತಂದುಕೊಂಡೊಡನೆಯೇ ಒಂದು ತಾಜಾ ಹಾಗೂ ಸಣ್ಣ ಪ್ರಮಾಣದ ಮಾನಸಿಕವಾದ ಮಾರ್ಗವು ತನ್ನಿಂತಾನೇ ತೆರೆದುಕೊಳ್ಳಲು ಆರಂಭಿಸುತ್ತದೆ. ಕೆಲ ಸಮಯದ ತನಕ ಪ್ರತಿದಿನವೂ ಪುನರಾವರ್ತಿಸಿದರೆ ಹಾಗೂ ಹೆಚ್ಚು ಶಕ್ತಿಶಾಲಿಯಾದ ವಿಚಾರಗಳ ಮೂಲಕ ಅದನ್ನನುಸರಿಸಿದರೆ ಅದುವೇ ಅಭ್ಯಾಸವಾಗಿ ಹೋಗುವುದಲ್ಲದೆ ಆ ಅಭ್ಯಾಸವೇ ಆ ಹಾದಿಗೆ ಸ್ಥಾಯಿತ್ವವನ್ನೊದಗಿಸುವುದಲ್ಲದೆ ಕಡೆಗೆ ಹಳತಾದ ನಕಾರಾತ್ಮಕವಾದ ಮಾರ್ಗವನ್ನು ಮುಚ್ಚಿಬಿಡುತ್ತದೆ. ಆಗ ಮನಸ್ಸಿನ ಪ್ರಬಲವಾದ ವಿಚಾರವು ಸಕಾರಾತ್ಮಕವಾದ ಮಾನಸಿಕ-ಪ್ರವೃತ್ತಿಯದ್ದಾಗಿ ಬಿಡುತ್ತದೆ.

* * *

ಶ್ರೀಧರ ಸ್ಮರಣೆ...

## ಇರುವೆಗಳನ್ನೂ ಹಿಂಸಿಸದ ಶ್ರೀ ಶ್ರೀಧರರು

-ಲೇ: ಜಿ.ಟಿ.ಶ್ರೀಧರ ಶರ್ಮ

ಶ್ರೀ ಶ್ರೀಧರಸ್ವಾಮಿಗಳು ಎಂದೂ ಹಿಂಸೆಯನ್ನು ಸಹಿಸುತ್ತಿರಲಿಲ್ಲ. ಮಾನವರೇ ಇರಲಿ, ಪ್ರಾಣಿಗಳೇ ಇರಲಿ ಅಥವಾ ಸಣ್ಣ ಸಣ್ಣ ಜಂತು-ಕ್ರಿಮಿ ಕೀಟಗಳೇ ಇರಲಿ, ಅವುಗಳಿಗೂ ಬದುಕುವ ಹಕ್ಕಿದೆ ಎಂದೇ ಪ್ರತಿಪಾದಿಸುತ್ತಿದ್ದರು. ಅವರು ಶೀಗೆಹಳ್ಳಿ ಮಠದಲ್ಲಿರುವಾಗ ಬೇರೆ ಬೇರೆ ಸಾಧಕರೊಂದಿಗೆ ಹೊಲಗಳಲ್ಲಿ ಕೆಲಸ ಮಾಡುತ್ತಿದ್ದರು. ಹಾಗೆ ಒಂದು ದಿನ ಕೆಲಸ ಮಾಡುವಾಗ ಹೊಲದಲ್ಲಿ ಮಣ್ಣು ಅಗೆಯುವ ಪ್ರಸಂಗ ಬಂದಿತು. ಅಗೆಯುವಾಗ ಎರೆಹುಳುವೇ ಮುಂತಾದ ಜೀವಿಗಳನ್ನು ನೋಡಿದರು. ಕೂಡಲೇ "ನನ್ನಿಂದ ಈ ಕೆಲಸ ಖಂಡಿತಾ ಸಾಧ್ಯವಿಲ್ಲ." ಎಂದು ನಡುವೆಯೇ ಆ ಕೆಲಸವನ್ನು ನಿಲ್ಲಿಸಿ ಸೌದೆಯ ಹೊರೆಗಳನ್ನು ಹೊತ್ತುತಂದು ಹಾಕುತ್ತಿದ್ದರು.

ಒಂದು ದಿನ ಶ್ರೀ ಶಿವಾನಂದರೊಡನೆ ಶ್ರೀಧರರು ಕೊಳದಲ್ಲಿ ಸ್ನಾನ ಮಾಡಿ ಬರುತ್ತಿದ್ದರು. ಅವರ ದೇಹದ ಮೇಲೆ ಸಣ್ಣದೊಂದು ಇರುವೆ ಹರಿಯುತ್ತಿತ್ತು. ಆ ಕೂಡಲೇ ಶ್ರೀಧರರು ಆ ಇರುವೆಯನ್ನು ಕಂಡು ಹೀಗೆ ಉದ್ಗಾರ ಮಾಡಿದರು. "ಪಾಪ! ಎಂಥ ಅನಾಹುತವಾಯಿತು. ಈ ಪುಟ್ಟ ಇರುವೆ ತನ್ನ ಮರಿಗಳನ್ನೂ ಮತ್ತು ಬಂಧುಗಳನ್ನೂ ಅಗಲಿ ಇಲ್ಲಿಗೆ ಬಂದುಬಿಟ್ಟಿದೆ." ಅಷ್ಟಕ್ಕೂ ಸುಮ್ಮನಾಗದೆ ಆ ಇರುವೆಯನ್ನು ಆ ಕೊಳದ ಹತ್ತಿರವೇ ಬಿಟ್ಟು ಬಂದರು. ಹೀಗೆ ಇರುವೆಗಳನ್ನೂ ಹಿಂಸಿಸದ ಶ್ರೀಧರರನ್ನು ಕಂಡು ಶ್ರೀ ಶಿವಾನಂದರಿಗೆ ಅತೀವ ಆನಂದವಾಯಿತು. "ಶ್ರೀಧರ! ನಿನ್ನ ದಯಾಬುದ್ಧಿ ನೋಡಿ ನನಗೆ ಆನಂದವಾಗಿದೆ. ದಾಸ, ಇನ್ನು ಮುಂದೆ ನಿನ್ನನ್ನು ದಯಾದಾಸ ಎಂದು ಕರೆಯಲೇ?" ಎಂದರು. ಗುರುಗಳ ಗುರುವಾದ ಶ್ರೀಧರರು ಮಾತ್ರ ಭಕ್ತಿಯಿಂದ "ಬೇಡ, ಹಿಂದಿನಂತೆಯೇ ಬರಿದೇ 'ದಾಸ' ಎಂದೇ ಕರೆಯಿರಿ" ಎಂದರು.

* * *

॥ಸಂಪ್ರದಾಯ॥...

## ಬಣ್ಣಗಳಿಂದ ಉಪಯೋಗವೇನು?

-ಲೇ: ಜಿ.ವಿ.ಶರ್ಮಾಪಂಡಿತ್.ಎಮ್.ಎ.

ಬಣ್ಣಗಳು ಏಳು ಇವೆ. ಮುಖ್ಯವಾದ ಬಣ್ಣಗಳು ಕೆಂಪು, ಹಸಿರು, ನೀಲಿ.

ಬಿಳಿ ಮತ್ತು ಕಪ್ಪು ಬಣ್ಣಗಳು ಸ್ವಯಂ ಸಿದ್ಧಬಣ್ಣಗಳು. ಅದರಿಂದ ಈ ಎರಡು ಬಣ್ಣಗಳು ಬಣ್ಣಗಳ ಲೆಕ್ಕಕ್ಕೆ ಬರುವುದಿಲ್ಲ. ಕೆಂಪು ಹಸಿರು ನೀಲಿ ಬಣ್ಣಗಳಿಂದ ಅನೇಕ ಬಣ್ಣಗಳನ್ನು ಸೃಷ್ಟಿಸಬಹುದು. ಈ ಮೂರು ಬಣ್ಣಗಳನ್ನು ಸಮ ಮಿಶ್ರಣ ಮಾಡಿದರೇ ಬಿಳಿಯ ಬಣ್ಣ ತಯಾರಾಗುತ್ತದೆ. ಕಾಮನಬಿಲ್ಲಿನಲ್ಲಿ ಏಳು ಬಣ್ಣಗಳು ಕೆಂಪು, ಹಸಿರು, ನೀಲಿ ಬಣ್ಣಗಳ ಮಿಶ್ರಣದಿಂದಲೆ ತಯಾರಾಗುತ್ತವೆ. ನಮ್ಮ ಕಣ್ಣಿಗೆ ಕಾಣುವ ಬಣ್ಣಗಳು ಪಶುಪಕ್ಷಿಗಳ ಕಣ್ಣಿಗೆ ಕಾಣುವುದಿಲ್ಲ. ನಮ್ಮ ಕಣ್ಣಿಗೂ ಕಾಣದಂಥಾ ಬಣ್ಣಗಳಿವೆ. ಈ ಬಣ್ಣಗಳನ್ನು ಜೇನುನೊಣಗಳು, ಚಿಟ್ಟೆಗಳು ಮಾತ್ರ ನೋಡಬಲ್ಲವು. ನಮಗೆ ಕಾಣುವುದಿಲ್ಲ.

ಪರಮಾತ್ಮನು ನಮ್ಮನ್ನು ಸೃಷ್ಟಿಸಿದ ನಂತರ ಸುಮ್ಮನೇ ಕುಳಿತುಕೊಳ್ಳಲಿಲ್ಲ. ಬಣ್ಣ ಬಣ್ಣದ ಪ್ರಕೃತಿಯನ್ನು, ಹೂಗಳನ್ನು ಬಗೆ ಬಗೆಯ ಹಣ್ಣುಗಳನ್ನು, ತರುಲತಾದಿಗಳನ್ನು ಸೃಷ್ಟಿಸಿ ಈ ಜನಾರಣ್ಯಕ್ಕೆ ಕಾಣಿಕೆಯಾಗಿ ನೀಡಿದ್ದಾನೆ.

ಈ ಬಣ್ಣಗಳಿಂದ ಉಪಯೋಗವೇನು?

ಬಣ್ಣಗಳು ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೆ. ನಮ್ಮ ಚಲನವಲನಗಳನ್ನು ಬದಲಾಯಿಸುವ ಶಕ್ತಿ ಬಣ್ಣಗಳಿಗಿದೆ. ಬೇಕಾದರೇ ನೀವು ಪರಿಶೀಲಿಸಿ ನೋಡಬಹುದು.

ಪ್ರತಿದಿನವೂ ಬೇರೆ ಬೇರೆ ಬಣ್ಣಗಳ ಬಟ್ಟೆಗಳನ್ನು ಉಪಯೋಗಿಸುವವರು ನೀವಾಗಿದ್ದರೇ ಒಂದು ದಿನ ಬಿಳಿಯ ಪ್ಯಾಂಟು ಬಿಳಿಯ ಷರ್ಟ್ ಧರಿಸಿ ನೋಡಿರಿ. ನಿಮ್ಮ ಮಾತು ನಿಮ್ಮ ನಡಿಗೆ ನಿಮ್ಮ ಮಾತ ನಾಡುವ ಶೈಲಿ ದಿಢೀರನೆ ಬದಲಾಗುತ್ತದೆ. ಇಂಥಾ ಕಾರಣಗಳಿಂದಲೇ ಸ್ವಾಮೀಜಿಗಳು ಕಾವಿಬಣ್ಣವನ್ನು ಧರಿಸುತ್ತಾರೆ. ಜಡ್ಜ್ ಮತ್ತು ವಕೀಲರು ಕಪ್ಪು ಬಣ್ಣವನ್ನು ಡಾಕ್ಟರ್‌ಗಳು ಬಿಳಿಯ ಬಣ್ಣವನ್ನು ಧರಿಸುತ್ತಾರೆ. ಪೋಲೀಸರು ಖಾಕೀ ಧರಿಸುತ್ತಾರೆ.

ಯಾವ ಬಣ್ಣದಿಂದ ಯಾವ ಪ್ರಯೋಜನ?

**ಬಿಳಿಯ ಬಣ್ಣ:–** ಬಿಳಿಯ ಬಣ್ಣ ಶಾಂತಿ ಮತ್ತು ಸತ್ಯಕ್ಕೆ ಗುರುತು. ಬಿಳಿಯ ವಸ್ತ್ರಗಳನ್ನು ಧರಿಸಿದವರ ಮಾತುಗಳನ್ನು ಎಲ್ಲರೂ ಬೇಗ ನಂಬುತ್ತಾರೆ. ಪ್ರಾಣಾಪಾಯದಲ್ಲಿರುವ ರೋಗಿ ಬಿಳಿಯಬಟ್ಟೆಗಳನ್ನುಟ್ಟಿರುವ ಡಾಕ್ಟರ್ ನರ್ಸ್‌ಗಳ ಮಾತುಗಳನ್ನು ನಂಬುತ್ತಾನೆ. ಅವರು ಹೇಳಿದ ಹಾಗೆ ಕೇಳುತ್ತಾನೆ. ನಾವು ಹಲವಾರು ಬಾರಿ ಮೋಸ ಹೋದರೂ ಬಿಳಿಯ ಬಟ್ಟೆಗಳನ್ನು ಧರಿಸಿಬಂದ ರಾಜಕೀಯ ವ್ಯಕ್ತಿಗಳನ್ನು ನಂಬಿ ಮತ ಚಲಾವಣೆ ಮಾಡುತ್ತೇವೆ. ಮದುವೆಯ ಸಮಯದಲ್ಲಿ ವಧೂವರರು ವಿಧಿಯಾಗಿ ಬಿಳಿಯವಸ್ತ್ರಗಳನ್ನೇ ಧರಿಸಬೇಕು ಎಂಬ ನಿಯಮವಿದೆ (ಈಗ ಯಾರೂ ಇದನ್ನು ಪಾಲಿಸುತ್ತಿಲ್ಲ.) ವಧೂವರರ ಪ್ರಥಮ ಸ್ಪರ್ಶ ಬಿಳಿಯ ವಸ್ತ್ರಗಳನ್ನು ಧರಿಸಿ ಮಾಡಬೇಕು. ಪರಸ್ಪರ ಪ್ರಥಮ ವೀಕ್ಷಣೆ ಬಿಳಿಯ ವಸ್ತ್ರಗಳು ಧರಿಸಿದಾಗಲೆ ನಡೆಯಬೇಕು. ಇದು ಶುಭ ಸೂಚಕ. ಪ್ರಥಮ ರಾತ್ರಿ ಬಿಳಿವಸ್ತ್ರಗಳನ್ನೇ ಧರಿಸಬೇಕು. ಇದು ಸನಾತನ ಸಂಪ್ರದಾಯ. ಗಂಗಾ ಯಮುನಾ ಸಂಗಮದಂತೆ ವೈವಾಹಿಕ ಜೀವನ ಸುಗಮವಾಗುತ್ತದೆ.

**ಕೆಂಪು ಬಣ್ಣ:–** ಕೆಂಪು ಬಣ್ಣ ಧೈರ್ಯಕ್ಕೆ, ಸಾಹಸಕ್ಕೆ, ಶ್ರಮಕ್ಕೆ ಗುರುತು! ಕೆಂಪು ಬಣ್ಣದ ವಾಹನ (ದ್ವಿಚಕ್ರವಾಹನ ಕಾರು, ಲಾರಿ)ಗಳನ್ನು ನಡೆಸುವವರು ಸಾಹಸ ಪ್ರವೃತ್ತಿಯುಳ್ಳವರಾಗುತ್ತಾರೆ. ಧೈರ್ಯದಿಂದ ವೇಗವಾಗಿ ವಾಹನಗಳನ್ನು ಚಲಿಸುತ್ತಾರೆ. ಕೆಂಪು ಬಣ್ಣವನ್ನು ಇಷ್ಟಪಡುವ ಸ್ತ್ರೀಯರಿಗೆ ಧೈರ್ಯ ಜಾಸ್ತಿ ಇರುತ್ತದೆ. ಅವರಿಗೆ ಇಷ್ಟವಾದರೇ ಎಂಥಾ ಕಷ್ಟವನ್ನಾದರೂ ಸಹಿಸುತ್ತಾರೆ. ಇಷ್ಟವಿಲ್ಲದಿದ್ದರೇ ಎದಿರೇಟು ಹಾಕಲಿಕ್ಕೂ ಹೆದರುವುದಿಲ್ಲ. ಇದು ಸ್ತ್ರೀ ಬಣ್ಣವಾದ್ದರಿಂದ ದೇವಿ ಭಕ್ತರು, ಉಪಾಸಕರು ಕೆಂಪುವಸ್ತ್ರಗಳನ್ನು ಧರಿಸುತ್ತಾರೆ. ಕೆಂಪು ಬಣ್ಣದಿಂದ ದೃಢಬುದ್ಧಿ ಸಿದ್ಧಿಸುತ್ತದೆ.

**ಹಳದಿ ಬಣ್ಣ:–** ಹಳದಿ ಬಣ್ಣ ಗುರುತ್ವಕ್ಕೆ, ಸಮರ್ಥತೆಗೆ, ಸಂಪತ್ತಿಗೆ ಗುರುತು! ಹಳದಿ ಅಥವಾ ಗೋಲ್ಡ್ ಕಲರ್, ಬಿಸ್ಕಟ್ ಕಲರ್ ಅಭಿವೃದ್ಧಿಗೆ ಗುರುತು ಈ ಬಣ್ಣವನ್ನು ಧರಿಸುವವರಿಗೆ ಹಠ ಜಾಸ್ತಿ. ಸಿಟ್ಟು ಕೂಡ ಜಾಸ್ತಿ ಇರುತ್ತದೆ. ಗಾಢ ಹಸಿರು, ತಿಳಿ ಹಸಿರು, ಗಿಳಿ ಹಸಿರು ಎಲ್ಲಾ ಹಸಿರು ಬಣ್ಣಗಳ ಲಕ್ಷಣ ಒಂದೇ ಆಗಿರುತ್ತದೆ. ಭಾರತೀಯರು ಹಸಿರು ಬಣ್ಣವನ್ನು ಇಷ್ಟಪಡುವುದಿಲ್ಲ. ಹಸಿರು ಬಣ್ಣ ಅಶುಭದ ಬಣ್ಣವಾಗದಿದ್ದರೂ ಮೂರ್ಖತನದ ಸೂಚಕವಾಗಿರುವುದರಿಂದ ಕೆಲವರು ಒಪ್ಪುವುದಿಲ್ಲ. ನಮ್ಮದೇಶದಲ್ಲಿ ಈ ಬಣ್ಣದ ಪ್ರಾಣಿಗಳೂ ಕಡಿಮೆ ಇವೆ.

**ನೀಲಿ ಬಣ್ಣ:–** ನೀಲಿ ಬಣ್ಣ ನಿರಾಮಯ ತತ್ವಕ್ಕೆ ನಿರ್ವಿಕಾರ ಗುಣಕ್ಕೆ ಗುರುತು. ನೀಲಿ ಬಣ್ಣ ಆತ್ಮ ವಿಶ್ವಾಸವನ್ನು ವೃದ್ಧಿಗೊಳಿಸುತ್ತದೆ. ನೀಲಿ, ತಿಳಿನೀಲಿ, ರಾಮನೀಲಿ ಮುಂತಾದ ನೀಲಿಬಣ್ಣಗಳು ಒಂದೇ ರೀತಿಯ ಗುಣಗಳನ್ನು ಹೊಂದಿರುತ್ತವೆ. ನೀಲಿ ಬಣ್ಣದ ಪ್ರತ್ಯೇಕತೆ ಏನೆಂದರೇ ಬೆಳ್ಳಗೆ ಇರುವ ಜನರು, ಮಧ್ಯಮ ಬಣ್ಣ ಇರುವ ಜನರು, ಕಪ್ಪಗೆ ಇರುವ ಜನರು ಎಲ್ಲರೂ ಇಷ್ಟಪಡುವಂಥಾ ಬಣ್ಣ ಇದು. ಎಲ್ಲಾ ನೀಲಿ ವರ್ಣಗಳು ಒಂದೇಯಾದರೂ ಕಡುನೀಲಿ (ರಾಯಲ್ ಬ್ಲೂ) ಬಣ್ಣವನ್ನು ಅಭಿಮಾನಿಸುವವರು ಅದೃಷ್ಟವಂತರಾಗಿ ಇರುವುದಿಲ್ಲ. ವಿದ್ಯಾವ್ಯಾಸಂಗಗಳಲ್ಲಿ ಹಿನ್ನಡೆ ಹೊಂದಿರುತ್ತಾರೆ. ಕಾಮಾನುರಕ್ತರಾಗಿರುತ್ತಾರೆ. ಎಲ್ಲರನ್ನೂ ತಮ್ಮ ಕಡೆಗೆ ಸೆಳೆದುಕೊಳ್ಳಬೇಕೆಂಬ ವಿಮೂಢರಾಗಿರುತ್ತಾರೆ.

**ಕಪ್ಪು ಬಣ್ಣ:–** ಕಪ್ಪು ಬಣ್ಣ ಅಜ್ಞಾನಕ್ಕೆ ಪಶುಪ್ರವೃತ್ತಿಗೆ ದಾನವತ್ವಕ್ಕೆ ಗುರುತು. ಹೆಚ್ಚಾಗಿ ಯಾರು ಈ ಬಣ್ಣವನ್ನು ಧರಿಸಲಿಕ್ಕೆ ಇಷ್ಟಪಡುವುದಿಲ್ಲ. ಯಾಕೆಂದರೇ ಕಪ್ಪು ಬಣ್ಣ ಶನಿದೇವರ ಸಂಕೇತವಾಗಿದೆ. ಕಪ್ಪು ಬಣ್ಣದ ಸೀರೆಯನ್ನುಡುವ ಹೆಣ್ಣು ದರಿದ್ರದೇವತೆಗೆ ಸಮವೆಂದು ಹೇಳುತ್ತಾರೆ. ಒಂಭತ್ತು ವರ್ಷಗಳ ಒಳಗೆ ವಯಸ್ಸಿರುವ ಮಕ್ಕಳಿಗೆ ಯಾವ ಬಣ್ಣವಾದರೂ ಅಡ್ಡಿ ಇಲ್ಲ. ವಯಸ್ಸಿಗೆ ಬಂದ ಯುವತಿಯರು ಯುವಕರು ಕಪ್ಪು ಬಣ್ಣದ ವಸ್ತ್ರಗಳನ್ನು ಧರಿಸಬಾರದು.

**ಕಾವಿ ಬಣ್ಣ:–** ಕಾವಿಬಣ್ಣ ತ್ಯಾಗಕ್ಕೂ, ಸನ್ಯಾಸಕ್ಕೂ ಗುರುತು. ಗೃಹಿಣಿಯರು ಈ ಬಣ್ಣದ ವಸ್ತ್ರಗಳನ್ನು ಧರಿಸಬಾರದು. ಅರವತ್ತು ವರ್ಷಗಳ ಒಳಗಿನ ವಯಸ್ಸಿರುವ ಪುರುಷರು ಕೂಡ ಈ ಬಣ್ಣದ ಬಟ್ಟೆಗಳಿಗೆ ದೂರವಿರಬೇಕು. ಕಾವಿಬಣ್ಣ ಮನಸ್ಸಿನಲ್ಲಿ ವಿರಕ್ತಿಯನ್ನು ತುಂಬುತ್ತದೆ.

**ಬೂದು ಬಣ್ಣ:–** ಬೂದು ಬಣ್ಣ (ಯಾಷ್ ಕಲರ್) ಇದು ನಮ್ಮ ದೇಶದಲ್ಲಿರಲಿಲ್ಲ. ಪಾಶ್ಚಾತ್ಯರಿಂದ ಪರಿಚಯವಾಗಿರುವ ಬಣ್ಣವಿದು. ಇತ್ತೀಚಿನ ಜನರು ಈ ಬಣ್ಣವನ್ನು ಇಷ್ಟಪಡುತ್ತಿದ್ದಾರೆ. ಬೂದಿ ಬಣ್ಣ ನಾಸ್ತಿಕತ್ವವನ್ನು ಪ್ರೇರೇಪಿಸುತ್ತದೆ. ನಿರಾಶಾವಾದಿಗಳು, ನಿಸ್ಸೀಮರು ಈ ಬಣ್ಣವನ್ನು ಇಷ್ಟಪಡುತ್ತಾರೆ. ಮನಸ್ಸಿನಲ್ಲಿ ಒಂದು, ಮಾತಿನಲ್ಲಿ ಒಂದು, ಎಂಬಂತೆ ಇರುವವರು ಬೂದಿ ಬಣ್ಣವನ್ನು ಇಷ್ಟಪಡುತ್ತಾರೆ. ಈ ಬಣ್ಣವನ್ನು ಧರಿಸುವವರಿಗೆ ಆಯುಷ್ಯ ಕಡಿಮೆ ಇರುತ್ತದೆ.



ಹೋವರ್ ಕ್ರಾಫ್ಟ್ – ಕಾಕ್‌ರೆಲ್

ಹೊಸ ಮನೆಗಳಿಗೆ ಈಗ ಚಿತ್ರ ವಿಚಿತ್ರ ಬಣ್ಣಗಳನ್ನು ಉಪಯೋಗ ಮಾಡುತ್ತಿದ್ದಾರೆ. ಕೆಲವು ಬಣ್ಣಗಳು ಕೆಲವರಿಗೆ ಒಳ್ಳೆಯದಾಗುವುದಿಲ್ಲ. ಬಿಳಿಯಬಣ್ಣ, ಹಳದಿಬಣ್ಣವನ್ನು ಯಾರಾದರೂ ಉಪಯೋಗಿಸಬಹುದು. ಬ್ಲೂ, ಗ್ರೀನ್, ಆರೆಂಜ್, ಡಾರ್ಕ್‌ರೆಡ್ ಎಲ್ಲರಿಗೂ ಶುಭದಾಯಕವಲ್ಲ. ಬಿಳಿ ಬಣ್ಣಕ್ಕೆ ಪ್ರಾಮುಖ್ಯತೆ ನೀಡಿದರೇ ಒಳ್ಳೆಯದು. ಶುಕ್ರನಿಗೂ, ಚಂದ್ರನಿಗೂ ಬಿಳಿಯ ಬಣ್ಣವೆಂದರೇ ಇಷ್ಟ. ಸುಖ ಸಂಸಾರವನ್ನು ನೀಡುವವರು ಶುಕ್ರ ಮತ್ತು ಚಂದ್ರಗ್ರಹಗಳೇ!

ಅತಿಶೀತಲ ಪ್ರದೇಶದವರಾದ ಪಾಶ್ಚಾತ್ಯ ದೇಶದವರನ್ನು ಉಷ್ಣ ದೇಶದವರಾದ ನಾವು ಅನುಕರಿಸಬಾರದು. ಮನೆಯೊಳಗೆ ಚಿತ್ರ ವಿಚಿತ್ರ ಬಣ್ಣಗಳನ್ನು ಹಚ್ಚಬೇಡಿರಿ. ನಿಮ್ಮ ಅದೃಷ್ಟಕ್ಕೆ ನೀವೇ ಅಡೆತಡೆಗಳು ನಿರ್ಮಾಣ ಮಾಡಿಕೊಳ್ಳಬೇಡಿರಿ.

* * *

ಭಾರತ ದರ್ಶನ...

# ಬದರೀನಾಥ

–ಲೇ: ಬಿ.ವಿ.ವಿದ್ಯಾನಂದ ಶೆಣೈ

ಇದು ಹಿಮಾಲಯದಲ್ಲಿರುವ ಒಂದು ಪ್ರಸಿದ್ಧ ಪುಣ್ಯಕ್ಷೇತ್ರ. ಬದರೀಧಾಮ ಅಥವಾ ಬದರೀವಿಶಾಲ ಎಂಬುದಾಗಿಯೂ ಇದನ್ನು ಕರೆಯುತ್ತಾರೆ. ಇದು ಸಮುದ್ರಮಟ್ಟದಿಂದ ಸುಮಾರು 10,244 ಅಡಿ ಎತ್ತರದಲ್ಲಿದೆ. ಸಾಮಾನ್ಯವಾಗಿ ಹರಿದ್ವಾರದಿಂದ ಕೇದಾರ–ಬದರಿಗಳ ಯಾತ್ರೆ ಪ್ರಾರಂಭವಾಗುತ್ತದೆ. ಬದರೀನಾಥ ಮಾರ್ಗದಲ್ಲಿ ಹೆಜ್ಜೆಹೆಜ್ಜೆಗೂ ಅಸಂಖ್ಯ ತೀರ್ಥಸ್ಥಾನಗಳಿವೆ. ಉಖಿಮಠ, ಜೋಶೀಮಠ, ವಿಷ್ಣುಪ್ರಯಾಗ, ಬಲದೌಡಚಟ್ಟಿ ಪಾಂಡುಕೇಶ್ವರ, ಶೇಷಧಾರಾ, ಹನುಮಾನ್‌ಚಟ್ಟಿ, ಕಾಂಚನಗಂಗಾ, ದೇವದೇಖನಿ ಮುಂತಾದ ಸ್ಥಳಗಳಲ್ಲಿ ತೀರ್ಥಸ್ನಾನ ಮತ್ತು ದರ್ಶನ ಪಡೆಯುತ್ತಾ ಬದರಿಗೆ ಸಾಗಬೇಕು.

ಬದರೀಧಾಮವು ಅಲಕಾನಂದ ನದಿಯ ಬಲದಂಡೆಯಲ್ಲಿದೆ. ಸುಮಾರು ಮೂರು ಮೈಲಿ ಉದ್ದ ಮತ್ತು ಒಂದು ಮೈಲಿ ಅಗಲವಿರುವ ಬಯಲಿನಲ್ಲಿ ಈ ಕ್ಷೇತ್ರವು ವ್ಯಾಪಿಸಿದೆ. ಬಯಲಿನ ಒಂದು ಕಡೆ 'ನರ' ಎಂಬ ಪರ್ವತ ಮತ್ತು ಇನ್ನೊಂದು ಕಡೆ 'ನಾರಾಯಣ' ಎಂಬ ಪರ್ವತವಿದೆ. ಕ್ಷೇತ್ರದ ರಕ್ಷಕರಂತೆ ನಿಂತಿರುವ ಈ ಎರಡು ಪರ್ವತಗಳ ಹಿಂದೆ ಮತ್ತು ಸುತ್ತಲೂ ದೊಡ್ಡ ದೊಡ್ಡ ಹಿಮಾವೃತ ಪರ್ವತಗಳಿವೆ.

ನಗರದ ಮಧ್ಯಭಾಗದಲ್ಲಿ ಬದರೀನಾಥನ ಭವ್ಯವಾದ ಮಂದಿರವಿದೆ. ದೇವಸ್ಥಾನದ ಸನಿಹದಲ್ಲೇ ತಪ್ತಕುಂಡವೆಂಬ ಬಿಸಿ ನೀರಿನ ಕೊಳವಿದೆ. ನೀರು ಕುದಿಯುತ್ತಾ ಅಲ್ಲಿಗೆ ಬಂದು ಬೀಳುತ್ತದೆ. ಸಮೀಪದಲ್ಲೇ ಸೂರ್ಯಕುಂಡ ಎಂಬ ಇನ್ನೊಂದು ಬಿಸಿನೀರಿನ ಕೊಳವಿದೆ. ಈ ನೀರಿನ ಸ್ನಾನ ಕಡಿದಾದ ಬೆಟ್ಟಗಳಲ್ಲಿ ನಡೆದು ಅಯಾಸಗೊಂಡ ದೇಹಕ್ಕೆ ಸಂತಸ ನೀಡುವುದು ಸೂರ್ಯಕುಂಡದಿಂದ ಸ್ವಲ್ಪ ದೂರದಲ್ಲಿ ನಾರದ ಕುಂಡವಿದೆ. ಅದರಲ್ಲಿಯೂ ಸ್ನಾನ ಮಾಡಬೇಕು. ಆದರೆ ಹೆಚ್ಚಿನವರು ಅತ್ತ ನೋಡುವುದೇ ಇಲ್ಲ. ಅದರ ನೀರನ್ನು ಮುಟ್ಟಿದರೆ ಕೈ ಬೆಂಡಿನಂತೆ ಆಗುವುದು. ತೀವ್ರ ಭಾವುಕತೆ ಇದ್ದವರು ಅದರ ಕೆಲವು ಬಿಂದುಗಳನ್ನು ಪ್ರೋಕ್ಷಿಸಿಕೊಳ್ಳುವರು. ತಪ್ತಕುಂಡಕ್ಕೆ ಬಿಸಿನೀರು ನೆಲದೊಳಗಿಂದ ಸಾವಿರಾರು ವರ್ಷಗಳಿಂದ ಹರಿದು ಬರುತ್ತಿದೆ. ಇದೊಂದು ಪ್ರಕೃತಿಯ ವರ. ಸ್ವಲ್ಪ ಉಪ್ಪು ಮತ್ತು ಗಂಧಕ ಬೆರೆತಿರುವ ಈ ನೀರು ಚರ್ಮವ್ಯಾಧಿಗೆ ಶಮನಕಾರಿ.

ತಪ್ತಕುಂಡದಿಂದ ಇಪ್ಪತ್ತು ಇಪ್ಪತ್ತೈದು ಮೆಟ್ಟಿಲು ಹತ್ತಿ ಬಂದರೆ ಬದರೀನಾಥದ ಬೃಹತ್‌ದ್ವಾರ ಕಾಣಿಸಿಕೊಳ್ಳುತ್ತದೆ. ಪೂರ್ವಾಭಿಮುಖವಾಗಿ ನಿಂತಿರುವ ಈ ನಾರಾಯಣಮಂದಿರವು ಸುಮಾರು 45 ಅಡಿಗಳಷ್ಟು ಎತ್ತರವಾಗಿದೆ. ಮಂದಿರದ ತುದಿಯಲ್ಲಿ ಚಿನ್ನದ ಕಲಶವಿದೆ. ಗರ್ಭಗುಡಿಯಲ್ಲಿ ಉನ್ನತವಾದ ಸಿಂಹಾಸನದ ಮೇಲೆ 3 ಅಡಿ ಎತ್ತರದ ಸಾಲಿಗ್ರಾಮ ಶಿಲೆಯ ನಾರಾಯಣನ ಮೂರ್ತಿ ಇದೆ. ಕೈಗಳನ್ನು ಯೋಗಮುದ್ರೆಯ ಸ್ಥಿತಿಯಲ್ಲಿಟ್ಟುಕೊಂಡಿರುವ ಪದ್ಮಾಸನಸ್ಥ ಬದರೀನಾಥನ ಮೂರ್ತಿ ಭವ್ಯವಾಗಿದೆ. ಸ್ವರ್ಣಮುಕುಟಧಾರಿಯಾದ ನಾರಾಯಣನಿಗೆ ಲಕ್ಷ್ಮೀದೇವಿಯು ಚಾಮರ ಬೀಸುತ್ತಿದ್ದಾಳೆ. ಎಡಭಾಗದಲ್ಲಿ ನರನಾರಾಯಣರ ವಿಗ್ರಹಗಳಿವೆ. ಬಲಭಾಗದಲ್ಲಿ ಗಣಪತಿ ಮತ್ತು ಕುಬೇರ ಹಾಗೂ ಮುಂಭಾಗದಲ್ಲಿ ಗರುಡ, ಉದ್ಧವ ಮತ್ತು ನಾರದರ ಮೂರ್ತಿಗಳಿವೆ.

ಈ ವೈಷ್ಣವಕ್ಷೇತ್ರದಲ್ಲಿ ಶಿವನೂ ನೆಲೆಸಿದ್ದಾನೆ. ಒಮ್ಮೆ ಶಿವನು ಬ್ರಹ್ಮನ ಒಂದು ತಲೆಯನ್ನು ಕತ್ತರಿಸಿದ. ಆ ತಲೆ ನೆಲಕ್ಕೆ ಬೀಳದೆ ಶಿವನ ಕೈಗೇ ಅಂಟಿಕೊಂಡಿತು. ಅದರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಶಿವನು ಬದರೀವಿಶಾಲಕ್ಕೆ ಬಂದನು. ಇಲ್ಲಿ ಅಲಕೆಯ ತೀರದಲ್ಲಿ ಬ್ರಹ್ಮಕಪಾಲವು ಶಿವನ ಕೈ ಬಿಟ್ಟಿತು. ಈ ಸ್ಥಳವನ್ನು 'ಬ್ರಹ್ಮಕಪಾಲ' ಎಂದೇ ಕರೆಯುತ್ತಾರೆ. ಹೀಗಾಗಿ ಬ್ರಹ್ಮಹತ್ಯಾ ದೋಷವು ಅಂಶತಃ ದೂರವಾಯಿತು. ಅದು ಸಂಪೂರ್ಣವಾಗಿ ದೂರವಾಗಲೆಂದು ಶಿವನು ಇಲ್ಲಿ ನೆಲೆಸಲು ನಿಶ್ಚಯಿಸಿದನು. ಆದ್ದರಿಂದ ಇದನ್ನು ಶಿವಸ್ಥಾನವೆಂದೂ ಕರೆಯುವುದುಂಟು.

ಬದರಿಯ ಮಂದಿರವು ಅನೇಕ ಬಾರಿ ಜೀರ್ಣೋದ್ಧಾರಕ್ಕೊಳಗಾಗಿದೆ. ಈಗಿನ ಮಂದಿರವನ್ನು 13ನೇ ಶತಮಾನದ ಕೊನೆಯಲ್ಲಿ ಗಢವಾಲದ ಮಹಾರಾಜರು ಕಟ್ಟಿಸಿದರು. ರಾಣಿ ಅಹಲ್ಯಾಬಾಯಿ ಹೋಳ್ಕರ್ ಈ ಮಂದಿರಕ್ಕೆ ಸ್ವರ್ಣಕಲಶವನ್ನು ಮಾಡಿಸಿ ಅರ್ಪಿಸಿದಳು. ಇಲ್ಲಿನ ನಾರಾಯಣ ಮೂರ್ತಿಯು ಅತ್ಯಂತ ಪ್ರಾಚೀನವಾದುದು ಎಂಬ ನಂಬಿಕೆ ಇದೆ. ಇದು ನರ–ನಾರಾಯಣರ ಉಗ್ರ ತಪಸ್ಸು ನಡೆದ ಸ್ಥಳ. ಇಲ್ಲೇ ಸಹಸ್ರಕವಚ ಎಂಬ ರಕ್ಕಸನನ್ನು ಶ್ರೀಹರಿಯು ವಧಿಸಿದನು. ನರ–ನಾರಾಯಣರ ತಪಸ್ಸಿನಿಂದಾಗಿ

ಅಲಕೆಯ ಎರಡು ಕಡೆಯ ಪರ್ವತಗಳಿಗೆ ಅವರ ಹೆಸರನ್ನೇ ಇಡಲಾಗಿದೆ. ಬದರೀನಾಥ ಮಂದಿರ ನಾರಾಯಣಪರ್ವತದ ಛಾಯೆಯಲ್ಲಿದೆ.

ಬದರಿಕಾಧಾಮವನ್ನು ನಾರದ ಕ್ಷೇತ್ರ ಎಂದೂ ಕರೆಯುತ್ತಾರೆ. ಬದರೀಮಂದಿರದಲ್ಲಿ ನಾರದ ಮತ್ತು ಉದ್ಧವನ ವಿಗ್ರಹಗಳಿವೆ. ನಾರದ ತನ್ನ ವಿಷ್ಣುಪಂಚರಾತ್ರಾಗಮವನ್ನು ಜಾರಿಗೆ ತಂದುದು ಇಲ್ಲೇ ಎನ್ನುವರು. ಇಡೀ ಹಿಮಾಲಯಕ್ಷೇತ್ರ ನಾರದಮಹರ್ಷಿಗಳ ತಪಸ್ಸಿನಿಂದ ಪುನೀತವಾಗಿದೆ. ಚಳಿಗಾಲದ ಆರು ತಿಂಗಳೂ ಈ ಮಂದಿರ ಮುಚ್ಚಿರುತ್ತದೆ. ಈ ಅವಧಿಯಲ್ಲಿ ನಾರದರು ನಾರಾಯಣನ ಪೂಜೆ ನಡೆಸುತ್ತಾರೆ ಎಂದು ನಂಬಿಕೆ. ನಮ್ಮ ಪುರಾಣಗಳ ಪ್ರಕಾರ, ಮನುಕುಲದ ಮೂಲಪುರುಷನಾದ ಮನುವನ್ನು ಮತ್ಸ್ಯಾವತಾರದಲ್ಲಿ ವಿಷ್ಣು ಇಲ್ಲಿ ತಂದು ಬಿಟ್ಟನಂತೆ. ಅವನು ಸಪ್ತಋಷಿಗಳನ್ನು ಕರೆತಂದನು. ಅವರಿಂದ ಪ್ರಪಂಚದಲ್ಲಿ ಪ್ರಜೋತ್ಪತ್ತಿ ಪ್ರಾರಂಭವಾಯಿತು. ನಮ್ಮ ಸೃಷ್ಟಿಯಾಟ ಹೀಗೆ ಪ್ರಾರಂಭವಾಗಿ ಅಳು, ನಗು, ಆಸೆ – ನಿರಾಸೆ, ಪ್ರೇಮ, ದ್ವೇಷಗಳ ಆಟ ಮುಂದುವರಿಯಿತು. ಪೌರಾಣಿಕದೃಷ್ಟಿಯಿಂದ ಬದರಿಯೇ ನಮ್ಮ ಜನಾಂಗದ ತೊಟ್ಟಿಲು.

ಬೌದ್ಧ ಪಂಥದ ಪ್ರಭಾವ ಟಿಬೆಟ್‌ನ್ನು ಅವರಿಸಿದ ಮೇಲೆ ಕೆಲವು ಕಾಲ ಬದರಿ ಶಾಂತವಾಗಿತ್ತು. ನಾರಾಯಣಮೂರ್ತಿಯು ಸ್ಥಾನಪಲ್ಲಟಗೊಂಡು ನಾರದಕುಂಡವನ್ನು ಸೇರಿತ್ತು. ನಂತರ ಶಂಕರ ಭಗವತ್ಪಾದರು ಸ್ವಪ್ನ ದೃಷ್ಟಾಂತದ ಮೂಲಕ ನಾರದಕುಂಡದಲ್ಲಿದ್ದ ವಿಗ್ರಹವನ್ನು ಹೊರತಂದು ಪುನಃ ಪ್ರತಿಷ್ಠಾಪಿಸಿದರಂತೆ. ತಮ್ಮ ಹನ್ನೊಂದನೇ ವಯಸ್ಸಿನಲ್ಲಿ ಇಲ್ಲಿಗೆ ಬಂದ ಆಚಾರ್ಯರು ಸುಮಾರು ಐದು ವರ್ಷಗಳ ಕಾಲ ಗುಹಾವಾಸ ನಡೆಸಿದರು. ಈ ಅವಧಿಯಲ್ಲಿ ಅವರು ಬ್ರಹ್ಮಸೂತ್ರ, ಗೀತೆ ಮತ್ತು ಉಪನಿಷತ್ತುಗಳಿಗೆ ಭಾಷ್ಯವನ್ನು ಬರೆದರು. ತಮ್ಮ ಗ್ರಂಥವನ್ನು ಬದರಿನಾಥನಿಗೆ ಅರ್ಪಿಸಿದರು. ಈ ದಿವ್ಯಕ್ಷೇತ್ರದಲ್ಲಿ ತಮ್ಮ ಪೀಠವನ್ನು ಪ್ರಾರಂಭಿಸಿದರು. ಅವರು ಸ್ಥಾಪಿಸಿದ ಉತ್ತರಾಮ್ನಾಯ ಜ್ಯೋತಿರ್ನಾಥಪೀಠವು ಅಂದಿನಿಂದ ನಮ್ಮ ಶೀರ್ಷಸ್ಥಾನವಾಗಿ ಬಂದಿದೆ. ಜೋಶೀ ಮಠದಲ್ಲಿ ನೃಸಿಂಹ ಮಂದಿರ ಮತ್ತು ಜ್ಯೋತಿರೇಶ್ವರ ಮಂದಿರವಿದೆ. ಜೊತೆಗೆ ಪೂರ್ಣಗಿರಿ ದೇವಿಯು ಕ್ಷೇತ್ರದೇವತೆಯಾಗಿ ಇಲ್ಲಿ ನೆಲೆಸಿದ್ದಾಳೆ.

ಈ ವೈಷ್ಣವಕ್ಷೇತ್ರದಲ್ಲಿ ವಿಶಾಲಬದರಿ, ಯೋಗಬದರಿ, ಭವಿಷ್ಯಬದರಿ, ವೃದ್ಧಬದರಿ ಮತ್ತು ಧಾನ್ಯಬದರಿ ಎಂಬ ಪಂಚ ಬದರಿಕ್ಷೇತ್ರಗಳಿವೆ. ಬದರೀನಾಥಕ್ಷೇತ್ರದಲ್ಲಿ ಋಷಿಗಂಗಾ, ಕೂರ್ಮಾಧಾರಾ, ಪ್ರಹ್ಲಾದಧಾರಾ ತಪ್ತಕುಂಡ ಮತ್ತು ನಾರದಕುಂಡಗಳೆಂಬ ಐದು ತೀರ್ಥಗಳಿವೆ. ತಪ್ತಕುಂಡದ ಸಮೀಪದಲ್ಲಿ ಗರುಡಶಿಲೆ, ನಾರದಶಿಲೆ, ಮಾರ್ಕಂಡೇಯ ಶಿಲೆ, ನರಸಿಂಹಶಿಲೆ ಮತ್ತು ವರಾಹಶಿಲೆ ಎಂಬ ಐದು ಶಿಲೆಗಳಿವೆ. ಇಲ್ಲಿಂದ ಆರು ಮೈಲಿ ದೂರದಲ್ಲಿ ಅಲಕಾಪುರಿ ಇದೆ. ಇಲ್ಲಿನ ಸತ್ಯಪಥ ಎಂಬ ಪರ್ವತದಿಂದ ಇಳಿದು ಬರುವ ಹಿಮ ಪ್ರವಾಹವನ್ನು ಅಲಕನಂದೆ ಎಂದು ಕರೆಯುತ್ತಾರೆ. ಅಲಕೆಯ ಈ ಉಗಮಸ್ಥಳವು ಸಮುದ್ರ ಮಟ್ಟದಿಂದ ಸುಮಾರು 14,400 ಅಡಿಗಳಷ್ಟು ಎತ್ತರದಲ್ಲಿದೆ.

ಅಲಕೆಯ ಬಲದಂಡೆಯ ಬ್ರಹ್ಮಕಪಾಲದಲ್ಲಿ ಪಿತೃಗಳಿಗೆ ತರ್ಪಣ ನೀಡುತ್ತಾರೆ. ಇಲ್ಲಿ ಒಮ್ಮೆ ಪಿತೃಗಳಿಗೆ ತರ್ಪಣ ನೀಡಿದರೆ ಮುಂದೆ ಅವರ ಶ್ರಾದ್ಧಕರ್ಮಗಳನ್ನು ಮಾಡುವ ಅಗತ್ಯವಿಲ್ಲ. ಇಲ್ಲಿ ತರ್ಪಣವನ್ನು ಸ್ವೀಕರಿಸಿದ ಪಿತೃಗಳು ಶಾಶ್ವತವಾಗಿ ಬ್ರಹ್ಮಲೋಕದಲ್ಲಿ ನೆಲಸುವರು ಎಂದು ನಂಬುತ್ತಾರೆ.

ಇತಿಹಾಸದಲ್ಲಿ ನಮೂದಿಸಲಾಗದಷ್ಟು ಹಿಂದಿನಿಂದ ನಮ್ಮ ಹಿರಿಯರು ಬದರಿಗೆ ಹೋಗುತ್ತಿದ್ದಾರೆ. ಬದರಿಕಾಶ್ರಮದ ಬಳಿ ಮಾಣ ಎಂಬ ಗ್ರಾಮದಲ್ಲಿ ವ್ಯಾಸರು ಗುಹಾವಾಸಿಗಳಾಗಿದ್ದರು. ಮಹಾಭಾರತ, ಭಾಗವತ, ಅಷ್ಟಾದಶಪುರಾಣಗಳನ್ನು ವ್ಯಾಸರು ರಚಿಸಿದ್ದು ಈ ಗುಹೆಯಲ್ಲಿಯೇ. ಈ ಬೃಹತ್ ಕಾರ್ಯದಲ್ಲಿ ವ್ಯಾಸರ ನೆರವಿಗೆ ಬಂದವನು ಗಣೇಶ. ವ್ಯಾಸರು ಹೇಳುವುದು, ಗಣಪತಿ ವಿದ್ಯುದ್ವೇಗದಲ್ಲಿ ಅದನ್ನು ಬರೆಯುವುದು. ಈ ಗುಹೆಯಿಂದ ಜಗತ್ತಿಗೆ ಅದ್ವಿತೀಯವೆನಿಸಿದ ಸಾಹಿತ್ಯಸಿರಿ ಲಭ್ಯವಾಯಿತು. ಶಂಕರಾಚಾರ್ಯರೂ ತಮ್ಮ ಭಾಷ್ಯಗ್ರಂಥಗಳ ರಚನೆಯನ್ನು ಇಲ್ಲೇ ಮಾಡಿದರಂತೆ. ದ್ವೈತಸಂಪ್ರದಾಯ ಪ್ರವರ್ತಕರಾದ ಶ್ರೀಮಧ್ವಾಚಾರ್ಯರು ತಮ್ಮ ಅವತಾರಕಾರ್ಯ ಮುಗಿದ ನಂತರ ಬದರಿಕಾಶ್ರಮದಲ್ಲಿ ಸಮಾಧಿಸ್ಥರಾದರು. ಇಲ್ಲಿ ಅವರ ಬೃಂದಾವನವಿದೆ. ಬದರಿಕಾಶ್ರಮದಿಂದ ಎಂಟುಮೈಲು ದೂರದಲ್ಲಿ ವಸುಧಾರಾ ಎಂಬ ಜಲಪಾತವಿದೆ. ಎಂಟು ಧಾರೆಗಳೊಂದಿಗೆ ಸುಮಾರು ನಾಲ್ಕು ನೂರು ಅಡಿ ಎತ್ತರದಿಂದ ಧುಮುಕುವ ವಸುಧಾರಾ ಜಲಪಾತವು ಅಷ್ಟವಸುಗಳ ತಪೋಭೂಮಿ. ಪಾಂಡವರ ಸ್ವರ್ಗಾರೋಹಣದ ದಾರಿ ಸತ್ಯಪಥವು ವಸುಧಾರೆಯ ಮೂಲಕ ಹಾದು ಹೋಗಿದೆ ಎನ್ನುತ್ತಾರೆ.

ಮಾಣಗ್ರಾಮದ ಬಳಿ ಮುಚಕುಂದ ಗುಹೆ ಇದೆ. ಮುಚಕುಂದನು ಇಲ್ಲಿ ತಪಸ್ಸು ಮಾಡಿ ವಿಷ್ಣುಪದವನ್ನು ಪಡೆದನಂತೆ. ಬದರಿಯ ಪಶ್ಚಿಮದಲ್ಲಿ ನೀಲಕಂಠ ಶಿಖರವಿದೆ. 21,640 ಅಡಿ ಎತ್ತರದ ಈ ಶಿಖರವು ಯಾವಾಗಲೂ ಹಿಮಾಚ್ಛಾದಿತವಾಗಿರುತ್ತದೆ. ಇಲ್ಲಿ ನಾರಾಯಣನ ಚರಣ ಪಾದುಕೆಗಳಿವೆ. ಶ್ರಾವಣಮಾಸದಲ್ಲಿ ಹಿಮ ಸರಿದು ಪಾದುಕೆಗಳು ಗೋಚರವಾಗುತ್ತದೆ. ಇದರ ಬಳಿ ಊರ್ವಶೀಕುಂಡವಿದೆ. ನಾರಾಯಣನು ತನ್ನ ತೊಡೆಯಿಂದ ಊರ್ವಶಿ ಎಂಬ ಅಪ್ಸರೆಗೆ ಜನ್ಮ ನೀಡಿದ ಸ್ಥಳವಿದು.

ಮಹಾಭಾರತದಲ್ಲಿ ನರ ನಾರಾಯಣರ ಬಗ್ಗೆ ಸಾಕಷ್ಟು ಉಲ್ಲೇಖವಿದೆ. ಧರ್ಮಪುತ್ರರಾದ ನರ, ನಾರಾಯಣರು ಬದರಿಕಾಶ್ರಮದಲ್ಲಿ ತಪಸ್ಸು ನಡೆಸಿದರು ಎಂದು ವ್ಯಾಸರೇ ಹೇಳಿರುವರು. ಪ್ರತಿಪರ್ವದ ಪ್ರಾರಂಭದಲ್ಲಿ ಭಗವಾನ್ ವ್ಯಾಸರು ನರ–ನಾರಾಯಣರನ್ನು ನಮಿಸಿ, ಅವರೇ ಅರ್ಜುನ ಮತ್ತು ಕೃಷ್ಣ ಎಂದು ತಿಳಿಸಿದ್ದಾರೆ.

ಒಮ್ಮೆ ಅರ್ಜುನನನ್ನು ಹುಡುಕಿಕೊಂಡು ಪಾಂಡವರು ಈ ನರ–ನಾರಾಯಣ ಆಶ್ರಮಕ್ಕೆ ಬಂದಿದ್ದರಂತೆ. ಇಲ್ಲಿ ಹಸಿವು, ನೀರಡಿಕೆ, ಶೀತೋಷ್ಣಗಳ ಬಾಧೆ ಇರುವುದಿಲ್ಲ ಮತ್ತು ಎಲ್ಲ ದುಃಖಗಳೂ ಮಾಯವಾಗುವುದು ಎಂದು ವನಪರ್ವ ಹೇಳುತ್ತದೆ.



ಹೈಡ್ರೋಫೋಬಿಯಾ – ಲೂಯಿಸ್ ಪ್ಯಾಶ್ಚರ್

ಮಹಾಭಾರತ ಬದರಿ ಬಳಿಯ ಪಾಂಡುಕೇಶ್ವರದ ಬಗ್ಗೆ ಹೇಳಿದೆ. ಜಿಂಕೆಯ ರೂಪದಲ್ಲಿ ವಿಹರಿಸುತ್ತಿದ್ದ ಋಷಿದಂಪತಿಗಳ ಆನಂದವನ್ನು ನಾಶಪಡಿಸಿ ಪಾಂಡುವು ಋಷಿಯ ಶಾಪಕ್ಕೊಳಗಾದ ಸ್ಥಳ ಇದು. ಅಲಕಾನಂದ ಮತ್ತು ಧವಳಗಂಗೆಯರು ಸಂಗಮವಾಗುವ ವಿಷ್ಣುಪ್ರಯಾಗದಲ್ಲಿ ನಾರದರು ತಪಸ್ಸು ಮಾಡಿದ್ದರು. ಸೌಗಂಧಿಕಾಪುಷ್ಪವನ್ನು ತರಲೆಂದು ಹೊರಟಿದ್ದ ಭೀಮನು ತನ್ನಣ್ಣನಾದ ಹನುಮನನ್ನು ಭೇಟಿಯಾದ ಸ್ಥಳವನ್ನು ಹುಮಾನ್ ಚಟ್ಟಿ ಎಂದು ಕರೆಯುತ್ತಾರೆ. ಈ ಪ್ರದೇಶದಲ್ಲಿ ಕಸ್ತೂರಿ ಮತ್ತು ಶಿಲಾಜಿತ್‌ಗಳು ದೊರೆಯುತ್ತವೆ. ದ್ವಾರಕೆ ಮುಳುಗುವ ಸಮಯದಲ್ಲಿ ಕೃಷ್ಣನ ಸಲಹೆಯಂತೆ ಉದ್ಧವನು ಬದರಿಕಾಶ್ರಮದ ಬಳಿ ತಪಸ್ಸಿಗಾಗಿ ಬಂದನಂತೆ.

ಬದರಿಯಿಂದ ಮುಂದೆ ಕೆಲವು ಮೈಲಿಗಳ ಪ್ರದೇಶ ಭಾರತದ ಆಡಳಿತಕ್ಕೆ ಸೇರಿದೆ. ತ್ರಿವಿಷ್ಟಪದಿಂದ ಅಕ್ಕ ಪಕ್ಕದ ಎಲ್ಲ ಕ್ಷೇತ್ರಗಳನ್ನು ಚೀನೀಯರು ಅತಿಕ್ರಮಿಸಿದ್ದಾರೆ. ಈ ಭಾಗದ ಸೌಂದರ್ಯ ರಮ್ಯ ಮನೋಹರ. ಈ ಸೃಷ್ಟಿಯ ಸೊಬಗನ್ನು ಕಾಣದವರು ಅದೃಷ್ಟಹೀನರು. ಕಣ್ಣು ಹಾಯಿಸಿದಲ್ಲೆಲ್ಲಾ ಹಿಮದಿಂದ ಕೂಡಿದ ಪರ್ವತ ರಾಜಿ. ನಡುವೆ ಮೇಘಸಂದೇಶದ ಅಲಕಾವತಿ. ಭೋರ್ಗರೆವ ಅಲಕೆ. ಪ್ರಕೃತಿಯ ನಿತ್ಯೋದ್ಯಾನವಾಗಿರುವ ಧವಳಲೋಕ ಹಿಮಾಲಯ.

ನಿರಂತರ ನವನವೋನ್ಮೇಷಶಾಲಿನಿಯಾದ ಪ್ರಕೃತಿಯ ಅಪ್ರತಿಮ ಸೌಂದರ್ಯ ಮನಸ್ಸಿಗೆ ಮುದ ನೀಡದಿದ್ದೀತೆ? ದುರ್ಗಮವಾದರೂ ದೈವಿಕವಾದ ಈ ಪುಣ್ಯಸ್ಥಳಗಳ ರಕ್ಷಣೆಗಾಗಿ ನಮ್ಮ ಸೈನಿಕ ಸೋದರರೂ ಹಗಲೂ-ರಾತ್ರಿ ಚಳಿ, ಗಾಳಿ, ಮಳೆಗಳಿಗೆ ಮೈಯೊಡ್ಡಿ ನಿಂತಿರುವುದು ನೆನಪಾದಾಗಲೆಲ್ಲ ರೋಮಾಂಚನವಾಗುತ್ತದೆ.

* * *

**ಧರೆಗಿಳಿದ ದಿವ್ಯತೇಜ...**

# ಓಂಕಾರನಾಥದಿಂದ ಪ್ರಯಾಣ

–ಲೇ: ಲ.ನ.ಶಾಸ್ತ್ರೀ

ಶ್ರೀ ಶಂಕರರು ನಿಧಾನವಾಗಿ ಮುಂದೆ ಹೆಜ್ಜೆಯಿಕ್ಕುತ್ತಿದ್ದಾರೆ, ಅವರ ಹಿಂದೆ ಗಂಭೀರ ನಡೆಯಿಂದ ನಂದಿಯು ಚಲಿಸುತ್ತಿದೆ. ಅದರ ಅಕ್ಕಪಕ್ಕದಲ್ಲಿ ನಾರಾಯಣ, ಸದಾಶಿವ, ಪರಮೇಶ್ವರರು ಸಾಗುತ್ತಿದ್ದಾರೆ. ಬಾಲಗುರುವನ್ನೂ ಅವರ ಶಿಷ್ಯವೃಂದವನ್ನೂ ದಾರಿಗುಂಟ ಇದ್ದ ಹಳ್ಳಿ ಗ್ರಾಮಸ್ಥರು, ಆದರ ವಿಶ್ವಾಸಗಳಿಂದ, ಭಕ್ತಿ ಗೌರವಗಳಿಂದ ಸ್ವಾಗತಿಸಿ ಸತ್ಕರಿಸುತ್ತಿದ್ದಾರೆ.

ಪ್ರಯಾಣ ಮಧ್ಯದಲ್ಲಿ, ಅಲ್ಲಲ್ಲಿ ಅಗ್ರಹಾರಗಳಲ್ಲಿ ಇದ್ದ ಅಗ್ನಿಹೋತ್ರಿಗಳೂ, ವಿದ್ವಾಂಸರೂ ಶಂಕರರನ್ನು ತಮ್ಮಲ್ಲಿಗೆ ಆಹ್ವಾನಿಸುತ್ತಿದ್ದರು, ಶಾಸ್ತ್ರ ವಿಚಾರ ಮಾಡುತ್ತಿದ್ದರು. ಈ ಬಾಲದಕ್ಷಿಣಾಮೂರ್ತಿಯ ಪ್ರತಿಭೆ, ವರ್ಚಸ್ಸುಗಳಿಗೆ ಮಾರುಹೋಗುತ್ತಿದ್ದರು. ಶಂಕರರಾದರೋ, ತಮ್ಮನ್ನು ವಾದದಲ್ಲಿ ಎದುರಿಸಿದ, ವಿದ್ವಾಂಸರು ಚಿಕ್ಕವರಿರಲಿ, ದೊಡ್ಡವರಿರಲಿ, ಪೂರ್ಣ ಪಂಡಿತರಿರಲಿ, ಎಲ್ಲರನ್ನೂ ಶ್ರೀದೇವಿಸರಸ್ವತಿಯ ಮಕ್ಕಳು ಎಂದೇ ಭಾವಿಸಿ, ಗೌರವದಿಂದ, ಸೌಜನ್ಯದಿಂದ ವರ್ತಿಸುತ್ತಿದ್ದರು. ತಮ್ಮ ನಿಶಿತವಾದ ತರ್ಕದಿಂದ, ದೃಢವಾದ ತಾತ್ತ್ವಿಕ ನಿಷ್ಠೆಯಿಂದ ತಾವು ಸ್ವಲ್ಪವೂ ಕದಲದೆ, ಇತರರ ವಿಚಾರಗಳಿಗೂ ಗೌರವ ಕೊಡುತ್ತಿದ್ದರು. ಮನ್ನಣೆಯೀಯುತ್ತಿದ್ದರು. ಹೀಗಾಗಿ ಬಾಲಗುರುವು ಹೋದಲೆಲ್ಲಾ ಜನಮನವನ್ನೂ ಹೃದಯವನ್ನೂ ಗೆಲ್ಲುತ್ತಿದ್ದರು. ಶ್ರೀ ಶಂಕರರ ವಾದ ತಮಗೆ ಸಮ್ಮತವಾಗಲಿ, ಆಗದಿರಲಿ, ಅವರ ವ್ಯಕ್ತಿತ್ವಕ್ಕೆ ಬಹುಜನ ಪಂಡಿತರು ಮಾರು ಹೋಗುತ್ತಿದ್ದರು. "ಸಕಲ ಶಾಸ್ತ್ರಗಳಲ್ಲಿಯೂ ಇಷ್ಟು ಪ್ರೌಢಪಾಂಡಿತ್ಯವುಳ್ಳ ಈ ಬಾಲ ಸಂನ್ಯಾಸಿ ಸಾಕ್ಷಾತ್ ಸರಸ್ವತಿಯ ಅವತಾರವೇ ಇರಬೇಕು" ಎಂದು ಎಲ್ಲರೂ ಶ್ಲಾಘನೆ ಮಾಡುತ್ತಿದ್ದರು.

ಹೀಗೆ ಪದಾರ್ಪಣ ಮಾಡಿದೆಡೆಗಳಲ್ಲೆಲ್ಲಾ ಜನ ಹೃದಯವನ್ನು ಗೆಲ್ಲುತ್ತಾ ಬಂದ, ಬಾಲಗುರುವನ್ನು ಹಲವಾರು ಜನ ರಾಜ ಮಹಾರಾಜರೂ ಕರೆದು ಗೌರವಿಸಿದರು. ಅವರು ಭಕ್ತಿ ಪೂರ್ವಕವಾಗಿ ವಸ್ತು ವಾಹನಗಳನ್ನು ಸಮರ್ಪಿಸಿದಾಗ, ಶ್ರೀ ಶಂಕರರು "ಇವು ಈಗ ನಮಗೆ ಅಗತ್ಯವಾಗಿಲ್ಲ. ಇವು ನಿಮ್ಮಲ್ಲಿಯೇ ಇರಲಿ, ಅವಶ್ಯವಾದಾಗ ನಾವೇ ಕೇಳುತ್ತೇವೆ" ಎಂದು ಹೇಳಿ ಹಿಂದಿರುಗಿಸುತ್ತಿದ್ದರು. ರಾಜಾಸ್ಥಾನದಲ್ಲಿದ್ದ ಪಂಡಿತರು ತಾವು ರಚಿಸಿದ ಗ್ರಂಥಗಳನ್ನು ಕೊಟ್ಟಾಗ, ಅವುಗಳನ್ನು ಮಾತ್ರ ಸ್ವೀಕರಿಸುತ್ತಿದ್ದರು.

ಸಂಚಾರವು ಹೀಗೆ ಕ್ರಮಿಸುತ್ತಾ ವಿಂಧ್ಯಪರ್ವತವನ್ನು ದಾಟಿ ಮುಂದಕ್ಕೆ ಸಾಗಿತು. ಹೈಹಯ, ಚೇದಿ, ಕೌಶಾಂಬಿ ರಾಜ್ಯಗಳ ಮೂಲಕ ಹಾದು ಯಮುನಾ ದಡದಲ್ಲಿ ಸ್ವಲ್ಪ ದಿನ ನೆಲೆಸಿದ್ದು ನಾಲ್ವರೂ ವಿಶ್ರಮಿಸಿಕೊಂಡರು.

ಅನಂತರ ಯಮುನೆಯ ತೀರದಲ್ಲೇ ಮುಂದೆ ಸಾಗುತ್ತಾ ಪ್ರಯಾಗ ಕ್ಷೇತ್ರಕ್ಕೆ ಆಗಮಿಸಿದರು. ಅಲ್ಲಿ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿದರು. ಅಲ್ಲಿ ಒಂದೆರಡು ದಿನ ತಂಗಿದರು, ಅಲ್ಲಿಯ ಪಂಡಿತರನ್ನು ಕಾಣುವ ಅಭೀಪ್ಸೆಯಿಂದ.

ಶಿಷ್ಯರು ಭಿಕ್ಷಾಟನೆಗೆ ಹೋಗಿರುತ್ತಿದ್ದಾಗ ಶಂಕರರು ತಮ್ಮಲ್ಲಿದ್ದ ಗ್ರಂಥಗಳನ್ನು ಅವಲೋಕಿಸುತ್ತಲೋ ಅಥವಾ ನದೀ ತೀರದ ಪರ್ಣಕುಟಿಗಳಲ್ಲಿ ಇದ್ದ ಸಾಧುಸಂತರೊಡನೆ ಸಂಭಾಷಿಸುತ್ತಲೋ ಇದ್ದರು. ಅಲ್ಲಿ ಇದ್ದಾಗಲೇ ಅವರಿಗೆ ಆಚಾರ್ಯ ಕುಮಾರಿಲಭಟ್ಟರ ವಿಚಾರ ತಿಳಿಯಿತು. ಆಚಾರ್ಯ ಕುಮಾರಿಲಭಟ್ಟರವರು ವಿದ್ಯಾಭ್ಯಾಸಕ್ಕೆಂದು, ತೀರ ಬಾಲ್ಯದಲ್ಲಿಯೇ ಪ್ರಯಾಗ ಕ್ಷೇತ್ರಕ್ಕೆ ಬಂದವರು. ಚತುರ್ವೇದಗಳನ್ನು, ವ್ಯಾಕರಣ ಶಾಸ್ತ್ರವನ್ನು, ತರ್ಕವನ್ನು, ಮೀಮಾಂಸವನ್ನು ಅಧ್ಯಯನ ಮಾಡಿದರು. ಅವರ

ತಂದೆಯವರು ಅಗ್ನಿಹೋತ್ರಿಯೂ ಸೋಮಯಾಜಿಯೂ ಆಗಿದ್ದರಿಂದ, ಕುಮಾರಿಲಭಟ್ಟರಿಗೂ ಸಹಜವಾಗಿ ಯಜ್ಞಯಾಗಾದಿ ಕರ್ಮಗಳಲ್ಲಿ ಶ್ರದ್ಧೆ ಹುಟ್ಟಿತು. ಜೈಮಿನಿ ಮಹರ್ಷಿಗಳ ಪೂರ್ವ ಮೀಮಾಂಸಾ ಶಾಸ್ತ್ರವನ್ನು ವಿಶೇಷ ಅಸ್ಥೆ ಅಕ್ಕರೆಯಿಂದ ಅಧ್ಯಯನ ಮಾಡಿದ್ದ ಕುಮಾರಿಲರು, ವೇದಗಳ ಅಂತರ್ಯವು ಕರ್ಮವೇ, ಕರ್ಮದಿಂದಲೇ ಮೋಕ್ಷ ಎಂಬ ನಿರ್ಧಾರವನ್ನು ತಳೆದಿದ್ದರು. ಅವರ ಕಾಲದಲ್ಲಿ ಬಹಳಷ್ಟು ಜನ ಮೀಮಾಂಸಕರು ಯಜ್ಞಯಾಗಾದಿಗಳಲ್ಲಿ ನಿಷ್ಠರಾಗಿದ್ದರೂ, ಹೆಚ್ಚು ಜನ ತೀರಾ ಲೌಕಿಕವಾದ ಕಾಮನೆಗಳನ್ನೇ ಗುರಿಯಾಗಿ ಹೊಂದಿ ಅವುಗಳ ಪ್ರಾಪ್ತಿಗಾಗಿ ಯಜ್ಞಯಾಗಾದಿಗಳನ್ನು ಮಾಡುತ್ತ, ಜೈನ ಬೌದ್ಧರ ಟೀಕೆ ಅಪಹಾಸ್ಯಗಳಿಗೆ ಗುರಿಯಾಗಿದ್ದರು. ಕುಮಾರಿಲರಿಗೆ ಈ ಮೀಮಾಂಸಕರಿಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟು ತಪ್ಪನ್ನು ತಿದ್ದುವುದೂ, ಬೌದ್ಧರ ಕಟುಟೀಕೆಯನ್ನು ಎದುರಿಸಿ ಅವರನ್ನು ನಿರುತ್ತರರಾಗುವಂತೆ ಮಾಡುವುದೂ, ಮುಖ್ಯ ಕೆಲಸವಾಗಿತ್ತು.

ರಾಜಾಶ್ರಯದಲ್ಲಿ ಇದ್ದ ಬೌದ್ಧರು ತಮ್ಮ ಅಭಿಚಾರಿಕ ತಾಂತ್ರಿಕ ಕೃತಿ ಪವಾಡಗಳಿಂದ ರಾಜರನ್ನು, ರಾಣಿವಾಸದವರನ್ನು ಮರುಳುಗೊಳಿಸಿ ವೇದಶಾಸ್ತ್ರ ಪಂಡಿತರಿಗೆ ತುಂಬಾ ಕಿರುಕುಳವನ್ನು ಕೊಡುತ್ತಿದ್ದರು. ಇದನ್ನು ತಡೆಗಟ್ಟುವುದು ಹೇಗೆಂದು ಯೋಚಿಸಿದ ಕುಮಾರಿಲರು, ತಾವು ಸ್ವತಃ ಬೌದ್ಧ ಮತವನ್ನು ಸ್ವೀಕರಿಸಿ, ಬೌದ್ಧ ಧರ್ಮ ಮತ್ತು ತತ್ತ್ವಗ್ರಂಥಗಳನ್ನು ಗುರುಮುಖೇನ ಅಧ್ಯಯನ ಮಾಡಿದರು. ಕುಮಾರಿಲರು ಮಾರುವೇಷದಲ್ಲಿ ಬೌದ್ಧ ವಿದ್ಯಾಲಯದಲ್ಲಿದ್ದುದು ಬಹಳ ಕಾಲ ಗುಟ್ಟಾಗಿರಲಿಲ್ಲ.

ಕುಮಾರಿಲರು ವೇಷಭೂಷಣದಲ್ಲಿ ಬೌದ್ಧರಾಗಿದ್ದರೂ, ಹೃದಯ ಮನಸ್ಸುಗಳಿಂದ ಸಂಪೂರ್ಣ ವೈದಿಕರಾಗಿದ್ದರು. ಅವರು ದಿನನಿತ್ಯವೂ ತೀರ ನಸುಕಿನಲ್ಲಿಯೇ ಎದ್ದು, ತಟಾಕಕ್ಕೆ ಸ್ನಾನಕ್ಕೆ ಹೋಗಿ, ಅಲ್ಲಿಯೇ ತಮ್ಮ ಅಹ್ನೀಕವನ್ನು ಮಾಡಿ, ಸ್ವಲ್ಪ ಕಾಲ ತೀರಾ ಸಣ್ಣ ದನಿಯಲ್ಲಿ ವೇದಪಾರಾಯಣ ಮಾಡುತ್ತಿದ್ದರು. ಇದನ್ನು ಒಬ್ಬಿಬ್ಬರು ಭಿಕ್ಷುಗಳು ಕಂಡುಕೊಂಡು ಬಿಟ್ಟರು. ಕುಮಾರಿಲರ ಎದುರಿನಲ್ಲಿಯೇ ಎಷ್ಟೋ ಸಲ ವೈದಿಕ ಧರ್ಮದ ಖಂಡನೆ ನಡೆದಾಗ ಕುಮಾರಿಲರು ಅನಿವಾರ್ಯವಾಗಿ ಸುಮ್ಮನಿರುತ್ತಿದ್ದರೂ, ಅವರು ಮುಖ ಮ್ಲಾನವಾಗುತ್ತಿತ್ತು. ಕಂಗಳು ನೀರ್ದುಂಬಿ ಬಿಡುತ್ತಿದ್ದವು.

ಒಂದು ದಿನ ಗುಟ್ಟು ರಟ್ಟಾಯಿತು. ಕುಮಾರಿಲರಿಗೂ ಅವರ ಸಹಪಾಠಿಗಳಿಗೂ ಮಾತು ನಡೆದು ಚರ್ಚೆಗೆ ತೊಡಗಿ, ಕುಮಾರಿಲರು ಬೌದ್ಧರ ಆಚಾರವಿಚಾರವನ್ನು ಟೀಕಿಸಿಬಿಟ್ಟರು. ಕೂಡಲೇ ವಿದ್ಯಾಲಯದ ಆಚಾರ್ಯ ಪ್ರಮುಖರವರೆಗೂ ದೂರುಹೋಯಿತು. ಅವರು ಕುಮಾರಿಲರನ್ನು ಕರೆಸಿ ವಿಚಾರಣೆ ಮಾಡಿ ತತ್‌ಕ್ಷಣವೇ ವಿದ್ಯಾಲಯವನ್ನು ಬಿಟ್ಟು ಹೊರಡಬೇಕೆಂದು ಆಜ್ಞೆ ಮಾಡಿದರು.

ಕುಮಾರಿಲರು ತಮ್ಮ ಕೊಠಡಿಗೆ ಹೋಗಿ ತಮ್ಮ ಪುಸ್ತಕಗಳನ್ನು ಎತ್ತಿಕೊಂಡು, ಖಿನ್ನರಾಗಿ ಹೊರಕ್ಕೆ ಬಂದಾಗ ಅವರಿಂದ ಟೀಕೆಗೊಳಗಾಗಿದ್ದ ತುಂಟ ವಿದ್ಯಾರ್ಥಿಗಳು ಅವರನ್ನು ವಿಶ್ವವಿದ್ಯಾಲಯದ ಮೇಲ್ಮಹಡಿಯಿಂದ ಕೆಳಕ್ಕೆ ತಳ್ಳಿಬಿಟ್ಟರು! ಬ್ರಹ್ಮಚಾರಿಯೂ, ಯೋಗಾಭ್ಯಾಸ ನಿರತರೂ ಆಗಿದ್ದ ಕುಮಾರಿಲರು ಮೇಲಿಂದ ಕೆಳಗೆ ಬಿದ್ದರೂ ವಿಶೇಷ ಅಪಾಯವಾಗಲಿಲ್ಲ. ಕಣ್ಣಿಗೆ ಏಟು ಬಿದ್ದು ಕಣ್ಣೊಂದು ನಿಷ್ಕ್ರಿಯವಾಯಿತು. ಆದರೆ ಮನಸ್ಸಿಗೆ ಘಾಸಿಯಾಯಿತು. ತಾವು ದೇಶವನ್ನೆಲ್ಲಾ ಸಂಚರಿಸಿ, ಬೌದ್ಧ ಧರ್ಮದ ಆಚಾರ ವಿಚಾರವನ್ನು ಖಂಡಿಸುವುದಾಗಿಯೂ, ವೈದಿಕ ಧರ್ಮದ ಪುನಃ ಸ್ಥಾಪನೆಗೆ ಯತ್ನಿಸುವುದಾಗಿಯೂ ಪ್ರತಿಜ್ಞೆ ಮಾಡಿದರು.

ಅಂದಿನಿಂದ ಅಹರ್ನಿಶಿ ಅವರಿಗೆ ಅದೇ ಕೆಲಸವಾಯಿತು. ದೇಶ ಸಂಚಾರ, ಬೌದ್ಧರ ಆಚಾರ ವಿಚಾರ ಖಂಡನೆ. ಆಚಾರ್ಯರು ತಮ್ಮ ನಿಲುವನ್ನು ಸಮರ್ಥಿಸಲು ಹಲವಾರು ಉದ್ಗ್ರಂಥಗಳನ್ನು ರಚಿಸಿದರು. ಕುಮಾರಿಲ ಭಟ್ಟರು ಶಾಬರಭಾಷ್ಯಕ್ಕೆ ಟೀಕೆಗಳನ್ನು, ಶ್ಲೋಕವಾರ್ತಿಕ ಮತ್ತು ತಂತ್ರವಾರ್ತಿಕ ಎಂಬ ಉದ್ಗ್ರಂಥಗಳನ್ನು ಬರೆದರು.

ತಮ್ಮ ಜೀವಿತದ ಧ್ಯೇಯವಾದ ವೈದಿಕ ಧರ್ಮದ ರಕ್ಷಣೆ, ಮತ್ತು ಕರ್ಮ ಮಾರ್ಗದ ಪುನರುತ್ಥಾನಕ್ಕಾಗಿ ಆಚಾರ್ಯರು ದೇಶದಿಂದ ದೇಶಕ್ಕೆ ಸಂಚರಿಸಿದರು. ಬೌದ್ಧ ಪಂಡಿತರುಗಳನ್ನು ವಾದಕ್ಕೆ ಆಹ್ವಾನಿಸಿದರು. ಅವರ ತತ್ತ್ವಗಳನ್ನು, ಆಚಾರಗಳನ್ನು ತರ್ಕದ ಒರೆಗಲ್ಲಿಗೆ ಹಚ್ಚಿ ತೀಡಿದರು. ಬೌದ್ಧ ಮತದಲ್ಲಿ ಹೊಕ್ಕಿದ್ದ ಅನೈತಿಕತೆಯನ್ನು ಎತ್ತಿ ತೋರಿಸಿದರು. ನೈರಾತ್ಮ್ಯವಾದವನ್ನು ಖಂಡಿಸಿದರು.

ಆಚಾರ್ಯ ಕುಮಾರಿಲರು ಏಕಾಂಗಿಯಾಗಿ ಮಾಡುತ್ತಿದ್ದ ಕೆಲಸವನ್ನು ಕೇಳಿ ಶಂಕರರು ವಿಸ್ಮಿತರಾದರು. ಈ ಮಹಾತ್ಮರನ್ನು ಒಮ್ಮೆ ಭೇಟಿ ಮಾಡಬೇಕೆಂಬ ಅಪೇಕ್ಷೆ ಶಂಕರರಲ್ಲಿ ಉಂಟಾಯಿತು. ಅವರು ಭಿಕ್ಷಾಟನೆಯಿಂದ ಹಿಂದಿರುಗಿದ ತಮ್ಮ ಶಿಷ್ಯರನ್ನು ಕರೆದು, "ಈ ಸ್ಥಳದಲ್ಲಿ ಆಚಾರ್ಯ ಕುಮಾರಿಲ ಭಟ್ಟರೆಂಬ ಮೀಮಾಂಸದರ್ಶನ ಮೂರ್ಧನ್ಯರಿದ್ದಾರೆಂದು ಈ ದಿನ ಕೇಳಿದೆ. ಅವರ ದರ್ಶನ ಮಾಡಬೇಕು, ಈ ದಿನದ ಭಿಕ್ಷೆಯಾದ ನಂತರ ಅವರ ಗೃಹಕ್ಕೆ ತೆರಳಿ ಅವರ ಸಮಯ, ಅವಕಾಶಗಳನ್ನು ತಿಳಿದುಕೊಂಡು ಬನ್ನಿ" ಎಂದರು.

ನಾರಾಯಣ ಸದಾಶಿವರಿಬ್ಬರೂ ಮಧ್ಯಾಹ್ನದ ಭೋಜನ ಮುಗಿಸಿ ನಗರದತ್ತ ಹೊರಟರು. ಕುಮಾರಿಲರ ಮನೆಯನ್ನು ಹುಡುಕುವುದು ಅವರಿಗೆ ಕಷ್ಟವಾಗಲಿಲ್ಲ. ಮಹಾದ್ವಾರದತ್ತ ಬಂದು ಅಲ್ಲಿದ್ದ ವಟುವೊಬ್ಬನನ್ನು ಕರೆದು "ಸೋದರ ನಾವು ದಕ್ಷಿಣ ದೇಶದಿಂದ ಬಂದಿದ್ದೇವೆ. ನಮ್ಮ ಗುರುಗಳಾದ ಶ್ರೀ ಶಂಕರಾಚಾರ್ಯರು ನಿಮ್ಮ ಗುರುಗಳಾದ ಶ್ರೀ ಕುಮಾರಿಲಭಟ್ಟಪಾದರನ್ನು ಕಾಣಬೇಕೆಂದು ಅಪೇಕ್ಷಿಸುತ್ತಿದ್ದಾರೆ. ಅವರ ಸಮಯ ಹೇಗೆ, ವಿಚಾರಿಸುವಿರಾ" ಎಂದರು.

ವಟುವು "ಬ್ರಾಹ್ಮಣರೇ, ನಮ್ಮ ಆಚಾರ್ಯರು ಸಂಚಾರದಲ್ಲಿದ್ದಾರೆ. ಈಗ ಮಾಹಿಷ್ಮತಿಯಲ್ಲಿರುವ ಅವರ ಶಿಷ್ಯ ಶ್ರೀ ವಿಶ್ವರೂಪರು ಒಂದು ಬೃಹದ್ಯಜ್ಞ ನಡೆಸುತ್ತಿದ್ದು, ಆಚಾರ್ಯರು ಅಲ್ಲಿಗೆ ದಯಮಾಡಿಸಿದ್ದಾರೆ. ಅವರು ಬರುವುದು ಇನ್ನೊಂದು ಪಕ್ಷವಾದರೂ ಆಗಬಹುದು" ಎಂದು ನುಡಿದು, "ನಮ್ಮ ಆಚಾರ್ಯರ ಆಜ್ಞೆಯೊಂದಿದೆ, ತಮ್ಮ ಗೃಹಕ್ಕೆ ಬಂದ ಅತಿಥಿಗಳನ್ನು ಸತ್ಕರಿಸಿ



ಪ್ರಜ್ವಲಿಸುವ ದೀಪ – ಎಡಿಸನ್

ಕಳಿಸಬೇಕೆಂದು ಅವರ ಅಪ್ಪಣೆ. ಆದ್ದರಿಂದ ನೀವು ನಿಮ್ಮ ಗುರುಗಳನ್ನು ಕರೆತಂದು, ಒಂದೆರಡು ದಿನ ಇಲ್ಲಿ ಇದ್ದು ನಮ್ಮ ಸತ್ಕಾರ ಸೇವೆಗಳನ್ನು ಸ್ವೀಕರಿಸಬೇಕೆಂದು ಕೋರುತ್ತೇನೆ" ಎಂದನು.

"ಬಂಧುವೇ ನಿನ್ನ ಆಹ್ವಾನಕ್ಕಾಗಿ ನಾವು ಕೃತಜ್ಞರು. ನಾವೀಗ ವಾರಣಾಸಿಯತ್ತ ಪ್ರಯಾಣ ಹೊರಟಿದ್ದೇವೆ. ಪಂಡಿತರು, ವಿದ್ವಾಂಸರೆಂದರೆ ನಮ್ಮ ಗುರುಗಳಿಗೆ ತುಂಬಾ ಅದರ ವಿಶ್ವಾಸ. ಅವರನ್ನು ದರ್ಶಿಸಿ, ಶಾಸ್ತ್ರ ವಿಚಾರ ಮಾಡುವುದು ಅವರ ಅಭ್ಯಾಸ. ಅದಕ್ಕಾಗಿಯೇ ಅವರು ನಮ್ಮನ್ನು ಇಲ್ಲಿಗೆ ಕಳುಹಿಸಿದರು. ನಿಮ್ಮ ಆಚಾರ್ಯರು ಈಗ, ಸದ್ಯದಲ್ಲಿ ಹಿಂದಿರುಗಿ ಬರುವುದಿಲ್ಲವಾದ್ದರಿಂದ, ನಾವು ನಮ್ಮ ಗುರುಗಳಲ್ಲಿ ಈ ವಿಚಾರವನ್ನು ವಿನಂತಿಸುತ್ತೇವೆ" ಎಂದು ಹೇಳಿ ಸದಾಶಿವ, ನಾರಾಯಣರು ಅಲ್ಲಿಂದ ಹಿಂದಿರುಗಿದರು.

ಶಿಷ್ಯರು ಆಚಾರ್ಯ ಕುಮಾರಿಲರು ಮಾಹಿಷ್ಮತಿಗೆ ಹೋಗಿರುವುದನ್ನು, ಅವರ ಆಗಮನ ಇನ್ನೂ ತಡವೆಂದು ಗುರುವಿಗೆ ಬಿನ್ನವಿಸಿದರು.

ಶ್ರೀ ಶಂಕರರು ಆಚಾರ್ಯರನ್ನು ಸಂದರ್ಶಿಸಲು ಆಗಲಿಲ್ಲವಲ್ಲಾ, ಎಂದು ಖಿನ್ನರಾದರೂ ಮುಂದೆ ಅವರ ದರ್ಶನವನ್ನು ಪಡೆಯಬಹುದು ಎಂದುಕೊಂಡರು. ಪ್ರಯಾಗ ಕ್ಷೇತ್ರದಿಂದ ಮುಂದೆ ವಾರಣಾಸಿಯತ್ತ ಹೊರಟರು.

ಪ್ರಯಾಗ ಕ್ಷೇತ್ರದಲ್ಲಿ ಬ್ರಹ್ಮದೇವರು ಅನೇಕ ಯಜ್ಞಯಾಗಗಳನ್ನು ನಡೆಸಿದುದನ್ನೂ ಭಾರದ್ವಾಜ ಮಹರ್ಷಿಯು ನೂರಾರು ಜನ ವಿದ್ಯಾರ್ಥಿಗಳಿಗೆ ವೇದ ಪಾಠ ಮಾಡಿಸಿದುದನ್ನೂ ಮಾತನಾಡಿಕೊಳ್ಳುತ್ತಾ ಪ್ರಯಾಣ ಸಾಗಿಸಿದರು. ವೇದಕಾಲದ ದಿವ್ಯ ನದಿಯಾಗಿದ್ದ ಸರಸ್ವತಿಯ ಪ್ರೀತ್ಯರ್ಥವಾಗಿ ಈಗ ಅಂತರ್ಗಾಮಿನಿಯಾದರೂ, ಈಗಲೂ ವಿದ್ಯಾಧಿದೇವಿಯಾದ ಸರಸ್ವತಿಯು ವೇದಘೋಷ ಪ್ರವಾಹವು ಪ್ರಯಾಗದಲ್ಲಿ ಅನವರತವೂ ಆಗುತ್ತಿರುವುದನ್ನು ಕಂಡು ಕೇಳಿ ಹರ್ಷಿಸುತ್ತಾ ಗಂಗಾ, ಯಮುನೆಯರೊಡನೆ ಈ ವೇದಗೋಷವಾಹಿನಿಯೂ ಸೇರಿ, ಪ್ರಯಾಗವು ತ್ರಿವೇಣಿಯ ಕ್ಷೇತ್ರವಾಗಿಯೇ ಇಂದೂ ಇರುವುದನ್ನು ಕಂಡು ಶ್ರೀ ಶಂಕರರು ಸಂತೋಷಿಸಿದರು.

* * *

ವಚನಭಾಗವತ...

# ಪ್ರವೃತ್ತಿ ನಿವೃತ್ತಿ ಧರ್ಮಗಳು

–ಲೇ: ತ.ಸು.ಶಾಮರಾಯ.

"ಅಮ್ಮ, ದುಷ್ಕರ್ಮದಿಂದ ದುರ್ಗತಿಯಾದರೆ, ಸತ್ಕರ್ಮದಿಂದ ಸದ್ಗತಿ ದೊರೆಯುತ್ತದಷ್ಟೆ. ಈ ಸತ್ಕರ್ಮದಲ್ಲಿಯೂ ಎರಡು ವಿಧ: ಫಲಾಪೇಕ್ಷೆಯಿಂದ ಮಾಡುವ ಸಕಾಮಕರ್ಮ, ಫಲಾಪೇಕ್ಷೆಯಿಲ್ಲದೆ ಮಾಡುವ ನಿಷ್ಕಾಮಕರ್ಮ–ಇವನ್ನು ಕ್ರಮವಾಗಿ ಪ್ರವೃತ್ತಿಧರ್ಮ, ನಿವೃತ್ತಿಧರ್ಮ ಎಂದು ಕರೆಯುತ್ತಾರೆ. ಸಂಸಾರಿಗಳಾದವರು ಸಾಮಾನ್ಯವಾಗಿ ಪ್ರವೃತ್ತಿಧರ್ಮವನ್ನು ಆಚರಿಸುತ್ತಾರೆ. ಹಾಲಿನ ಆಸೆಯಿಂದ ಆಕಳನ್ನು ಮೇಯಿಸಿ, ಹಾಲನ್ನು ಪಡೆದ ಮೇಲೆ ಪುನಃ ಹಾಲನ್ನು ಪಡೆವ ಆಸೆಯಿಂದ ಆಕಳನ್ನು ಮೇಯಿಸುವ ಗೊಲ್ಲನ ಹಾಗೆ, ಈ ಸಂಸಾರಿಗಳೆಂಬುವರು. ನಿಷ್ಕಾಮನಾಗಿ ಭಗವಂತನನ್ನು ಆರಾಧಿಸುವುದಕ್ಕೆ ಬದಲಾಗಿ ಅವರು ತಮ್ಮ ಸಂಸಾರ ಸುಗಮವಾಗಿ ನಡೆದುಕೊಂಡು ಹೋಗುವಂತಹ ಧನಧಾನ್ಯ, ಭೋಗಭಾಗ್ಯಗಳಿಗಾಗಿ ಕಾಮ್ಯಕರ್ಮಗಳನ್ನು ಆಚರಿಸುತ್ತಾರೆ. ಯಜ್ಞಯಾಗಾದಿಗಳಿಂದ ದೇವತೆಗಳನ್ನೂ, ಶ್ರಾದ್ಧಾದಿಗಳಿಂದ ಪಿತೃಗಳನ್ನೂ, ತೃಪ್ತಿಪಡಿಸುವವನು ಈ ಪುಣ್ಯಕರ್ಮಗಳ ಫಲವಾಗಿ ಧೂಮಗತಿಯಿಂದ ಚಂದ್ರಲೋಕವನ್ನು ಸೇರಿ, ತನ್ನ ಪುಣ್ಯವು ತೀರುವವರೆಗೆ ಅಲ್ಲಿ ಸೋಮಪಾನದ ಸುಖವನ್ನು ಅನುಭವಿಸುತ್ತಿದ್ದು, ಆ ಪುಣ್ಯ ತೀರುತ್ತಲೆ ಅಲ್ಲಿಂದ ಉರುಳಿ ಆಕಾಶ, ವಾಯು, ಧೂಮ, ಮೇಘಗಳ ಮೂಲಕ ಭೂಲೋಕಕ್ಕೆ ಬೀಳುತ್ತಾನೆ. ಇಷ್ಟೇ ಅಲ್ಲ, ಕಾಮ್ಯಫಲಗಳನ್ನು ನೀಡುವ ಚಂದ್ರಲೋಕಾದಿ ಪುಣ್ಯ ಲೋಕಗಳೆಲ್ಲ ಅಸ್ಥಿರವಾದುವು. ಪ್ರಳಯಕಾಲದಲ್ಲಿ ಆ ಲೋಕಗಳೆಲ್ಲ ನಾಶವಾಗಿ ಹೋಗುತ್ತವೆ. ಆದ್ದರಿಂದ ಪ್ರವೃತ್ತಿಧರ್ಮವನ್ನು ಕೈಕೊಂಡವನು ಶಾಶ್ವತ ಸುಖವನ್ನು ಪಡೆಯಲಾರ. ಶಾಶ್ವತಸುಖ ಬೇಕೆನ್ನುವವ ನಿವೃತ್ತಿಧರ್ಮವನ್ನೆ ಕೈಕೊಳ್ಳಬೇಕು."

"ನಿವೃತ್ತಿಧರ್ಮವನ್ನು ಆಚರಿಸುವವರು ಪರಬ್ರಹ್ಮನ ಉಪಾಸಕರು. ಅವರಿಗೆ ಅಹಂಕಾರ ಮಮಕಾರಗಳಿಲ್ಲ. ಅವರು ಶಮದಮಾದಿಗಳಿಂದ ಕೂಡಿದ ಶುದ್ಧ ಮನಸ್ಸಿನವರು. ಅರ್ಥಕಾಮಗಳನ್ನು ಕೊಡುವ ವರ್ಣಾಶ್ರಮ ಧರ್ಮಗಳಿಗಿಂತಲೂ ಸ್ವಧರ್ಮದಲ್ಲಿ ಹೆಚ್ಚು ನಿಷ್ಠೆಯುಳ್ಳವರು. ಕೇವಲ ಈಶ್ವರಾರ್ಪಣಬುದ್ಧಿಯಿಂದ ಅವರು ಕರ್ಮಗಳನ್ನು ಆಚರಿಸುತ್ತಾರೆ. ಅಂತಹವರು ದೇಹಾಂತರದಲ್ಲಿ ಅರ್ಚಿರಾದಿಗತಿಯಿಂದ ಪರಮಾತ್ಮನನ್ನು ನೇರವಾಗಿ ಹೋಗಿ ಸೇರುತ್ತಾರೆ. ನಿವೃತ್ತಿಧರ್ಮವನ್ನು ಆಚರಿಸುವವರು ತಮ್ಮ ಬ್ರಹ್ಮೋಪಾಸನ ಕರ್ಮದಲ್ಲಿ ಸಿದ್ಧಿಯನ್ನು ಪಡೆಯುವ ಮುನ್ನವೇ ಸತ್ತು ಹೋದರೆ ಅಂತಹವರು ಬ್ರಹ್ಮಲೋಕಕ್ಕೆ ಹೋಗಿ ನೆಲಸಿ, ಸದಾ ಪರಮಾತ್ಮನ ಧ್ಯಾನದಲ್ಲಿರುತ್ತಾ, ಮಹಾಪ್ರಳಯವಾದಾಗ ಬ್ರಹ್ಮನ ಜೊತೆಯಲ್ಲಿಯೇ ಪರಬ್ರಹ್ಮನ ಸಾನ್ನಿಧ್ಯವನ್ನು ಪಡೆಯುವರು. ತಾಯಿ, ಸಮಸ್ತ ಲೋಕಗಳನ್ನೂ ಸೃಷ್ಟಿಸುವ ಮಹಿಮಾಶಾಲಿ ಆ ಚತುರ್ಮುಖ ಬ್ರಹ್ಮನೂ ಕೂಡ, ನಿಷ್ಕಾಮಕರ್ಮಗಳನ್ನು ಮಾಡಿದವನಾದರೂ ಕೂಡ, 'ನಾನು ನಿಷ್ಕಾಮಕರ್ಮಗಳನ್ನು ಮಾಡಿದವನು' ಎಂಬ ಅಹಂಕಾರದಿಂದ ಮುಕ್ತನಾಗಲಾರದೆ ಸಗುಣಬ್ರಹ್ಮನಲ್ಲಿ ಸೇರಿಕೊಂಡಿದ್ದು, ಪ್ರಳಯಾಂತ್ಯದಲ್ಲಿ ಮತ್ತೆ ಸೃಷ್ಟಿಕರ್ತನಾಗಿ ಜನಿಸಬೇಕಾಗುತ್ತದೆ. ಎಂದ ಮೇಲೆ ಸಾಮಾನ್ಯ ಮಾನವರ ಪಾಡೇನು? ಇಂದ್ರಿಯಸುಖದ ಅಭಿಲಾಷೆಯಿಂದ ಕರ್ಮಗಳನ್ನಾಚರಿಸಿದವರು ಧೂಮಗತಿಯಿಂದ ಪಿತೃಲೋಕಕ್ಕೆ ಹೋಗಿ, ಪುಣ್ಯಫಲ ತೀರುತ್ತಲೆ, ಭೂಲೋಕಕ್ಕೆ ಮರಳಿ, ತಮ್ಮ ಮಕ್ಕಳಿಗೆ ಮಕ್ಕಳಾಗಿ ಹುಟ್ಟುವರು." "ಅಮ್ಮ, ಕಾಮ್ಯಕರ್ಮವನ್ನು ಮಾಡುವವರು ಹೀಗೆ ಶಾಶ್ವತಸುಖದಿಂದ ವಂಚಿತರಾಗುವರಾದ್ದರಿಂದ ನೀನು ನಿತ್ಯಪದವಿಯನ್ನು ನೀಡುವ ಭಗವಂತನನ್ನೇ



ಇಂಡಕ್ಷನ್ ಕಾಯ್ಲ್ – ರೋಮ್ ಕೊರ್ಫ್

ಆಶ್ರಯಿಸು. ಆತನಲ್ಲಿ ಎರಡಿಲ್ಲದ ಭಕ್ತಿಯನ್ನಿಟ್ಟರೆ ವೈರಾಗ್ಯ ತಾನಾಗಿ ಉದಿಸುತ್ತದೆ, ಬ್ರಹ್ಮಜ್ಞಾನ ಪ್ರಾಪ್ತಿಯಾಗುತ್ತದೆ. ಆಗ ಸುಖ ದುಃಖ, ಪ್ರೀತಿ ದ್ವೇಷ ಎಂಬ ದ್ವಂದ್ವಗಳು ಅಳಿದು ಹೋಗುತ್ತವೆ; ಎಲ್ಲವೂ ಪರಬ್ರಹ್ಮ ಸ್ವರೂಪವೆಂದು ಗೋಚರವಾಗುತ್ತದೆ. ತಾಯಿ, ಸೂರ್ಯನಿಗೆ ಮೋಡಗಳು ಮುಸುಕಿಕೊಳ್ಳುವಂತೆ, ಅಜ್ಞಾನ ಜ್ಞಾನವನ್ನು ಮುಚ್ಚಿಬಿಟ್ಟಿದೆ. ಆ ಜ್ಞಾನ ಉದಿಸಬೇಕಾದರೆ ಅಜ್ಞಾನ ಸ್ವರೂಪವಾದ ಸಂಸಾರ ವ್ಯಾಪಾರವನ್ನು ತೊಲಗಿಸಬೇಕು. ಯೋಚಿಸಿ ನೋಡು, ಈ ಜಗತ್ತೆಲ್ಲವೂ ಪರಬ್ರಹ್ಮವಸ್ತುವೇ. ಬಹಿರ್ಮುಖವಾಗಿರುವ ನಮ್ಮ ಇಂದ್ರಿಯಗಳಿಗೆ ಮಾತ್ರ ಅದು ಪ್ರತ್ಯೇಕ ಪದಾರ್ಥವೆಂಬಂತೆ ತೋರುತ್ತದೆ. ನಾನು ಹಿಂದೆಯೇ ತಿಳಿಸಿ ಹೇಳಿದಂತೆ, ಮಹತ್ ತತ್ವ ಅಹಂಕಾರ ತತ್ವವಾಗಿ ಅದರಲ್ಲಿ ಸತ್ವ ರಜ ತಮಗಳೆಂಬ ಗುಣಗಳು ಏರ್ಪಟ್ಟು, ಪೃಥ್ವಿಯೇ ಮೊದಲಾದ ಪಂಚಭೂತಗಳೂ ಇಂದ್ರಿಯರೂಪದ ಹನ್ನೊಂದು ತತ್ವಗಳೂ, ಈ ತತ್ವಸಮುದಾಯರೂಪವಾದ ಅಂಡ ಮತ್ತು ಬ್ರಹ್ಮ ಇವೆಲ್ಲವೂ ಭಗವಂತನಿಂದ ಉದಿಸಿ ಬಂದುವಲ್ಲವೆ? ಆದ್ದರಿಂದ ಇವೆಲ್ಲವೂ ಬ್ರಹ್ಮಾತ್ಮಕ. ವಿರಕ್ತನಾಗಿ ದೃಢಚಿತ್ತನಾದ ಯೋಗಿಗೆ ಇದು ಗೋಚರವಾಗುತ್ತದೆ."

"ಅಮ್ಮ, ಜಡ, ಜೀವ, ಬ್ರಹ್ಮರ ಸ್ವರೂಪವನ್ನು ಅರ್ಥಮಾಡಿಕೊಳ್ಳಬಲ್ಲ ಆತ್ಮಜ್ಞಾನವನ್ನು ನಿನಗೆ ವಿವರಿಸಿದ್ದೇನೆ. ಈ ಜ್ಞಾನಯೋಗದ ಜೊತೆಗೆ ಭಕ್ತಿಯೋಗವನ್ನೂ ನಿನಗೆ ಬೋಧಿಸಿದ್ದೇನೆ. ಈ ಎರಡು ಯೋಗಗಳ ಗುರಿಯೂ ಭಗವಂತನೇ. 'ಜ್ಞಾನಯೋಗದಿಂದ ಆತ್ಮಲಾಭ, ಭಕ್ತಿಯೋಗದಿಂದ ಉಪಾಸ್ಯದೈವದ ಪ್ರತ್ಯಕ್ಷ; ಎರಡೂ ಒಂದೇ ಹೇಗಾದೀತು?' ಎಂದು ಶಂಕಿಸಬೇಡ. ಹಾಲು ಕಣ್ಣಿಗೆ ಬೆಳ್ಳಗೆ ಕಾಣಿಸುತ್ತದೆ, ನಾಲಗೆಗೆ ಮಧುರವಾಗಿದೆ, ಮೂಗಿಗೆ ಸುವಾಸನಾಯುಕ್ತವಾಗಿದೆ, ಮುಟ್ಟಿದರೆ ಬಿಸಿಯಾಗಿಯೋ ತಣ್ಣಗೋ ಇದೆ. ಬೇರೆ ಬೇರೆ ಇಂದ್ರಿಯಗಳು ಬೇರೆ ಬೇರೆಯ ಫಲಗಳನ್ನು ಪಡೆದರೂ ಹಾಲು ಹಾಲೆ. ಹಾಗೆಯೇ, ಬೇರೆ ಬೇರೆ ಶಾಸ್ತ್ರಗಳಲ್ಲಿ ಆಚರಣೆಯಿಂದ ಬೇರೆ ಬೇರೆಯಾಗಿ ಅನುಭವವಾದರೂ ದೇವರು ದೇವರೇ."

ಕಪಿಲಮುನಿಯ ಉಪದೇಶದಿಂದ ದೇವಹೂತಿಯ ಅಜ್ಞಾನ ಹಾರಿಹೋಯಿತು. ಇದಿರಿಗೆ ಕುಳಿತು ಜ್ಞಾನೋಪದೇಶಮಾಡಿದವನು ತನ್ನ ಮಗನಲ್ಲ, ಸಾಕ್ಷಾತ್ ಪರಮಾತ್ಮ ಎಂಬುದು ಆಕೆಗೆ ಗೋಚರವಾಯಿತು. ಆಕೆ ಆತನನ್ನು ಕುರಿತು 'ಹೇ ಭಗವಾನ್, ಚರಾಚರಾತ್ಮಕವಾದ ಬ್ರಹ್ಮಾಂಡವನ್ನೆಲ್ಲ ನಿನ್ನ ಹೊಟ್ಟೆಯಲ್ಲಿ ಇಟ್ಟುಕೊಂಡು, ನಿನ್ನ ಸಂಕಲ್ಪ ಮಾತ್ರದಿಂದಲೆ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುತ್ತಿರುವ ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿಬಂದೆಯಲ್ಲವೆ? ನಾನೆಂತಹ ಧನ್ಯಳು! ಲೋಕಕ್ಕೆ ತತ್ವಜ್ಞಾನವನ್ನು ಬೋಧಿಸಲೆಂದು ಉದಿಸಿಬಂದ ನಿನ್ನ ನಾಮಸ್ಮರಣೆಯೆ ಮಂಗಳಕರ. ನಿನ್ನನ್ನು ಕಣ್ಣಾರೆ ನೋಡುತ್ತಿರುವ ನಾನು ಪುಣ್ಯಶಾಲಿನಿ. ನಾನು ನಿನ್ನ ಪಾದಗಳಿಗೆ ಶರಣಾಗಿದ್ದೇನೆ. ನನ್ನನ್ನು ಉದ್ಧರಿಸು' ಎಂದಳು. ಆಗ ಕಪಿಲಮುನಿಯು ತುಟಿಗಳಿಂದ ಮಧುರವಾದ ಮುಗುಳ್ನಗೆಯನ್ನು ತುಳುಕಿಸುತ್ತಾ "ಅಮ್ಮ, ನಾನು ಬೋಧಿಸಿದ ಭಕ್ತಿಮಾರ್ಗವನ್ನು ಅನುಸರಿಸು. ಅದರಿಂದ ಬಹಳ ಸುಖವಾಗಿಯೇ ಮೋಕ್ಷವನ್ನು ಸಾಧಿಸಬಹುದು. ಅನೇಕ ಮಹಾತ್ಮರು ಈ ಮಾರ್ಗವನ್ನೆ ಅನುಸರಿಸಿ ಉದ್ಧಾರವಾಗಿದ್ದಾರೆ" ಎಂದು ಹೇಳಿದನು.

ತಾಯಿಗೆ ಉಪದೇಶವನ್ನು ನೀಡಿದ ಮೇಲೆ ಕಪಿಲಮಹಾಮುನಿಯು ಆಕೆಯಿಂದ ಬೀಳ್ಕೊಂಡು ಕಣ್ಮರೆಯಾಗಿ ಹೋದನು. ಅನಂತರ ದೇವಹೂತಿಯು ಕರ್ದಮಪ್ರಜಾಪತಿಯ ಆಶ್ರಮದಲ್ಲಿಯೇ ತಪೋನಿರತಳಾದಳು. ತಮ್ಮ ಭೋಗಕ್ಕಾಗಿ ಗಂಡನು ನಿರ್ಮಿಸಿದ್ದ ಭೋಗ ಸಾಮಗ್ರಿಗಳೆಲ್ಲವೂ ಅಚ್ಚಳಿಯದೆ ಉಳಿದಿದ್ದವಾದರೂ ಈಗ ಆಕೆಗೆ ಅವೆಲ್ಲವೂ ಹುಲ್ಲುಕಡ್ಡಿಗಿಂತಲೂ ಕಡೆಯಾಗಿ ಕಾಣಿಸಿದವು. ಕೇವಲ ಮಗನ ಅಗಲಿಕೆಯೊಂದು ಮಾತ್ರ ಕೆಲಕಾಲ ಆಕೆಗೆ ಒಂದು ದೊಡ್ಡ ಕೊರಗಾಗಿತ್ತು. ಕ್ರಮಕ್ರಮವಾಗಿ ಆಕೆಯ ಅಂತರಂಗ ತಿಳಿಯಾಯಿತು, ಶುದ್ಧವಾಯಿತು, ಧ್ಯಾನಮಗ್ನವಾಯಿತು. ಕನಸಿನಲ್ಲಿದ್ದವರು ಎಚ್ಚರಗೊಳ್ಳುವಂತೆ ಆಕೆಯ ಚೇತನ ಮಾಯೆಯ ಜಾಲದಿಂದ ಮುಕ್ತವಾಗಿ ಬ್ರಹ್ಮಜ್ಞಾನವನ್ನು ಪಡೆಯಿತು. ಯೋಗಮಾರ್ಗವನ್ನು ಹಿಡಿದು ಆಕೆ ಸಚ್ಚಿದಾನಂದನಲ್ಲಿ ಐಕ್ಯಳಾದಳು. ಆಕೆ ಯೋಗಸಿದ್ಧಿಯನ್ನು ಪಡೆದ ಸ್ಥಳ ಸಿದ್ಧಾಶ್ರಮವೆಂಬ ಹೆಸರಿನಿಂದ ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಯಿತು. ಜೀವವನ್ನು ತ್ಯಜಿಸಿದ ಆಕೆಯ ದೇಹವು ನದಿಯ ರೂಪದಲ್ಲಿ ಹರಿದು, ಸಿದ್ಧಗಣಗಳಿಂದ ಸೇವಿತವಾಯಿತು.

* * *

## ವರ್ಧಂತಿ ಉತ್ಸವ

॥ ಪ್ರಸೀದತು ಶ್ರೀ ವೀರಾಂಜನೇಯಃ ॥

**ಶ್ರೀ ವೀರಾಂಜನೇಯ ದೇವರ ಹಾಗೂ ಶ್ರೀ ಅನ್ನಪೂರ್ಣೇಶ್ವರಿ ದೇವಿಯ ವರ್ಧಂತಿ ಉತ್ಸವ**

**ಶ್ರೀ ವಿಶ್ವವೀರಾಂಜನೇಯ ಮಹಾಸಂಸ್ಥಾನಮ್, ಶ್ರೀ ಹೇಮಪುರ ಮಹಾಪೀಠಮ್, ಶ್ರೀಕ್ಷೇತ್ರ ಬಂಗಾರಮಕ್ಕಿ.**

ಭಕ್ತ ಮಹಾಶಯರೇ,

ಇದೇ ಬರುವ ಮನ್ಮಥ–ನಾಮ **ಸಂ॥ದ ಫಾಲ್ಗುಣ ಕೃಷ್ಣ ಪಂಚಮಿ ದಿನಾಂಕ 28–3–2016 ಸೋಮವಾರದಂದು** ಶ್ರೀಕ್ಷೇತ್ರ ಬಂಗಾರಮಕ್ಕಿಯ ಶ್ರೀ ವೀರಾಂಜನೇಯ ದೇವರು ಹಾಗೂ ಶ್ರೀ ಅನ್ನಪೂರ್ಣೇಶ್ವರಿ ದೇವಿಯ ವರ್ಧಂತಿ ಉತ್ಸವವನ್ನು ನಡೆಸಲಾಗುವುದು. ಕಾರಣ ಸಮಸ್ತ ಭಕ್ತ ಮಹಾ ಜನರು ಶ್ರದ್ಧಾ, ಭಕ್ತಿ ಭಾವದಿಂದ ತಮ್ಮ ಬಂಧು–ಬಾಂಧವರೊಡಗೂಡಿ ಆಗಮಿಸಿ ತನು, ಮನ, ಧನಗಳಿಂದ ಸಹಕರಿಸಿ ಶ್ರೀ ವೀರಾಂಜನೇಯ ದೇವರ ಹಾಗೂ ಶ್ರೀ ಅನ್ನಪೂರ್ಣೇಶ್ವರಿ ದೇವಿಯ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿ.



ಇನ್ಸುಲಿನ್ – ಎಫ್.ಬ್ಯಾಂಟಿಂಗ್

## ಕಾರ್ಯಕ್ರಮಗಳು

**ಬೆಳಿಗ್ಗೆ 6–00 ರಿಂದ :** ಭಜನಾ ಸಂಕೀರ್ತನ ಪ್ರಾರಂಭ, ಶತರುದ್ರ ಪಾರಾಯಣ, ಗಣಹವನ, ಶತರುದ್ರ ಹವನ, ಶ್ರೀ ದೇವರಿಗೆ ಫಲ ಪಂಚಾಮೃತ ಅಭಿಷೇಕ ಹಾಗೂ ಶ್ರೀ ಅನ್ನಪೂರ್ಣೇಶ್ವರಿ ದೇವಿಯ ಸನ್ನಿಧಿಯಲ್ಲಿ ದುರ್ಗಾಹವನ.

**ಮಧ್ಯಾಹ್ನ 11–00 ರಿಂದ :** ಪೂರ್ಣಾಹುತಿ, ಪಲ್ಲಕ್ಕಿ ಉತ್ಸವ, ಮಹಾ ಮಂಗಳಾರತಿ, ಅಷ್ಟಾವಧಾನ ಸೇವೆ, ತೀರ್ಥ ಪ್ರಸಾದ ವಿತರಣೆ, ಅನ್ನ ಸಂತರ್ಪಣೆ.

**ಸಾಯಂಕಾಲ 7–30 ರಿಂದ:** ಪಲ್ಲಕ್ಕಿ ಉತ್ಸವ, ಅಷ್ಟಾವಧಾನ ಸೇವೆ, ಮಹಾ ಮಂಗಳಾರತಿ.

**ರಾತ್ರಿ 10–30** ಗಂಟೆಯಿಂದ ಯಕ್ಷಗಾನ ಸೇವೆ, ಭಜನಾ ಸಂಕೀರ್ತನ ಮಂಗಳ

## ಭಕ್ತಾದಿಗಳು ಈ ಕೆಳಗಿನಂತೆ ಸೇವೆಯಲ್ಲಿ ಪಾಲ್ಗೊಳ್ಳಬಹುದು

| | | | |
|---|---|---|---|
| ಶತರುದ್ರ ಹವನ | ರೂ. 5001/– | ಸರ್ವ ಸೇವೆ | ರೂ. 1001/– |
| ಪಲ್ಲಕ್ಕಿ ಉತ್ಸವ | ರೂ. 3001/ | ಏಕಾದಶ ರುದ್ರಾಭಿಷೇಕ | ರೂ. 501/– |
| ಶತರುದ್ರ ಪಾರಾಯಣ | ರೂ. 3001/– | ಮಡಿಲಕ್ಕಿ ಸೇವೆ | ರೂ. 151/– |
| ಮಹಾಪೂಜೆ | ರೂ. 1501/– | ಫಲ ಪಂಚಾಮೃತ ಅಭಿಷೇಕ | ರೂ. 101/– |
| ಅನ್ನದಾನ ಸೇವೆ | ರೂ. 1001/– | ದುರ್ಗಾಹವನ | ರೂ. 3001/– |

**ವಿಶೇಷ ಸೂಚನೆ :**

1) ಈ ದಿನದಲ್ಲಿ ನಡೆಯುವ ಸೇವೆಗಳಲ್ಲಿ ಹಾಗೂ ಪ್ರತ್ಯೇಕವಾಗಿ ಪಾರಾಯಣ, ಹವನಗಳಲ್ಲಿ ಪಾಲ್ಗೊಳ್ಳುವ ಭಕ್ತಾದಿಗಳು ಮುಂಚಿತವಾಗಿ ಹೆಸರು ನೋಂದಾಯಿಸಿಕೊಳ್ಳಬೇಕು.
2) ಶ್ರೀ ದೇವರಿಗೆ ಅಕ್ಕಿ, ಕಾಯಿ, ಬೆಲ್ಲ, ತುಪ್ಪ, ಎಣ್ಣೆ, ವಸ್ತ್ರ, ದವಸ–ಧಾನ್ಯ ಇತ್ಯಾದಿ ನೀಡಬಯಸುವವರು ದೇವಸ್ಥಾನಕ್ಕೆ ತಂದು ಅರ್ಪಿಸಿ ರಶೀದಿ ಪಡೆಯಬೇಕು.
3) ಈ ಕಾರ್ಯಕ್ರಮದಲ್ಲಿ ಧನ ಸಹಾಯ ಮಾಡಲಿಚ್ಛಿಸುವವರು ಅಥವಾ ಸೇವೆಯಲ್ಲಿ ಪಾಲ್ಗೊಳ್ಳುವವರು ಎಮ್.ಓ/ಚೆಕ್/ಡಿ.ಡಿ. ಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

**ವಿಳಾಸ:**

1) **ಶ್ರೀ ವೀರಾಂಜನೇಯ ಧಾರ್ಮಿಕ ಹಾಗೂ ದತ್ತಿ ಸಂಸ್ಥೆ**(ರಿ).

   ಶ್ರೀಕ್ಷೇತ್ರ ಬಂಗಾರಮಕ್ಕಿ, ಸಿಂಡಿಕೇಟ್ ಬ್ಯಾಂಕ್, ಗೇರಸೊಪ್ಪಾ ಶಾಖೆ, IFSC CODE:SYNB0000339, ಶಾಖೆ ನಂ: 03392200015395.

2) **ಶ್ರೀ ವಿಶ್ವವೀರಾಂಜನೇಯ ಮಹಾಸಂಸ್ಥಾನಮ್,** ಶ್ರೀಕ್ಷೇತ್ರ ಬಂಗಾರಮಕ್ಕಿ, ಸಿಂಡಿಕೇಟ್ ಬ್ಯಾಂಕ್, ಗೇರಸೊಪ್ಪಾ ಶಾಖೆ, IFSC CODE:SYNB0000339, ಶಾಖೆ ನಂ: 03393070000811.

**ಸರ್ವರಿಗೂ ಆದರದ ಸ್ವಾಗತ**

ಅಧ್ಯಕ್ಷರು ಹಾಗೂ ಸರ್ವಸದಸ್ಯರು ಉತ್ಸವ ನಿರ್ವಹಣಾ ಸಮಿತಿ

ದೂರವಾಣಿ: 08387–268333, 268544, 268545

**E-mail :** marutiguruji@gmail.com, bangaramakki@gmail.com

Website: www.bangaramakki.org

****************************************************************************************************



ಇಂಟಲಿಜೆನ್ ಟೆಸ್ಟ್ – ಬಿನೆಟ್

# “ಶಿಕ್ಷಕ–ಪಾಲಕ–ವಿದ್ಯಾರ್ಥಿ” ಪುನಶ್ಚೇತನ ಶಿಬಿರ

ಶ್ರೀ ಮಾರುತಿ ರೆಸಿಡೆನ್ಸಿಯಲ್ ಸ್ಕೂಲ್ ಬಂಗಾರಮಕ್ಕಿ, ಗೇರಸೊಪ್ಪಾದಲ್ಲಿ ದಿನಾಂಕ 10–01–2016 ರಿಂದ 13–01–2016ರ ವರೆಗೆ ನಾಲ್ಕು ದಿನಗಳ ಕಾಲ “ಶಿಕ್ಷಕ–ಪಾಲಕ–ವಿದ್ಯಾರ್ಥಿ” ಪುನಶ್ಚೇತನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ದಿನಾಂಕ 10–01–2016 ರಂದು ಮುಂಜಾನೆ 11–ಗಂಟೆಗೆ ಆರಂಭವಾದ ಶಿಬಿರದಲ್ಲಿ ಪ್ರಾಂಶುಪಾಲರಾದ ಶ್ರೀಜಿ.ಟಿ.ಹೆಗಡೆ, ಮಾನವ ಸಂಪನ್ಮೂಲ ತರಬೇತಿದಾರರಾದ ಪ್ರೊ.ಜಿ.ಎನ್.ಶೇಷಾದ್ರಿ, ಪ್ರೊ.ಸಿದ್ದು ಯಾಪಲಪರವಿ ಹಾಗೂ ರಾಯಚೂರಿನ ಡಯಟ್‌ನ ಪ್ರಾಚಾರ್ಯರಾದ ಶ್ರೀ ಎಚ್. ಎಮ್. ಮಲ್ಲಿಕಾರ್ಜುನಸ್ವಾಮಿಯವರು, ಕಾರ್ಯದರ್ಶಿಗಳಾದ ಶ್ರೀಮತಿ ಅರ್ಪಿತಾ ಮಾರುತಿ ಗುರೂಜಿಯವರು ಉಪಸ್ಥಿತರಿದ್ದರು. ತಮ್ಮ ಪ್ರಾಸ್ತಾವಿಕ ನುಡಿಗಳ ಮೂಲಕ ಶ್ರೀ ಜಿ.ಟಿ.ಹೆಗಡೆಯವರು ಸ್ವಾಗತಿಸಿದರೆ, ಪ್ರೊ. ಸಿದ್ದುರವರು, ಪ್ರೊ.ಜಿ.ಎಸ್.ಶೇಷಾದ್ರಿಯವರ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟರು. ನಂತರ ಪ್ರೊ.ಜಿ.ಎಸ್.ಶೇಷಾದ್ರಿಯವರು ಶಿಕ್ಷಕರು, ಪಾಲಕರು, ವಿದ್ಯಾರ್ಥಿಗಳು ತಮ್ಮ ತಮ್ಮ ಜವಾಬ್ದಾರಿಯನ್ನರಿತು ಕರ್ತವ್ಯ ನಿರ್ವಹಿಸಿ ಯಶಸ್ಸು ಸಾಧಿಸಬೇಕೆಂದು ವಿಸ್ತøತವಾಗಿ ತಿಳಿಸಿದರು. ಮಧ್ಯಾಹ್ನ ಶಿಕ್ಷಕರಿಗಾಗಿ ನಡೆದ ಶಿಬಿರದಲ್ಲಿ ಶಿಕ್ಷಕರು ತಮ್ಮ ವೃತ್ತಿಯನ್ನು ಪ್ರೀತಿ ಮತ್ತು ಗೌರವದಿಂದ ಕಾಣುವುದರೊಂದಿಗೆ ಪ್ರತಿ ದಿನದ ಕಾರ್ಯಗಳ ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ಪ್ರೊ.ಜಿ.ಎಸ್.ಶೇಷಾದ್ರಿಯವರು ವಿವರಿಸಿದರು.

4 ಗಂಟೆಗೆ ಆರಂಭವಾದ ಶಿಬಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಧರ್ಮಾಧಿಕಾರಿಗಳಾದ ಪ.ಪೂ. ಶ್ರೀ ಮಾರುತಿ ಗುರೂಜಿಯವರು ವಹಿಸಿದ್ದರು. ವೇದಿಕೆಯಲ್ಲಿ ಪ್ರೊ.ಜಿ.ಎಸ್.ಶೇಷಾದ್ರಿ, ಪ್ರೊ.ಸಿದ್ದು ಯಾಪಲಪರವಿ, ಶ್ರೀಎಚ್. ಎಮ್. ಮಲ್ಲಿಕಾರ್ಜುನ ಸ್ವಾಮಿ ಹಾಗೂ ಶ್ರೀ ಜಿ.ಟಿ.ಹೆಗಡೆಯವರು ಉಪಸ್ಥಿತರಿದ್ದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿದ ಪ.ಪೂ. ಶ್ರೀ ಗುರೂಜಿಯವರು ಮಕ್ಕಳು ಮಣ್ಣಿನ ಮುದ್ದೆಯಂತಿದ್ದು, ಅದಕ್ಕೆ ಆಕಾರ, ಸಂಸ್ಕಾರ ನೀಡುವ ಕೆಲಸ ಶಿಕ್ಷಕರದ್ದಾಗಿದೆ. ಇದರೊಂದಿಗೆ ಪಾಲಕರೂ ಕೂಡ ಕೈಜೋಡಿಸಬೇಕಿದೆ ಎಂದು ಆಶೀರ್ವಚನಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ಪ್ರೊ.ಜಿ.ಎಸ್.ಶೇಷಾದ್ರಿಯವರು ಹಾಗೂ ಶ್ರೀ ಎಚ್.ಎಂ.ಮಲ್ಲಿಕಾರ್ಜುನ ಸ್ವಾಮಿಯವರು ಶಿಬಿರದ ಸಂಪೂರ್ಣ ಪ್ರಯೋಜನ ಪಡೆದುಕೊಳ್ಳುವಂತೆ ಕರೆ ನೀಡಿದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಮಸ್ತರನ್ನು ಶ್ರೀ ಜಿ.ಟಿ.ಹೆಗಡೆಯವರು ಸ್ವಾಗತಿಸಿದರೆ, ಸಹಶಿಕ್ಷಕರಾದ ಕು॥ನೆಲ್ಸನ್ ಗೊನ್ಸಾಲೀಸ್‌ರವರು ಎಲ್ಲರನ್ನು ವಂದಿಸಿದರು.

ದಿನಾಂಕ 11–01–2015ರಂದು ಮುಂಜಾನೆ ರಾಣೆಬೆನ್ನೂರಿನ ಪ್ರೊ.ಬಾಬುಜಾನ ನಂದ್ಯಾಲ ಧನಾತ್ಮಕ ಮನೋಧೋರಣೆ, ಸಂಸ್ಕಾರ, ಶಿಕ್ಷಕನ ಗುಣಗಳ ಕುರಿತಾಗಿ ಶಿಕ್ಷಕರಿಗೆ ತರಬೇತಿ ನೀಡಿದರು. ನಂತರ ಪ್ರೊ.ಭಾರ್ಗವ.ಎಚ್.ಕೆ.ರವರು ಮಾನಸಿಕ ಸಾಮರ್ಥ್ಯದ ವೃದ್ಧಿಗೆ ಸಹಕಾರಿಯಾಗುವ ಗಣಿತದ ಲೆಕ್ಕ ಬಿಡಿಸುವ ಪರಿಯನ್ನು ತಿಳಿಸಿದರು. ಮಧ್ಯಾಹ್ನದ ಅವಧಿಯಲ್ಲಿ ಪ್ರೊ. ಜಯರಾಮ್ ರಮೇಶ್‌ರವರು ಮಕ್ಕಳೊಂದಿಗೆ ಶಿಕ್ಷಕರು ಎದುರಿಸುವ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವುದನ್ನು ವಿವರಿಸಿದರು. ಇದೇ ದಿನ ಮುಂಜಾನೆಯ ಅವಧಿಯಲ್ಲಿ ಪ್ರೊ.ಜಯರಾಮ್ ರಮೇಶ್‌ರವರು ಮಕ್ಕಳಿಗೆ ಶಿಸ್ತಿನ ಕುರಿತಾಗಿ ಹಾಗೂ ಶ್ರೀ ಬಾಬುಜಾನ ನಂದ್ಯಾಲ್‌ರವರು ಹದಿಹರಯದ ಪ್ರಾಮುಖ್ಯತೆಯನ್ನು ವಿವರಿಸಿದರೆ, ಮಧ್ಯಾಹ್ನದ ಅವಧಿಯಲ್ಲಿ ಶ್ರೀ.ಎಚ್. ಎಂ.ಮಲ್ಲಿಕಾರ್ಜುನ ಸ್ವಾಮಿಯವರು ಮಕ್ಕಳ ವರ್ತನೆಗಳ ಕುರಿತಾಗಿ ಹಾಗೂ ಪ್ರೊ.ಭಾರ್ಗವ ಎಚ್.ಕೆ.ರವರು ವೇದಗಣಿತದ ಕುರಿತಾಗಿ ಮಕ್ಕಳಿಗೆ ಮಾಹಿತಿ ನೀಡಿದರು.

ದಿನಾಂಕ 12–01–2016ರಂದು ಮುಂಜಾನೆ ಸಂಪನ್ಮೂಲ ವ್ಯಕ್ತಿಗಳಾದ ಕುಮಾರಿ ಆರಾಭಿ ಮಧುಸೂಧನ್‌ರವರು ಮಕ್ಕಳ ಬುದ್ಧಿಶಕ್ತಿ, ಅದರ ವಿಧಗಳು ಹಾಗೂ ನ್ಯೂನ್ಯತೆಗಳ ಕುರಿತು ಶಿಕ್ಷಕರಿಗೆ ಮಾಹಿತಿ ನೀಡಿದರೆ, ಶ್ರೀ.ಜಿ.ಟಿ.ಹೆಗಡೆಯವರು ಮಕ್ಕಳು ಹೇಗೆ ವಿದ್ಯಾಭ್ಯಾಸ ಮಾಡಬೇಕೆಂದು ಮಕ್ಕಳಿಗೆ ತಿಳಿಸಿದರು. ಮಧ್ಯಾಹ್ನ ಶ್ರೀ ರಾಮಚಂದ್ರಸ್ವಾಮಿ ಕಪಿಲಾಶ್ರಮ, ಇವರು ಧರ್ಮದ ಕುರಿತಾಗಿ ಮಕ್ಕಳಿಗೆ ತಿಳಿಸಿದರೆ, ಪ್ರೊ.ಸಿದ್ದುರವರು ಶಿಕ್ಷಕರ ಜವಾಬ್ದಾರಿಗಳ ಕುರಿತು ಶಿಕ್ಷಕರಿಗೆ ವಿವರಿಸಿದರು.

ದಿನಾಂಕ 13–01–2016ರಂದು ಶ್ರೀ ರಮೇಶ್ ಬಲ್ಲಿದರವರು, ಅನಕ್ಷರಸ್ಥರಾಗಿದ್ದರೂ ತಾನು ಇಂಗ್ಲೀಷ್ ಕಲಿತ ಬಗೆಯನ್ನು ಸಮಸ್ತರಿಗೆ ವಿವರಿಸಿದರು. ನಂತರ ನಡೆದ ಸಮಾರೋಪ ಸಮಾರಂಭದ ದಿವ್ಯಸಾನಿಧ್ಯವನ್ನು ಪ.ಪೂ. ಶ್ರೀಗುರೂಜಿಯವರು ವಹಿಸಿದ್ದು, ವಿಧಾನಪರಿಷತ್ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು, ಶೈಕ್ಷಣಿಕ ನಿರ್ದೇಶಕರಾದ ಶ್ರೀ ಎಸ್.ಜೆ.ಕೈರನ್, ಶ್ರೀ ಸಿದ್ದು ಯಾಪಲಪರವಿ, ಪ್ರೊ.ಜಯರಾಮ್, ಶ್ರೀ ರಮೇಶ ಬಲ್ಲಿದ, ಶ್ರೀ ಜಿ.ಟಿ.ಹೆಗಡೆಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ಎಸ್.ಜೆ.ಕೈರನ್‌ರವರು ಪ್ರತಿಯೊಬ್ಬನ ಜೀವನದಲ್ಲಿ ಮಾನವೀಯಮೌಲ್ಯಗಳು ಮಹತ್ವದ್ದಾಗಿವೆ ಎಂದು ಮಾತನಾಡಿದರೆ, ಶ್ರೀ ಬಸವರಾಜ ಹೊರಟ್ಟಿಯವರು ಸಾಮಾನ್ಯಜ್ಞಾನ, ಹೃದಯವಂತಿಕೆಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕೆಂದು ತಿಳಿಸಿದರು. ಪುನಶ್ಚೇತನ ಶಿಬಿರವು ಎಲ್ಲರಲ್ಲಿ ಚೈತನ್ಯ ತುಂಬಬೇಕು ಹಾಗೂ ಶಿಕ್ಷಕರು ಮಕ್ಕಳ ಬದುಕಿನ ಗುರಿಕಾರರಾದರೆ, ಪಾಲಕರು ಈ ಬೆಳವಣಿಗೆಯ ಸಮಭಾಗೀದಾರರಾಗಬೇಕೆಂದು ಶ್ರೀಗುರೂಜಿಯವರು ತಮ್ಮ ಆಶೀರ್ವಚನ ತಿಳಿಸಿದರು.

ಶ್ರೀ ಜಿ.ಟಿ.ಹೆಗಡೆಯವರು ಸ್ವಾಗತಿಸಿದರೆ, ಕು॥ರೇಷ್ಮಾರವರು ವಂದಿಸಿದರು. ಕು॥ಸಾಧನಾರವರು ವರದಿ ವಾಚನವನ್ನು ಹಾಗೂ ಕು॥ಚೇತನಾರವರು ಅನಿಸಿಕೆಗಳನ್ನು ಮತ್ತು ಕು॥ಗೌರಿ ಹಾಗೂ ಶ್ರೀಮತಿ ಶ್ವೇತಾರವರು ಕಾರ್ಯಕ್ರಮವನ್ನು ನಿರ್ವಹಿಸಿದರು.

ಸಭಾಕಾರ್ಯಕ್ರಮದ ನಂತರ ಮಧ್ಯಾಹ್ನ ಶ್ರೀ ಎಸ್.ಜೆ.ಕೈರನ್‌ರವರು ಶಿಕ್ಷಕರ ಗುಣಗಳು ಎಂಬ ವಿಷಯದ ಕುರಿತಾಗಿ ಶಿಕ್ಷಕರಿಗೆ ಸಮಗ್ರ ಮಾಹಿತಿ ನೀಡುವ ಮೂಲಕ ನಾಲ್ಕು ದಿನಗಳ ಪುನಶ್ಚೇತನ ಶಿಬಿರ ಯಶಸ್ವಿಯಾಗಿ ಸಂಪೂರ್ಣಗೊಂಡಿತು.

*****************************************************************************

# 2015–16ನೇ ಸಾಲಿನ ವಾರ್ಷಿಕ ಕ್ರೀಡಾಕೂಟದ ವರದಿ

ಶ್ರೀ ಮಾರುತಿ ರೆಸಿಡೆನ್ಸಿಯಲ್ ಸ್ಕೂಲ್, ಬಂಗಾರಮಕ್ಕಿಯಲ್ಲಿ ವಾರ್ಷಿಕ ಕ್ರೀಡಾಕೂಟ ದಿನಾಂಕ 7–1–2016 ರಂದು ನಡೆಯಿತು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರು ಹಾಗೂ ಶ್ರೀಕ್ಷೇತ್ರದ ಧರ್ಮಾಧಿಕಾರಿಗಳಾದ ಪ.ಪೂ. ಶ್ರೀ ಮಾರುತಿ ಗುರೂಜಿಯವರು ಶಾಲೆಯ ಶೈಕ್ಷಣಿಕ ನಿರ್ದೇಶಕರಾದ ಶ್ರೀ ಎಸ್.ಜೆ.ಕೈರನ್, ಮುಖ್ಯ ಅತಿಥಿಗಳಾದ ಶ್ರೀ ವಸಂತ ರೆಡ್ಡಿ, ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ಅರ್ಪಿತಾ ಮಾರುತಿ ಗುರೂಜಿ, ವಲಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಪರಮೇಶ್ ಗುನಾಗಾ, ಶ್ರೀ ಎಂ.ಜಿ.ಹೆಗಡೆಯವರು ಹಾಗೂ ಶಾಲಾ ಪ್ರಾಂಶುಪಾಲರಾದ ಶ್ರೀ ಜಿ.ಟಿ.ಹೆಗಡೆಯವರು ಉಪಸ್ಥಿತರಿದ್ದರು.

ಶಾಲೆಯ ಪುಟಾಣಿ ಮಕ್ಕಳು ಪೂಜ್ಯ ಶ್ರೀಗುರೂಜಿಯವರನ್ನು ಹಾಗೂ ಅತಿಥಿಗಳನ್ನು ಸ್ವಾಗತಿಸಿದರು. ನಂತರ ಶ್ರೀಗುರೂಜಿಯವರು ಒಲಂಪಿಕ್ ಧ್ವಜಾರೋಹಣ ನೆರವೇರಿಸಿದರು. ಅತಿಥಿಗಳಾದ ಶ್ರೀ ವಸಂತ ರೆಡ್ಡಿಯವರು ಒಲಂಪಿಕ್ ಜ್ಯೋತಿ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶಾಲೆಯ ಎಲ್ಲ ಮಕ್ಕಳು ಪಥಸಂಚಲನದ ಮೂಲಕ ಗಣ್ಯರಿಗೆ ವಂದಿಸಿದರು. ನೇತಾಜಿ, ಶಿವಾಜಿ, ಲಕ್ಷ್ಮೀಬಾಯಿ, ಚೆನ್ನಮ್ಮ ಮಂದಿರದ ವಿದ್ಯಾರ್ಥಿಗಳು ಅತ್ಯಂತ ಶಿಸ್ತಿನಿಂದ ಪಥಸಂಚಲನದ ಸೊಬಗನ್ನು ಹೆಚ್ಚಿಸಿದರು. ಪಥಸಂಚಲನದ ತರುವಾಯ ಕು॥ಮನೀಷ್ ಹೊತ್ತು ತಂದ ಕ್ರೀಡಾಜ್ಯೋತಿಯನ್ನು ಬೆಳಗಿಸಿದರು. ಕ್ರೀಡಾಮಂತ್ರಿ ಕು॥ಅಬ್ದುಲ್ ಕೋಳ್ಕರ್ ಪ್ರತಿಜ್ಞಾ ವಿಧಿಯನ್ನು ವಾಚಿಸಿದರು ಹಾಗೂ ಎಲ್ಲಾ ಮಕ್ಕಳು ಪ್ರತಿಜ್ಞೆ ಸ್ವೀಕರಿಸಿದರು.

ನಂತರದ ಕಾರ್ಯಕ್ರಮ ಸಭಾಭವನದಲ್ಲಿ ನಡೆಯಿತು. ಪ್ರಾಂಶುಪಾಲರಾದ ಶ್ರೀ ಜಿ.ಟಿ.ಹೆಗಡೆಯವರು ಸರ್ವರನ್ನೂ ಸ್ವಾಗತಿಸಿದರು. ಪ.ಪೂ. ಶ್ರೀ ಮಾರುತಿ ಗುರೂಜಿಯವರು ಶಿಕ್ಷಣದ ಅವಿಭಾಜ್ಯ ಅಂಗ ಕ್ರೀಡೆಯಾಗಿದ್ದು, ಸೋಲೇ ಗೆಲುವಿನ ಸೋಪಾನ, ಪರಿಶ್ರಮದೊಂದಿಗೆ ಗುರಿ ತಲುಪುವ ಒಳ್ಳೆಯ ಮನಸ್ಸಿದರೆ ಗೆಲುವು ಖಂಡಿತ ಎಂದು ಆಶೀರ್ವದಿಸಿ ತಮ್ಮ ಶಾಲೆಯ ಮಕ್ಕಳ ಪಥಸಂಚಲನದ ಕುರಿತು ಶ್ಲಾಘನೆ ವ್ಯಕ್ತಪಡಿಸಿದರು.

ಸಂಸ್ಥೆಯ ಶೈಕ್ಷಣಿಕ ನಿರ್ದೇಶಕರಾದ ಶ್ರೀ.ಎಸ್.ಜೆ.ಕೈರನ್‌ರವರು ಸಮಾಜದಲ್ಲಿ ಒಳ್ಳೆಯವರಾಗಬೇಕಾದರೆ ಮೊದಲು ನಾವು ಸಮಾಜಕ್ಕೆ ಒಳ್ಳೆಯದನ್ನು ಮಾಡಬೇಕು, ಹೀಗಾಗಿ ಪರಿಶ್ರಮ ಮತ್ತು ಪ್ರಾಮಾಣಿಕತೆ ಪ್ರತಿಯೊಬ್ಬರಲ್ಲೂ ಅವಶ್ಯವಾಗಿರಬೇಕು ಎಂದರು. ಶಾಲೆಯ ಶಿಸ್ತಿನ ಕುರಿತಾಗಿ ಮೆಚ್ಚುಗೆ ವ್ಯಕ್ತಪಡಿಸುತ್ತ ಶ್ರೀ ವಸಂತ ರೆಡ್ಡಿಯವರು ಪ್ರತಿಯೊಬ್ಬರೂ ಕೂಡ ಸ್ಪರ್ಧಾ ಮನೋಭಾವನೆ ಹೊಂದಿ ಆತ್ಮಸ್ಥೈರ್ಯದೊಂದಿಗೆ ಯಶಸ್ಸುಗಳಿಸುವಂತಾಗಲಿ ಎಂದು ಶುಭಕೋರಿದರು.

ಶಾಲೆಯ ದೈಹಿಕ ಶಿಕ್ಷಕರಾದ ಶ್ರೀ ಜಯಂತ ಗೌಡ ಇವರು ವಂದನಾರ್ಪಣೆ ಮಾಡಿದರು. ಸಹಶಿಕ್ಷಕರಾದ ಕು॥ನೆಲ್ಸನ್ ಗೊನ್ಸಾಲ್ವೀಸ್‌ರವರು ಪಥಸಂಚಲನದ ನಿರ್ವಹಣೆಯನ್ನೂ ಹಾಗೂ ಕು॥ಗೌರಿ ಮತ್ತು ಕು॥ಚೇತನಾರವರು ಸಭಾಕಾರ್ಯಕ್ರಮವನ್ನು ನಿರ್ವಹಿಸಿದರು. ಸಭಾಕಾರ್ಯಕ್ರಮದ ನಂತರ ಮಕ್ಕಳಿಗೆ ಹಾಗೂ ಪಾಲಕರಿಗೆ ಏರ್ಪಡಿಸಲಾದ ಸ್ಪರ್ಧೆಗಳು ಯಶಸ್ವಿಯಾಗಿ ನಡೆದವು.

********************************************************************************************************

ಸುಂದರಕಾಂಡದ ಸೌಂದರ್ಯ...

# ಶ್ರೀ ವೀರಾಂಜನೇಯ

**ಹಿಂದಿನ ಸಂಚಿಕೆಯಿಂದ...**

**–ಲೇ: ಶ್ರೀರಾಮಕೃಷ್ಣ.ಎನ್.ಹೆಗಡೆ.**
**ಪಾಠಶಾಲಾ ಶಿಕ್ಷಕರು, ಬಂಗಾರಮಕ್ಕಿ.**

**ಜಯತ್ಯತಿ ಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ ।**
**ರಾಜಾ ಜಯತಿ ಸುಗ್ರೀವೋ ರಾಘವೇಣಾಭಿ ಪಾಲಿತಃ ॥**

ಬಹಳ ಸಮಯದಿಂದ ಜಯವನ್ನು ನಿರೀಕ್ಷಿಸುತ್ತಿದ್ದ ಮಾರುತಿಯು ಬೇಗನೆ ವಿಜಯೋತ್ಸವ ಆಚರಿಸುವ ಮನಸ್ಸನ್ನು ಮಾಡುತ್ತಾನೆ. ಅದಕ್ಕನುಗುಣವಾಗಿ ಗರುಡನು ಮಹಾಸರ್ಪವನ್ನು ಹಿಡಿಯುವಂತೆ ಅಕ್ಷಕುಮಾರನನ್ನು ಹಿಡಿದುಕೊಂಡಿರುವ ಹನುಮಂತನು ಅವನ ಮೇಲೆ ಸಂಪೂರ್ಣ ಹಿಡಿತ ಸಾಧಿಸುತ್ತಾನೆ. ಇದನ್ನು ಕವಿಯು

**"ಸ ತಂ ಸಮಾವಿಧ್ಯ ಸಹಸ್ರಶಃ ಕಪಿಃ**
**ಮಹೋರಗಂ ಗೃಹ್ಯ ಇವಾಂಡಜೇಶ್ವರಃ ।**
**ಮುಮೋಚ ವೇಗಾತ್ ಪಿತೃತುಲ್ಯ ವಿಕ್ರಮೋ**
**ಕ್ರಮೇಣ ಜಗ್ರಾಹ ಸ ಪಾದಯೋರ್ದೃಢಮ್"** ಎಂದು

ವರ್ಣಿಸಿದ್ದಾನೆ. ತನ್ನ ತಂದೆಯಾದ ವಾಯುದೇವನ ಹಾಗೆಯೇ ಆಂಜನೇಯನು ಅತ್ಯಂತ ಬಲಶಾಲಿಯಾಗಿದ್ದಾನೆ. ಹಾಗಾಗಿ ಅಕ್ಷಕುಮಾರನನ್ನು ಹಿಡಿದು ಸಾವಿರಾರು ಸಲ ತಿರುಗಿಸಿ ರಭಸವಾಗಿ ನೆಲಕ್ಕೆ ಅಪ್ಪಳಿಸುತ್ತಾನೆ. ಹೀಗೆ ಮಾಡಿದ ಸಾಹಸಕಾರ್ಯದಿಂದಾಗಿ ಅಕ್ಷಕುಮಾರನ ತೋಳು, ತೊಡೆ, ಸೊಂಟ, ಇವುಗಳೆಲ್ಲ ವಿಕಾರವನ್ನು ಹೊಂದಿ ಶರೀರದ ಎಲ್ಲಾ ಕಡೆಗಳಿಂದಲೂ ರಕ್ತವು ಸುರಿಯುವುದಕ್ಕೆ ಪ್ರಾರಂಭಿಸಿತು. ಶರೀರದಿಂದ ಉಂಟಾದ ಅತಿಯಾದ ರಕ್ತಸ್ರಾವ ಹಾಗೂ ನೋವಿನಿಂದ ನರಳಿದ ಅಕ್ಷಕುಮಾರನು



ಜೆಟ್ ಸಂಚಲನೆ – ಫ್ರ್ಯಾಂಕ್ ವಿಟ್ಲ್

ನೆಲಕ್ಕೆ ಕುಸಿದು ಬಿದ್ದನು. ಮತ್ತೆ ಯುದ್ಧ ಮಾಡುವ ಕಾರ್ಯವಿದ್ದರೂ ಏಳುವುದಕ್ಕೆ ಅಸಾಧ್ಯನಾದ ಅಕ್ಷಕುಮಾರನ ಸ್ಥಿತಿಯು ಅತ್ಯಂತ ಶೋಚನೀಯವಾಯಿತು. ಆಘಾತದಿಂದ ಮತ್ತೆ ಚೇತರಿಸಿಕೊಳ್ಳಲಾಗದ ಆ ಅಕ್ಷಕುಮಾರನು ಮರಣ ಹೊಂದಿದನು.

ಹನುಮಂತನ ಈ ಕಾರ್ಯವು ದೇವತೆಗಳಿಗೂ ತೃಪ್ತಿಯನ್ನು ತಂದಿತೆಂದು ವಾಲ್ಮೀಕಿಮುನಿಗಳು ಹೀಗೆ ಚಿತ್ರಿಸಿದ್ದಾರೆ.

**ಮಹಾಕಪಿರ್ಭೂಮಿತಲೇ ನಿಪೀಡ್ಯ ತಂ**
**ಚಕಾರ ರಕ್ಷೋಧಿಪತೇರ್ಮಹದ್ಭಯಂ ।**
**ಮಹರ್ಷಿಭಿಶ್ಚಕ್ರಚರೈರ್ಮಹಾವ್ರತೈಃ**
**ಸಮೇತ್ಯ ಭೂತೈಶ್ಚ ಸಯಕ್ಷ ಪನ್ನಗೈಃ ।**
**ಸುರೈಶ್ಚ ಸೇಂದ್ರೈರ್ಭೃಶಜಾತ ವಿಸ್ಮಯೈ**
**ಹರ್ತೇ ಕುಮಾರೇ ಸ ಕಪಿರ್ನಿರೀಕ್ಷಿತಃ**

ಈ ಯುದ್ಧವನ್ನು ಅಂತರಿಕ್ಷದಲ್ಲಿಯೇ ಇದ್ದು ಬಹು ದೇವತೆಗಳು ನಿರೀಕ್ಷಿಸಿದರು. ಮಹರ್ಷಿಗಳೂ, ಯಕ್ಷರೂ, ನಾಗದೇವತೆಗಳೂ, ಸ್ವತಃ ದೇವೇಂದ್ರನೇ ಬಂದು ಅಭಿಮಾನದಿಂದ ನೋಡಿದನೆಂದು ಹೇಳಿದ್ದಾರೆ. ಇದರಿಂದ ಭೂಲೋಕಕ್ಕೆ ಅಲ್ಲದೇ, ದೇವಲೋಕಕ್ಕೂ ಕ್ಷೇಮವಾಯಿತೆಂದು ತಿಳಿಯುತ್ತದೆ. ಮತ್ತು ಮಾರುತಿಯ ಕೀರುತಿಯು ಭೂಲೋಕದಲ್ಲಿ ಅಲ್ಲದೇ ದೇವಲೋಕದಲ್ಲಿಯೂ ಮೆಚ್ಚುಗೆ ಪಡೆಯಿತೆಂಬುದನ್ನೂ ತಿಳಿಯಬಹುದು.

ಸ್ವಾಮಿಕಾರ್ಯ ಪ್ರವೃತ್ತನಾದ ಮಾರುತಿಯು ನಡೆಸಿದ ಶ್ರೇಷ್ಠ ಯುದ್ಧಗಳಲ್ಲಿ ಇದು ಮಹತ್ವವನ್ನು ಪಡೆದಿದೆ. ಇಂದ್ರತನಯನಾದ ಜಯಂತನ ಕಾಂತಿಗೆ ಸದೃಶನಾದ ಅಕ್ಷಕುಮಾರನನ್ನು ಸಂಹಾರ ಮಾಡುವುದು ಸಾಮಾನ್ಯ ಕಾರ್ಯವಾಗಿರಲಿಲ್ಲ. ಈ ಕಾರ್ಯದಲ್ಲಿ ಯಶಸ್ವಿಯಾದ ಆಂಜನೇಯನು ಲಂಕೆಯಲ್ಲಿ ವೀರಾಂಜನೇಯನಾಗಿ ಜಯವನ್ನು ಪಡೆದನೆನ್ನುವ ವಾಸ್ತವಿಕವಾದ ಅಂಶವು ತಿಳಿಯುತ್ತದೆ. ಇವನ ಸಂಹಾರದ ಬಳಿಕ ಸ್ವಲ್ಪವೂ ಆಯಾಸ ಹೊಂದದ ಆಂಜನೇಯನು ಮತ್ತೆ ಬರುವ ವೀರರಾಕ್ಷಸ ಯಾರು? ಎನ್ನುವುದನ್ನು ನಿರೀಕ್ಷಿಸುತ್ತಾ ಇರುತ್ತಾನೆ. ಇದನ್ನು ಕವಿಯು ಸುಂದರವಾಗಿ ತನ್ನ ಕಾವ್ಯದಲ್ಲಿ ಹೀಗೆ ಚಿತ್ರಿಸುತ್ತಾನೆ

**"ತದೇವ ವೀರೋಽಭಿಜಗಾಮ ತೋರಣಂ**
**ಕೃತಕ್ಷಣಃ ಕಾಲ ಇವ ಪ್ರಜಾಕ್ಷಯೇ"**

ಅಂದರೆ ಯಮನು ಸಮಯವನ್ನು ನಿರೀಕ್ಷಿಸುತ್ತಾ ಕಾದು ಕುಳಿತಿರುವಂತೆ ಮಾರುತಿಯೂ ಕೂಡ ರಾಕ್ಷಸರ ಪಾಲಿಗೆ ಯಮನ ಸದೃಶನಾಗಿ ಹೊರಬಾಗಿಲಿಗೆ ಬಂದು ಮತ್ತೆ ಯಾರು ಬರುವರು? ಎಂದು ನಿರೀಕ್ಷಿಸುತ್ತಾ ಕಾದು ಕುಳಿತನು ಎಂದು ಸಂದರ್ಭೋಚಿತವಾಗಿ ವರ್ಣಿಸಿದ್ದಾನೆ.

**–ಮುಂದುವರಿಯುವುದು.**

***********************************************************************************************

# "ಸಂಸ್ಕೃತಿ ಕುಂಭ ಮಲೆನಾಡ ಉತ್ಸವ–2016"

**ಶ್ರೀಕ್ಷೇತ್ರ ಬಂಗಾರಮಕ್ಕಿಯ ಶ್ರೀ ವೀರಾಂಜನೇಯನ ಪ್ರೇರಣೆಯಿಂದ ಇಲ್ಲಿನ ಧರ್ಮಾಧಿಕಾರಿ ಪರಮ ಪೂಜ್ಯ ಶ್ರೀ ಮಾರುತಿ ಗುರೂಜಿಯವರ ಸಂಕಲ್ಪದಂತೆ "ಸಂಸ್ಕೃತಿ ಕುಂಭ"**ವೆಂಬ ಅಭಿದಾನದೊಂದಿಗೆ ಆಯೋಜಿಸಲ್ಪಡಲಿರುವ **"ಸಂಸ್ಕೃತಿ ಕುಂಭ ಮಲೆನಾಡ ಉತ್ಸವ–2016"** ಒಂದು ಜಾಗತಿಕ ವ್ಯಾಪ್ತಿಯ ಸಂಸ್ಕೃತಿ ಸಮ್ಮೇಲನ ಅಥವಾ ಸಂಸ್ಕೃತಿ ಮಹೋತ್ಸವದ ರೂಪದಲ್ಲಿರುತ್ತದೆ. ಅದು ನಮ್ಮ ದೇಶ ಮತ್ತು ಜಗತ್ತಿನ ವಿಭಿನ್ನ ಪ್ರದೇಶಗಳಿಂದ ವಿವಿಧ ಜನಸಮುದಾಯಗಳಿಗೆ ಸೇರಿದ ಜನರು ರಾಮನವಮಿ ಏಪ್ರಿಲ್15–2016ಯಿಂದ ಹನುಮ ಜಯಂತಿಯ ಏಪ್ರಿಲ್ 22–2016ವರೆಗೆ ಪವಿತ್ರ ಶರಾವತಿಯ ತಟದಲ್ಲಿ ಬಂಗಾರಮಕ್ಕಿಯ ಶ್ರೀ ವೀರಾಂಜನೇಯ ಕ್ಷೇತ್ರದಲ್ಲಿ ಬಂದು ಸೇರಿ ಒಂದಾಗಿ ಆಚರಿಸುವ ಮಾನವ ಜಾತಿಯ ಬಹುಲತೆಯ ಸಂಸ್ಕೃತಿಯ ಸಮಗ್ರ ಉತ್ಸವವಾಗಿ ಆಚರಿಸಲ್ಪಡುತ್ತದೆ. ನಮ್ಮ ದೇಶದ ಉದ್ದಗಲಗಳಿಂದ ಬರುವ ವಿವಿಧ ಸಾಂಸ್ಕೃತಿಕ ತಂಡಗಳಲ್ಲದೆ ಪ್ರಪಂಚದ ವಿಭಿನ್ನ ಸಾಂಸ್ಕೃತಿಕ ಪ್ರದೇಶಗಳಿಗೆ ಸೇರಿದ ದೇಶಗಳ ಜನರು ತಮ್ಮ ತಮ್ಮ ಕಲಾತಂಡಗಳೊಂದಿಗೆ ತಮ್ಮೂರ, ತಮ್ಮ ಜನರ ಸಾಂಸ್ಕೃತಿಕ ರಾಯಭಾರಿಗಳಾಗಿ ಇಲ್ಲಿ ಬಂದು ಭಾರತ ಮತ್ತು ಜಗತ್ತಿನ ಇತಿಹಾಸದಲ್ಲಿ ಪ್ರಥಮವಾಗಿ ನಡೆಯುವ **'ಸಂಸ್ಕೃತಿ ಕುಂಭ'**ದಲ್ಲಿ ಭಾಗಿಯಾಗಿ ಜೊತೆ ಜೊತೆಯಾಗಿ ಒಟ್ಟಾಗಿ ವಾಸ ಮಾಡಿ ತಮ್ಮ ತಮ್ಮ ಕಲೆ, ಕಲಾಕೃತಿ ಮತ್ತು ಕೌಶಲ್ಯಗಳ ಪ್ರದರ್ಶನಗಳ ಮಾಧ್ಯಮದಿಂದ ಒಬ್ಬರು ಇನ್ನೊಬ್ಬರ ಜೀವನ ವಿಧಾನ ಮತ್ತು ಸಂಸ್ಕೃತಿಗಳನ್ನರಿತು, ಅನುಭವಗಳನ್ನು ಹಂಚಿಕೊಂಡು, ನಮ್ಮ ದೇಶದ ಮತ್ತು ಜಗತ್ತಿನ ಪುರಾತನ ಗ್ರಂಥಗಳಲ್ಲಿ ಪ್ರಣೀತವಾದ ಮತ್ತು ಆಧುನಿಕ ಯುಗದಲ್ಲಿ ಆದಿಕವಿ ಪಂಪ ಮತ್ತು ವಿಶ್ವಕವಿ ಕುವೆಂಪುರವರಂತಹ ಕನ್ನಡ ಕವಿಗಳಿಂದ ಪ್ರಚಲಿತವಾದ**"ವಿಶ್ವಮಾನವತೆ"**ಯ ಭಾವದ ನಿಜಾನುಭವವನ್ನು ಪಡೆದು ಕೃತಾರ್ಥರಾಗುವಂತೆ ಆಹ್ವಾನಿಸಲಾಗುವುದು. ಈ **'ಸಂಸ್ಕೃತಿ ಕುಂಭ'** ಕಾರ್ಯಕ್ರಮವನ್ನು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ



ಕಾಲಾ–ಅಝರ್ ಜ್ವರ – ಯು–ಎನ್–ಬ್ರಹ್ಮಚಾರಿ

ಶ್ರೀಕ್ಷೇತ್ರ ಬಂಗಾರಮಕ್ಕಿಯ ಸಿಲೆಕ್ಟ್ ಫೌಂಡೇಶನ್(ರಿ.) ಆಯೋಜಿಸುತ್ತಿದೆ. ಸಂಸ್ಕೃತಿ ಕುಂಭವು ಈ ಕೆಳಗಿನ ವಿವಿಧ ರೀತಿಯ ಕಾರ್ಯಕ್ರಮಗಳ ಮೂಲಕ ಸರ್ವಸಮಾವೇಶೀ ವಿಶ್ವ ಮಾನವತಾ ಸಂಸ್ಕೃತಿಯನ್ನು ಪ್ರತಿಬಿಂಬಿಸಲಿದೆ.

ಈ ಬಾರಿಯ ಸಂಸ್ಕೃತಿ ಕುಂಭವು ಅಂತರಾಷ್ಟ್ರೀಯ ಮಟ್ಟದ ಅಪರೂಪದ, ವೈವಿಧ್ಯಮಯ ಕಾರ್ಯಕ್ರಮಗಳನ್ನು ಈ ಕೆಳಗಿನಂತೆ ಆಯೋಜಿಸಿದೆ:

- ಆಧ್ಯಾತ್ಮಿಕ ಸಾಧನಾ/ಆರಾಧನಾ ವೈವಿಧ್ಯ.
- ಸಮ್ಮೇಲನಗಳು/ಅಧಿವೇಶನಗಳು.
- ಸ್ವಾನುಭವ ಶಿಬಿರ.
- ಕ್ರಯ ವಿಕ್ರಯ.
- ಆತಿಥ್ಯ.
- ಸನ್ಮಾನ/ಪುರಸ್ಕಾರ.
- ಸಂಗೀತ, ನೃತ್ಯ, ನಾಟಕ, ಕಲಾ ಪ್ರತಿಭಾ ಪ್ರದರ್ಶನ.
- ಕೌಶಲ್ಯ/ವಸ್ತು ಪ್ರದರ್ಶನ.
- ತರಬೇತಿ ಹಾಗೂ ಪ್ರಶಿಕ್ಷಣ.
- ಅಭಿಯಾನ.
- ಸೇವಾ ಸಾಧನ.
- ಶರಾವತಿ ಕುಂಭ

**ಹಿನ್ನೆಲೆ:**

ಮಲೆನಾಡು ಎಂಬುದರ ಶಬ್ದಾರ್ಥ ಸುಂದರ ಪರಿಸರಗಳನ್ನೊಳಗೊಂಡ ಕಾಡುಗಳ ನಾಡು. ಜನ ಬಳಕೆಯಲ್ಲಿ ಅದು ಕರ್ನಾಟಕದಲ್ಲಿ ಹಬ್ಬಿರುವ ನಿತ್ಯಹರಿದ್ವರ್ಣದ ಕಾಡುಗಳಿಂದ ತುಂಬಿದ ಸಹ್ಯಾದ್ರಿ ಪರ್ವತಶ್ರೇಣಿಯ ವಿಶಾಲ ಭೂಭಾಗದ ಹೆಸರು. ಈ ಮಲೆನಾಡು ವರ್ಷದ ಎಲ್ಲಾ ಋತುಗಳಲ್ಲಿಯೂ ಜಗತ್ತಿನೆಲ್ಲೆಡೆಯಿಂದ ಅಪಾರ ಸಂಖ್ಯೆಯ ಪ್ರವಾಸಿಗರನ್ನು ಮತ್ತು ತೀರ್ಥಯಾತ್ರಿಗಳನ್ನು ತನ್ನೆಡೆಗೆ ಸೆಳೆಯುತ್ತಿರುತ್ತದೆ. ಇಲ್ಲಿ ಸುಂದರ ಕಣಿವೆಗಳು ಮತ್ತು ಜಲಪಾತಗಳನ್ನು ನಿರ್ಮಿಸುತ್ತಾ ನಿರಂತರವಾಗಿ ಹರಿಯುತ್ತಿರುವ ನದಿ ತೊರೆಗಳನ್ನು ತನ್ನೊಡಲಲ್ಲಿ ಧರಿಸಿಕೊಂಡು, ಬಹು ವಿಧದ ಮರ, ಚರ, ಪಶು, ಪಕ್ಷಿಗಳನ್ನೊಳಗೊಂಡ ಜೀವ ವೈವಿಧ್ಯದಿಂದ ಶ್ರೀಮಂತವಾಗಿರುವ ಅರಣ್ಯಗಳ ಪರಿಸರದ ಸೌಂದರ್ಯ ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತದೆ. ಪುರಾತನ ಪುಣ್ಯ ಕ್ಷೇತ್ರಗಳು, ಮಠ ಮಂದಿರಗಳು, ತೀರ್ಥಸ್ನಾನಗಳು ಇಲ್ಲಿಯ ಜೀವಾಳ. ಹಾಗಾಗಿಯೇ ನಿತ್ಯಜೀವನದ ಒತ್ತಡಗಳಿಂದ ನೊಂದಿರುವವರು ಪರಿಹಾರವನ್ನರಸುತ್ತಾ ಇಲ್ಲಿಗೆ ಬರುತ್ತಿದ್ದಾರೆ. **ಕಾಳು ಮೆಣಸಿನ ರಾಣಿ**ಯೆಂದು ಐತಿಹಾಸಿಕವಾಗಿ ಪ್ರಸಿದ್ಧವಾದ ಚೆನ್ನಭೈರಾದೇವಿಯ ರಾಜಧಾನಿಯಾಗಿದ್ದ ಮಲೆನಾಡಿನ ಹೃದಯಭಾಗ ಗೇರುಸೊಪ್ಪ ಬಂಗಾರಮಕ್ಕಿಯ ಶ್ರೀವೀರಾಂಜನೇಯನ ಶ್ರೀಕ್ಷೇತ್ರಕ್ಕೆ ಸಾವಿರಾರು ಜನರು ನಿರಂತರವಾಗಿ ಇಲ್ಲಿಗೆ ಬಂದು ಹೋಗುತ್ತಿದ್ದರೂ ಅವರೆಲ್ಲಾ ಈ ಪ್ರದೇಶದ ಜನರ ಭವ್ಯ ಸಾಂಸ್ಕೃತಿಕ, ಪರಂಪರೆಗಳ ಅರಿವು ಹೊಂದದೆ ಹಿಂದಿರುಗುತ್ತಿರುವುದನ್ನು ಶ್ರೀಕ್ಷೇತ್ರದ ಧರ್ಮಾಧಿಕಾರಿ, ದಾರ್ಶನಿಕ, ಪೂಜನೀಯ ಶ್ರೀ ಮಾರುತಿ ಗುರೂಜಿಯವರು ಮನಗಂಡರು. ಇಲ್ಲಿನ ಪರಂಪರೆಯೆಂಬುದು ಇಲ್ಲಿ ವಾಸಿಸುವ ವಿವಿಧ ಸಮುದಾಯಗಳ ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳನ್ನು ಬಿಂಬಿಸುವ ಬಹುವಿಧದ ಕಲೆ ಮತ್ತು ಕೌಶಲ್ಯಗಳ, ಅಂದಾಜಿಗೆ ಎಟುಕದ, ಅಮೂಲ್ಯ ನಿಧಿಯಾಗಿದೆ. ಈ ಪ್ರದೇಶದಲ್ಲಿ 30ಕ್ಕಿಂತಲೂ ಹೆಚ್ಚು ಪಾರಂಪರಿಕ ಸಮುದಾಯದವರು ವಾಸಿಸುತ್ತಿದ್ದಾರೆ. ಅವರೊಳಗೇ ಒಬ್ಬರು ಇನ್ನೊಬ್ಬರ ಸಂಸ್ಕೃತಿ ಮತು ಜೀವನ ವಿಧಾನಗಳ ಬಗೆಗೆ ಅನಭಿಜ್ಞರೇ ಆಗಿದ್ದಾರೆ. ಶ್ರೀಗುರೂಜಿಯವರು ಈ ವಿವಿಧ ಸಮುದಾಯಗಳ ಜನರು ಪರಸ್ಪರರ ಸಂಸ್ಕೃತಿಯನ್ನರಿಯಲು ಅನುಕೂಲವಾಗುವಂತೆ, ಜೊತೆ ಜೊತೆಯಲ್ಲಿಯೇ ಅವರ ಕಲಾ ಪ್ರತಿಭೆ, ಪ್ರೌಢಿಮೆಗಳನ್ನು ಹೊರನಾಡಿನ ಜನರೆದುರು ತೆರೆದಿಟ್ಟು, ಸಾಂಸ್ಕೃತಿಕ ವಿನಿಮಯದ ಮೂಲಕ ಮಾನವೀಯ ಭ್ರಾತೃತ್ವದ ಬಂಧನವನ್ನು ಬಲಪಡಿಸುವ ಪ್ರಕ್ರಿಯೆಗೆ ಚಾಲನೆ ನೀಡುವ ಮೊದಲ ಹೆಜ್ಜೆಯಾಗಿ 2008ರಲ್ಲಿ**"ಮಲೆನಾಡ ಉತ್ಸವ"**ದ ರೂಪದಲ್ಲಿ ತಮ್ಮ ಬಯಕೆಗೊಂದು ಮೂರ್ತ ರೂಪ ನೀಡಿದರು.

ಅಂದಿನಿಂದ ಇಂದಿನವರೆಗೆ ಮಲೆನಾಡ ಮಧ್ಯದಲ್ಲಿ, ಜೋಗದಲ್ಲಿ 830 ಅಡಿಗಳಷ್ಟು ಎತ್ತರದಿಂದ ಕೆಳಗೆ ಧುಮುಕಿ ಗಾಂಭೀರ್ಯತೆಯಿಂದ ಪ್ರವಹಿಸುತ್ತಿರುವ ಪವಿತ್ರ ಶರಾವತಿ ನದಿ ತಟದ ಗೇರುಸೊಪ್ಪೆಯ ಬಂಗಾರಮಕ್ಕಿ ಶ್ರೀ ವೀರಾಂಜನೇಯನ ಕ್ಷೇತ್ರದಲ್ಲಿ ಎರಡು ವರ್ಷಗಳಿಗೊಮ್ಮೆ ಸಾಂಸ್ಕೃತಿಕ ಮಹೋತ್ಸವದ ರೂಪದಲ್ಲಿ ನಡೆದು ಬರುತ್ತಿತ್ತು "ಮಲೆನಾಡ ಉತ್ಸವ".2014ರಿಂದ ಈ ಉತ್ಸವವನ್ನು ವಾರ್ಷಿಕವಾಗಿ ಆಚರಿಸಲಾಗುತ್ತಿದೆ.

ಈ ಅವಧಿಯಲ್ಲಿ ಹೆಚ್ಚು ಹೆಚ್ಚು ಪ್ರದೇಶಗಳ ಹೆಚ್ಚು ಹೆಚ್ಚು ಸಮುದಾಯಗಳ ವಿವಿಧ ಕಲಾ ಕೌಶಲ್ಯಗಳನ್ನು ಪ್ರದರ್ಶಿಸುವ ವೇದಿಕೆಯೊಂದಿಗೆ ಮತ್ತು ವಸ್ತು ಪ್ರದರ್ಶನ ಮಳಿಗೆಗಳ ಮೂಲಕ ವಿವಿಧ ಸಂಸ್ಕೃತಿಯನ್ನೂ ಮಲೆನಾಡು ಉತ್ಸವದ ವ್ಯಾಪ್ತಿಯ ವಿಸ್ತಾರವಾಗಿದೆ. ನಶಿಸಿ ಹೋಗುತ್ತಿರುವ, ವಿನಾಶದ ಅಂಚಿನಲ್ಲಿರುವ ಕಲಾ ಕೌಶಲ್ಯಗಳ ಪ್ರಕಾರಗಳನ್ನು ಉಳಿಸಿ ಬೆಳೆಸುವ ಸಂಕಲ್ಪ ಮಾಡಿದ್ದಾರೆ. ಮಲೆನಾಡ ಉತ್ಸವ ಕೇವಲ ನೃತ್ಯ, ನಾಟಕ, ಸಂಗೀತ, ಸೀಮಿತ ಮನೋರಂಜನೆಯ ವೈಭವಾಚರಣೆ ಮಾತ್ರವೇ ಅಲ್ಲ. ಅದು ಜನಸಮುದಾಯಗಳ ಸಾಮುದಾಯಿಕ ಜೀವನ ಮತ್ತು ಸಂಸ್ಕೃತಿಗಳ, ದಾರ್ಶನಿಕ, ಸೌಂದರ್ಯಾನುಭವ, ಕಲಾರಸಿಕತನ, ವೈಜ್ಞಾನಿಕ ಮತ್ತು ತಾಂತ್ರಿಕ ಆಯಾಮಗಳನ್ನು ಪ್ರದರ್ಶಿಸುವ ಸಂಸ್ಕೃತಿಯ ಬಹುಮುಖಗಳನ್ನೊಳಗೊಂಡ ಸರ್ವಸಮಾವೇಶೀ ಸಾಂಸ್ಕೃತಿಕ ಮಲೆನಾಡ ಉತ್ಸವವಾಗಿ ಹೊರಹೊಮ್ಮಿದೆ. ಮಲೆನಾಡ ಉತ್ಸವದ ಸಂದರ್ಶಕರಿಗೂ ಮಲೆನಾಡ ಉತ್ಸವ ಕೇವಲ ನೋಡಿ ಆನಂದಿಸಿ ಹಿಂದಿರುಗುವ ಉತ್ಸವವಾಗಿರದೆ, ಉತ್ಸವದ ಅವಧಿಯಲ್ಲಿ ಅಲ್ಲಿ ನಡೆಯುವ ಕಾರ್ಯಕ್ರಮ ಮತ್ತು ಪ್ರಶಿಕ್ಷಣಗಳಲ್ಲಿ ಸ್ವತಃ ಭಾಗವಹಿಸಿ ಇನ್ನೊಂದು ಜನರ ಸಂಸ್ಕೃತಿ, ಕಲೆ, ಕೌಶಲ್ಯಗಳನ್ನು ಕಲಿಯುವ ಒಂದು ಅವಕಾಶವೂ ಆಗಿದೆ.

ಈ ಉತ್ಸವದ ವೈಶಿಷ್ಟ್ಯಪೂರ್ಣ ಅಂಶವೆಂದರೆ ವಿವಿಧ ಕ್ಷೇತ್ರಗಳಲ್ಲಿ ವಿಜಯಿಯಾದವರಿಗೆ ಸಿಗುವ ಪುರಸ್ಕಾರಗಳಲ್ಲದೆ ವಿವಿಧ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸುವ ಪ್ರತಿಯೊಬ್ಬರಿಗೂ ಅಲ್ಲಿಯೇ ವ್ಯಕ್ತಿಗತವಾಗಿ ದೊರಕುವ ಮನ್ನಣೆ ಸಹಿತ ಸ್ಮರಣಿಕೆಗಳು. 2014ರಲ್ಲಿ 2000 ಕಲಾವಿದರನ್ನು ಈ ರೀತಿಯಾಗಿ ಸನ್ಮಾನಿಸಲಾಗಿತ್ತು. ಇದಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಎಲೆಮರೆಯ ಕಾಯಾಗಿ ದುಡಿದು ಔನ್ನತ್ಯ ಸಾಧಿಸಿದ ಮಹನೀಯರಿಗಾಗಿ **ಶ್ರೀ ವೀರಾಂಜನೇಯ ಸುಜ್ಞಾನಶ್ರೀ, ಶ್ರೀ ವೀರಾಂಜನೇಯ ಸೃಜನಶ್ರೀ ಮತ್ತು ಶ್ರೀ ವೀರಾಂಜನೇಯ ಜನಪದಶ್ರೀ** ಎಂಬ ಮೂರು ತೆರನಾದ ಪುರಸ್ಕಾರಗಳನ್ನು ನೀಡಲಾಗುತ್ತಿದೆ. ಹಿಂದಿನ ಮಲೆನಾಡು ಉತ್ಸವಗಳ ಸಂದರ್ಭದಲ್ಲಿ ಇಲ್ಲಿಗೆ ಬಂದ ಲಕ್ಷಾಂತರ ಜನರು ಇಲ್ಲಿನ ಕಾರ್ಯಕ್ರಮಗಳು ಮತ್ತು ಪ್ರದರ್ಶನ ನೀಡುವ ಆನಂದದೊಂದಿಗೆ ಊರಿಗೆ ಹಿಂತಿರುಗುವಾಗ ತಮ್ಮೊಂದಿಗೆ ಒಯ್ಯುವ ಇನ್ನೊಂದು ವಿಷಯ ಇಲ್ಲಿ ಅವರಿಗೆ ದೊರಕಿದ ಸರಳ ಸಾತ್ವಿಕ ಪ್ರಸಾದ ಭೋಜನ ಮತ್ತು ಆವಾಸ ವ್ಯವಸ್ಥೆಯೂ ಸೇರಿದಂತೆ ಆತ್ಮೀಯ ಆದರಾತಿಥ್ಯ

ಇದೀಗ ಮಲೆನಾಡ ಉತ್ಸವವು ಮುಂದಿನ ಹಂತಕ್ಕೆ ಜಿಗಿದು ವಿಸ್ತಾರಗೊಂಡು **"ಸಂಸ್ಕೃತಿ ಕುಂಭ ಮಲೆನಾಡ ಉತ್ಸವ– 2016"** ಎಂಬ ಹೆಸರಲ್ಲಿ ಆಚರಿಸಲ್ಪಡುವುದಿದ್ದು ಅದು ಗುರೂಜಿಯವರ ವೈಶ್ವಿಕ ದರ್ಶನವನ್ನು ಬಿಂಬಿಸುತ್ತದೆ. ಮೇಲಿನ ಪರಿಕಲ್ಪನಾತ್ಮಕ ಹಿನ್ನೆಲೆ ಮತ್ತು ದರ್ಶನದೊಂದಿಗೆ **"ಸಂಸ್ಕೃತಿ ಕುಂಭ"** ಮಲೆನಾಡ ಉತ್ಸವ 2016ರ ಸಂದರ್ಭದಲ್ಲಿ ಪ್ರಸ್ತುತ ಪಡಿಸಲಾಗುತ್ತಿದೆ.

**ನಿವೇದನೆ:**

**ಈ ಜಾಗತಿಕ ಸಾಂಸ್ಕೃತಿಕ ಮಹಾಸಮ್ಮೇಳನದಲ್ಲಿ ಪಾಲ್ಗೊಳ್ಳಲು ಇಚ್ಚಿಸುವ ವಿವಿಧ ಜಾನಪದ ಕಲಾ ತಂಡಗಳು ತಮ್ಮ ತಂಡದ ಮಾಹಿತಿ, ತಾವು ಪ್ರದರ್ಶಿಸಲಿಚ್ಚಿಸುವ ಕಲಾ ಪ್ರಕಾರದ ವಿಡಿಯೋ ತುಣುಕನ್ನು ಸಿ.ಡಿ ಅಥವಾ ವಾಟ್ಸಾಪ್ ಮೂಲಕ, ದಿನಾಂಕ 15–02–2016ರ ಒಳಗಾಗಿ ನೋಂದಾಯಿಸಲು ಈ ಮೂಲಕ ಕೋರಲಾಗಿದೆ.**

ಈ ಸಂಸ್ಕೃತಿ ಕುಂಭದಲ್ಲಿ ಪಾಲ್ಗೊಳ್ಳುವುದಲ್ಲದೆ ಇತರರನ್ನೂ ಪಾಲ್ಗೊಳ್ಳಲು ಪ್ರೇರೇಪಿಸಬೇಕು. ತನು, ಮನ, ಧನದಿಂದ ಸೇವೆ ಸಲ್ಲಿಸುವ ಸುವರ್ಣಾವಕಾಶ ಇದಾಗಿದೆ. ಪ್ರತಿನಿತ್ಯ ದೇಶ–ವಿದೇಶಗಳಿಂದ ಸಾವಿರಾರು ಜನ ಪಾಲ್ಗೊಳ್ಳುವುದರಿಂದ ಎಲ್ಲರ ಪಾಲ್ಗೊಳ್ಳುವಿಕೆ ಅತ್ಯಗತ್ಯವಾಗಿದೆ. ಎಲ್ಲರೂ ಎಲ್ಲ ರೀತಿಯಲ್ಲಿ ಸೇವೆ ಸಲ್ಲಿಸಲು ಅವಕಾಶವಿರುವ ಉತ್ಸವ ಇದಾಗಿದೆ.

ಜಗತ್ತಿನಲ್ಲಿಯೇ ಮೊದಲ ಬಾರಿಗೆ ಎಲ್ಲ ಪ್ರಕಾರಗಳ ಕಾರ್ಯಕ್ರಮ ಆಯೋಜಿಸಲ್ಪಟ್ಟ ಮಹತ್ವದ **'ಸಂಸ್ಕೃತಿ ಕುಂಭ'** ದಲ್ಲಿ ತಪ್ಪದೇ ಭಾಗವಹಿಸಿರಿ.

ದಾನಿಗಳಾಗಿ, ವಿವಿಧ ಕಾರ್ಯಕ್ರಮ ಪ್ರಾಯೋಜಕರಾಗಿ ವಿಶ್ವಮಾನವತೆಯ ಸಹಭಾಗಿತ್ವ ಪಡೆದು ಧನ್ಯರಾಗಿರಿ.

ಈ ಕಾರ್ಯಕ್ರಮದಲ್ಲಿ ನೀವೂ ಭಾಗವಹಿಸುವದಾದರೆ ಸಂಪರ್ಕಿಸಿ: 9448800330, 9448358040, 9483484236

**ಸರ್ವರಿಗೂ ಆದರದ ಸ್ವಾಗತ**

- samskruthikumbha@gmail.com
- www.samskruthikumbha.com
- https://twitter.com/Bangaramakki
- https://www.youtube.com/channel/UC1XcgKi5xRtqbybFoSZWoUQ
- www.celectfoundation.org
- https://www.facebook.com/Hemapura/

**ಶ್ರೀ ವಿಶ್ವವೀರಾಂಜನೇಯ ಮಹಾಸಂಸ್ಥಾನಮ್, ಹೇಮಪುರ ಮಹಾಪೀಠಮ್**

ಶ್ರೀಕ್ಷೇತ್ರ ಬಂಗಾರಮಕ್ಕಿ, ಪೋಸ್ಟ್ ಗೇರಸೊಪ್ಪಾ, ತಾಲ್ಲೂಕು ಹೊನ್ನಾವರ–581384, ಉತ್ತರಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ

******************************************************************************************

**ಭಾವತ್ರಯ:**–1)ಜ್ಞಾನವಿಕೃತಿಭಾವ, ವರ್ತಮಾನವಿಕೃತಿಭಾವ, ಮೋಹನವಿಕೃತಿಭಾವ, 2)ಪ್ರಕಾಶ, ಪ್ರವರ್ತನ, ಮೋಹನಭಾವ (ವೀ.ಶೈ.ಪು.)
**ಮಂಡಲತ್ರಯ:**– ಸೂರ್ಯ, ಚಂದ್ರ, ಅಗ್ನಿಮಂಡಲಗಳು.
**ಮಧುರತ್ರಯ:**– ಆಜ್ಯಂ ಕ್ಷೀರಂ ಮಧು ತಥಾ ಮಧುರತ್ರಯಮುಚ್ಯತೇ (ಕಾತ್ಯಾಯನ)
**ಮಂತ್ರಮಲತ್ರಯ:**– ಮಾನಸಮಲ, ಮಾಯಾಮಲ ಮತ್ತು ಪಾರುಷ್ಯಮಲ.
**ಮಲತ್ರಯ (ಬಂಧಗಳು):**– ಅಣವಮಲ (ಪಿತೃಮಾತೃಸುತರೆಂಬುದು) ಮಾಯಾಮಲ (ಉನ್ನತಗೋತ್ರವೆಂಬುದು) ಕಾರ್ಮಿಣ (ದ್ರವ್ಯಸಂಪತ್ತೆಂಬುದು–ವೀ.ಶೈ.)
**ಮಹಾವಾತತ್ರಯ:**– ಘನೋದಧಿ, ಘನಾನಿಲ, ತನುವಾತ. (ಜೈ)
**ಮಾರ್ಗತ್ರಯ (ತ್ರಿವತ್ಮಾ):**– ಪಿತೃಯಾನ, ಧೂಮಯಾನ, ದೇವಯಾನ ಮಾರ್ಗಗಳು.
**ಮುಕ್ತಿಸಾಧನಗಳು ತ್ರಿವಿಧ:**– 1)ಕರ್ಮ, ಸನ್ಯಾಸ, ಜ್ಞಾನ ದರ್ಶನಗಳು. 2)ಭಕ್ತಿ, ಧ್ಯಾವ ಮತ್ತು ತ್ಯಾಗ. (ದ್ವೈ)



ಜೀವ ದೋಣಿ (ಲೈಫ್ ಬೋಟ್) – ಹೆನ್ರಿ ಗ್ರೆಥ್‌ಹೆಡ್

## ಪದಬಂಧ–7

– ವೆಂಕಟೇಶ್ ಖಂಡಿಕಾ.

| | | | | | | |
|---|---|---|---|---|---|---|
| 1 | 2 | ■ | ■ | 3 | ■ | ■ |
| ■ | 4 | | | | ■ | ■ |
| 5 | | ■ | ■ | 6 | | 7 |
| | ■ | 8 | ■ | | ■ | |
| 9 | | | ■ | ■ | 10 | |
| ■ | ■ | 11 | | | | ■ |
| ■ | ■ | | ■ | ■ | 12 | |

**ಎಡದಿಂದ ಬಲಕ್ಕೆ :–**

1. ಅದರ ಸೌಂದರ್ಯ–2.
4. ಯುದ್ಧದ ನಗಾರಿ–4.
5. ರಕ್ತ ಬರುವಂತೆ ಆದ ಪೆಟ್ಟು ಇಲ್ಲಿ ತಿರುಗಿದೆ–2.
6. ಇದು ಸಮುದ್ರ–3.
9. ನ್ಯಾಯಾಲಯದಲ್ಲಿ ವಾದ ಮಾಡುವವ ಇಲ್ಲಿ ತಿರುಗಿದ್ದಾನೆ–3.
10. ನಿರ್ದಿಷ್ಟವಾದ ಬೆಲೆ–2.
11. ಅಮವಾಸ್ಯೆಯಂದು ರಜ ಮಾಡಿದ ಚಂದ್ರ–4.
12. ಕುಸ್ತಿಪಟು–2.

**ಮೇಲಿಂದ ಕೆಳಕ್ಕೆ :–**

2. ಮುಸಲ್ಮಾನರ ಪೂಜಾಸ್ಥಳ–3.
3. ಗುರುಗಳ ಜೊತೆಗೇ ಇರುವ ಜನ–4.
5. ಬಿದಿರಿನ ಅಕ್ಕಿ–3.
7. ತಿರಸ್ಕಾರ ಮಾಡಿ ಕೂಗುವುದು–3.
8. ಒಂಭತ್ತು ಬಗೆಯ ಹರಳು–4.
10. ಹತ್ತರಲ್ಲಿ ಒಂದು ಭಾಗ–3.

**(ಉತ್ತರ ಮುಂದಿನ ಸಂಚಿಕೆಯಲ್ಲಿ)**

**ಪದಬಂಧ–6ರ ಉತ್ತರ:– ಎಡದಿಂದ ಬಲಕ್ಕೆ:–** 1) ಪುತ್ರಕಾಮೇಷ್ಠಿ, 3) ಸುಗ್ರೀವ, 6) ಹಿಮ, 7) ಕಲರವ, 10) ಮಣ್ಣಿನಮಗ, 13) ಪತಂಜಲಿ, 16) ಹೋಮ, 17) ಸತ್ಸಂಗ, 18) ರಾಮಾವತಾರ.

**ಮೇಲಿಂದಕೆಳಕ್ಕೆ:–** 1) ಪುರೋಹಿತ, 2) ಮೇನಕೆ, 4) ವಧೂವರ, 5) ಮೂಕ, 8) ಲವಂಗ, 9) ದಾನವ, 10) ಮನುಜ, 11) ಉಪವಾಸ, 12) ಹೇಮಪುರ, 14) ಲಿಪಿ, 15) ಮಾಣಿಕ್ಯ (ಕ್ಯಣಿಮಾ).

**ಮೂರ್ತಿತ್ರಯರು (ತ್ರಿಮೂರ್ತಿಗಳು):–** ಬ್ರಹ್ಮ, ವಿಷ್ಣು, ಮಹೇಶ್ವರ. ಸ್ಥಾನಗಳು:– ಸತ್ಯಲೋಕ, ವೈಕುಂಠ, ಕೈಲಾಸ. ಕಾರ್ಯಗಳು:– ಸೃಷ್ಟಿ, ಸ್ಥಿತಿ (ಪಾಲನೆ) ವಿಲಯ, ವಾಹನಗಳು:–ಹಂಸ, ಗರುಡ, ವೃಷಭ.

**ಯಜ್ಞಭೇದಗಳು:–** ಪಾಕಯಜ್ಞ, ಹವಿರ್ಯಜ್ಞ ಸೋಮಯಜ್ಞಗಳು.

**ಯೋಗತ್ರಯ (ಪುಣ್ಯಮಾರ್ಗಗಳು):–** ಭಕ್ತಿಯೋಗ, ಕರ್ಮಯೋಗ, ಜ್ಞಾನ–ಯೋಗ (ಭಾಗ)

**ಕ್ರಿಯಾಯೋಗಗಳು:–** ತಪಃ ಸ್ವಾಧ್ಯಾಯೇಶ್ವರ ಪ್ರಣಿಧಾನಾನಿ ಕ್ರಿಯಾಯೋಗಃ (ಯೋ.ಶಾ)

**ಯಾನತ್ರಯ:–**ಕಂಠೀ, ಡಯನ, ಪ್ರವಹಣ ಯಾನಗಳು.

**ರಘಟಾತ್ರಯ:–** ಮಂದಾನಿಲ, ಲಲಿತ, ಉತ್ಸಾಹ ರಗಳೆಗಳು.

**ರತ್ನತ್ರಯ:–** 1)ಶಿವ, ಶಕ್ತಿ, ಬಿಂದು. 2)ಬುದ್ಧ, ಸಂಘ, ಧರ್ಮ. (ಬೌ. ಧ) 3) ಸಮ್ಯಗ್ದರ್ಶನ–ತತ್ವಗಳಲ್ಲಿ ಶ್ರದ್ಧೆ, ಸಮ್ಯಕ್ಚಾ–ರಿತ್ರ್ಯ–ಪವಿತ್ರಾಚರಣೆ. ಸಮ್ಯಕ್‌ಜ್ಞಾನ–ಮತಿಶ್ರುತಾದಿ ಜ್ಞಾನನಿಷ್ಠೆ (ಜೈ.ಧ)



**ಶ್ರೀಕ್ಷೇತ್ರ ಬಂಗಾರಮಕ್ಕಿಯ ಧರ್ಮಾಧಿಕಾರಿಗಳಾದ**

## ಪ.ಪೂ. ಶ್ರೀ ಶ್ರೀ ಮಾರುತಿ ಗುರೂಜಿಯವರ

**ಜನ್ಮದಿನ (ಫೆಬ್ರವರಿ ೧೨)ದ ಶುಭಸಂದರ್ಭದಲ್ಲಿ**

**ಹಾರ್ದಿಕ ಶುಭಾಶಯಗಳು**

**"ಚಿರಂಜೀವ ಶರದಃ ಯಾವದಿಚ್ಛಸಿ"**

**ಶ್ರೀಕ್ಷೇತ್ರದ ಸಮಸ್ತ ಸಿಬ್ಬಂದಿ ವರ್ಗದವರು,**

**ಭಕ್ತವೃಂದದವರು ಹಾಗೂ 'ಹೇಮಪುರ'ದ ಓದುಗರ ಪರವಾಗಿ.**

**–ಸಂಪಾದಕರು.**



ಲಿಫ್ಟ್ (ಎಲಿವೇಟರ್ಸ್) – ಓಟಿಸ್